ಮತ್ತೆ ಶ್ರೀ ಜಿ ಎಸ್ ಬಸವರಾಜುರವರು ಕೋರಂ ಬಗ್ಗೆಯೇ ಮಾತನಾಡಿದಾಗ ಹಿರಿಯ ಸದಸ್ಯರಾದ ಶ್ರೀ ಕೆ ವಿ ಬೆಟ್ಟಯ್ಯರವರು ಸಭೆಯನ್ನು ಶಾಂತವಾಗಿ ನಡೆಸಿ ಎಂದಾಗ ಮತ್ತೊಬ್ಬ ಸದಸ್ಯರಾದ ಶ್ರೀ ಟಿ ಎಂ ಚಂದ್ರಶೇಖರ್‌ರವರು ಮಾತನಾಡಿ ಸದಸ್ಯರು ಯಾರೂ ಗೊಂದಲ ಮಾಡಿಕೊಳ್ಳಬೇಡಿ, ಕಾನೂನಿನಲ್ಲಿರುವಂತೆ ಸಭೆ ನಡೆಸಿ ಎಂದು ಹೇಳಿ ವೇದಿಕೆ ಮೇಲಿರುವ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಇತರ ಸದಸ್ಯರಿಗೆ ಅಭಿನಂದಿಸುತ್ತಾ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಬ್ಯಾಂಕಿನ ನೂತನ ಅಧ್ಯಕ್ಷರಾಗಿದ್ದಾರೆ ಇಲ್ಲಿವರೆಗೂ ನಮ್ಮ ಬ್ಯಾಂಕು ಕರ್ನಾಟಕದಲ್ಲಿಯೇ ಹೆಸರುವಾಸಿಯಾಗಿದ್ದು, ಬಹಳ ಚೆನ್ನಾಗಿ ನಡೆಯುತ್ತಿದ್ದು ಯಾವುದೇ ತೊಂದರೆಯಿರುವುದಿಲ್ಲ. ಎ.ಕೆ.ಎ ಪಾರ್ಶ್ವನಾಥ್‌ರವರ ಕಾಲದಿಂದಲೂ ವರ್ತಕರಿಗೆ ಸಾಲ ನೀಡಿ ವ್ಯವಹಾರದ ಹಣ ಬಂದಾಗ ತೆಗೆದುಕೊಂಡು ಬ್ಯಾಂಕನ್ನು ಬೆಳೆಸಿದ್ದು, ಈಗ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹೊಸದಾಗಿ ಅಧಿಕಾರ ಸ್ವೀಕರಿಸಿದ್ದು, ಅವರ ಮೇಲ್ವಿಚಾರಣೆಯಲ್ಲಿ ಮುಂದಿನ ಸಭೆಯಲ್ಲಿ ನಿಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತಾರೆ, ಯಾರೇ ಮಾತನಾಡಬೇಕಾದರೂ ಮೈಕ್ ಮುಂದೆ ಬಂದು ನಿಧಾನವಾಗಿ ಮಾತನಾಡಿ, ಸುಮ್ಮನೆ ಕಿರುಚಾಡಬೇಡಿ ಎಂದು ಸಭೆಗೆ ತಿಳಿಸಿದರು. ಮತ್ತೊಬ್ಬ ಸದಸ್ಯರಾದ ಶ್ರೀ ಅರುಣಾಚಲಂ ಜಿ ಎಸ್ ರವರು ಶ್ರೀ ಜಿ ಎಸ್ ಬಸವರಾಜುರವರನ್ನುದ್ದೇಶಿಸಿ ಮಾತನಾಡಿ ಯಾವುದೇ ಸದಸ್ಯರು ಹಾಜರಾತಿ ರಿಜಿಸ್ಟರ್‌ಗೆ ಸಹಿ ಹಾಕಿರುವವರು ಯಾರೂ ಮನೆಯಲ್ಲಿ ಕುಳಿತು ಸಹಿ ಮಾಡಲು ಸಾಧ್ಯವಿಲ್ಲ, ಇಲ್ಲಿಗೆ ಬಂದು ಸಹಿ ಮಾಡಿದ್ದಾರೆ, ಸಹಿ ಮಾಡಿರುವ ಎಲ್ಲರನ್ನೂ ಬಲವಂತವಾಗಿ ಕುತ್ತಿಗೆ ಹಿಡಿದು ಸಭೆಯಲ್ಲಿ ತಂದು ಕೂರಿಸಲು ಸಾಧ್ಯವಿಲ್ಲ. ಇಂತಹ ಸಣ್ಣ ಪುಟ್ಟ ವಿಷಯಗಳನ್ನು ದೊಡ್ಡದು ಮಾಡದೆ ಚರ್ಚಿಸಲು ಮುಖ್ಯವಾಗಿರುವ ದೊಡ್ಡ ವಿಷಯಗಳ ಬಗ್ಗೆ ಮಾತನಾಡಿ, ಬೇರೆಯವರಿಗೂ ಮಾತನಾಡಲು ಅನುವು ಮಾಡಿಕೊಡಿ, ಸಭೆಯನ್ನು ಮುಂದುವರೆಸಲು ಅವಕಾಶ ಮಾಡಿಕೊಡಿ ಎಂದು ತಿಳಿಸಿದರು. ಅದಕ್ಕೆ ಶ್ರೀ ಜಿ ಎಸ್ ಬಸವರಾಜುರವರು ವೇದಿಕೆಯ ಮೇಲಿರುವ ಆಡಳಿತ ಮಂಡಳಿಯವರನ್ನುದ್ದೇಶಿಸಿ ನೀವು ವೇದಿಕೆ ಮೇಲಿರುವವರು ನನಗೆ ಉತ್ತರ ಕೊಡಬೇಕು, ಕೆಳಗಡೆ ಇರುವ ಸದಸ್ಯರು ಪ್ರಶ್ನೆ ಕೇಳಬೇಕು. ದಯವಿಟ್ಟು ಸಭೆಗೆ ಗೌರವ ಕೊಡಿ ಇದು ಅಧ್ಯಕ್ಷರ ಜವಾಬ್ದಾರಿ, ಈಗ ನಾನು ಕೇಳುತ್ತಿರುವುದು ಸಭೆಯಲ್ಲಿ 1500 ಜನ ಸದಸ್ಯರಿದ್ದರೆ ಸಭೆಯನ್ನು ಆರಂಭ ಮಾಡಿ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ 1952 ಹಾಜರಾತಿ ಇದೆ, ಇದರಿಂದ ಸಭೆ ಪ್ರಾರಂಭವಾಗುತ್ತಿದೆ ಎಂದು ಹೇಳಿದಾಗ ಶ್ರೀ ಜಿ ಎಸ್ ಬಸವರಾಜುರವರು ಹಾಜರಾತಿ ರಿಜಿಸ್ಟರ್‌ನಲ್ಲಿರುವ ಸಹಿ ಪ್ರಕಾರ ಸಭೆ ಪ್ರಾರಂಭಿಸುತ್ತಿದ್ದೇವೆ ಎಂದು ಅದೇ ರೀತಿ ರೆಸಲ್ಯೂಷನ್ ಬರೆಸಿ ಎಂದು ಹೇಳಿದಾಗ ಅಧ್ಯಕ್ಷರು ಮಾತನಾಡಿ ಸಭೆಯಲ್ಲಿ ಕೋರಂ ಆಗಿದ್ದು ಅದೇ ರೀತಿ ರೆಸಲ್ಯೂಷನ್ ಬರೆಯಲಾಗಿದೆ, ನೀವು ಬೇಕಾದರೆ ಪರೀಕ್ಷಿಸಿ ಕುಳಿತುಕೊಳ್ಳಿ. ಸಭೆ ಪ್ರಾರಂಭ ಮಾಡಲು ಬಿಡಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಮಾತನಾಡಿ ನಿಮ್ಮೊಬ್ಬರಿಗೆ ಸಭೆ ನಡೆಸುತ್ತಿರುವುದಲ್ಲ, ಇಷ್ಟು ಜನ ಹಾಜರಾಗಿದ್ದಾರೆ, ಯಾರು ಪ್ರಶ್ನೆ ಕೇಳಲು ಕೈ ಎತ್ತುತ್ತಾರೋ ಅವರಿಗೆ ಮೈಕ್ ಕೊಡಿ ಎಂದು ಹೇಳಿದರು. ಆಗ ಶ್ರೀ ಜಿ ಎಸ್ ಬಸವರಾಜುರವರು ಮತ್ತೆ ಸಭೆ ನಡೆಸಲು ವಿರೋಧ ಮಾಡಿದಾಗ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಮಾತನಾಡಿ ಮೊದಲು ಸಭೆಗೆ ಗೌರವ ಕೊಡಿ. ಸಭೆಯಲ್ಲಿ ಎಲ್ಲರೂ ಸಭೆ ಮುಂದುವರೆಸಲು ಒಪ್ಪಿರುವಾಗ ನೀವು ಸಹ ಸಭೆಗೆ ಗೌರವ ಕೊಡಿ, ಸಭೆ ಮುಂದುವರೆಸಲು ಅವಕಾಶ ಮಾಡಿಕೊಡಿ ಎಂದು ಹೇಳಿದರು ಮತ್ತು ಸಭೆ ಮುಂದುವರೆಸಲು ವೇದಿಕೆ ಮೇಲಿರುವವರಿಗೆ ತಿಳಿಸಿದರು.

ಸದಸ್ಯರಾದ ಶ್ರೀ ವೆಂಕಟಾಚಲಂ ರವರು ಮಾತನಾಡಿ ಒಬ್ಬೊಬ್ಬರಾಗಿ ಬಂದು ಮೈಕಿನಲ್ಲಿ ಮಾತನಾಡಿ, ಒಬ್ಬರು ಮಾತನಾಡುವಾಗ ಮತ್ತೊಬ್ಬರು ಮಾತನಾಡಬೇಡಿ ಮತ್ತು ಒಂದೇ ವಿಷಯದ ಬಗ್ಗೆ ಮಾತನಾಡಿ ಸಮಯ ವ್ಯರ್ಥ ಮಾಡಬೇಡಿ ಎಂದು ತಿಳಿಸಿ, ಸಭೆಯನ್ನು ಮುಂದುವರೆಸುವಂತೆ ಕೋರಿದರು.

**2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ :** ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಸ್ ಬಿ ಪ್ರಭುರವರು ಈ ವರ್ಷದಲ್ಲಿ ದೈವಾಧೀನರಾದ ಬ್ಯಾಂಕಿನ ಸದಸ್ಯ ಬಂಧುಗಳ ಹೆಸರನ್ನು ಸಭೆಗೆ ಪ್ರಸ್ತುತ ಪಡಿಸುತ್ತಾ ನಮ್ಮ ಬ್ಯಾಂಕಿನ ಸಂಸ್ಥಾಪಕ ನಿರ್ದೇಶಕರಾಗಿದ್ದ ಹಾಗೂ ಹಾಲಿ ಅಧ್ಯಕ್ಷರಾಗಿದ್ದ ನಮ್ಮೆಲ್ಲರ ನೆಚ್ಚಿನ ಸಹಕಾರ ರತ್ನ, ನುಡಿದಂತೆ ನಡೆದ ಧೀಮಂತ ನಾಯಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಹಾಗೂ ಸಹಕಾರ ಕ್ಷೇತ್ರಕ್ಕೆ ಅವಿಸ್ಮರಣೀಯ ಸೇವೆ ನೀಡಿದ ಅಪರೂಪದ ಆದರ್ಶ ವ್ಯಕ್ತಿ ಹಾಗೂ ಅಭಿವೃದ್ಧಿಯ ಹರಿಕಾರ ಎಂದೆ ಪ್ರಖ್ಯಾತಿ ಹೊಂದಿದ್ದ ಶ್ರೀಯುತ ಎನ್ ಆರ್ ಜಗದೀಶ್ ರವರು ದಿನಾಂಕ 22-03-2023 ರ ಯುಗಾದಿ ಹಬ್ಬದಂದು ದೈವಾಧೀನರಾಗಿರುತ್ತಾರೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ನಾವೆಲ್ಲರೂ ಭಗವಂತನಲ್ಲಿ ಪ್ರಾರ್ಥಿಸೋಣ ಹಾಗೂ ಈ ವರ್ಷದಲ್ಲಿ ದೈವಾಧೀನರಾದ ಬ್ಯಾಂಕಿನ ಸದಸ್ಯ ಬಂಧುಗಳ ಆತ್ಮಕ್ಕೆ ಶಾಂತಿಕೋರಿ ಅವರುಗಳಿಗೆ ಶ್ರದ್ಧಾಂಜಲಿ ಅರ್ಪಿಸೋಣ ಎಂದು ತಿಳಿಸುತ್ತಾ ಈ ವರ್ಷದಲ್ಲಿ ದೈವಾಧೀನರಾದ ಸದಸ್ಯರುಗಳ ಹೆಸರನ್ನು ಸಭೆಗೆ ಪ್ರಸ್ತುತ ಪಡಿಸಿದರು ಮತ್ತು ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಸಭೆಯಲ್ಲಿ ಎಲ್ಲರೂ ಒಂದು ನಿಮಿಷ ಮೌನ ಆಚರಿಸಿ ಗೌರವ ಶ್ರದ್ಧಾಂಜಲಿ ಅರ್ಪಿಸಿದರು.

**ದೈವಾಧೀನರಾದ ಸದಸ್ಯರುಗಳೆಂದರೆ:-**

ಶ್ರೀಮತಿ/ಶ್ರೀ

1.ಚಂದ್ರಲತಾ, 2.ಚಿಕ್ಕವೀರಮ್ಮ ವಿ, 3.ಪರಮೇಶ್ ಎಂ ಆರ್, 4.ಗಂಗಯ್ಯ ಕೆ ಹೆಚ್, 5. ಬಶೀರ್ ಅಹಮದ್ ಎಂ, 6.ಶ್ರೀನಿವಾಸ್ ಟಿ ವಿ, 7.ಪ್ರಮೀಳ, 8.ಗಂಗಮ್ಮ, 9.ರಾಮಚಂದ್ರ ಕೆ, 10.ಪುಟ್ಟತಾಯಮ್ಮ, 11.ಸ್ವರ್ಣಲತಾ, 12.ಪ್ರೇಮ ಕುಮಾರಿ ಟಿ, 13.ಶ್ರೀವತ್ಸಲ ಎನ್ ಆರ್, 14.ಲೀಲಾವತಿ ಟಿ ಆರ್, 15.ಜಯಲಕ್ಷ್ಮೀ ಹೆಚ್ ಸಿ, 16.ಬಾಬು ಎಂ ಎನ್, 17.ಚಿಕ್ಕಣ್ಣ ಜಿ, 18.ವಿಜಯಮ್ಮ, 19.ರವಿಶಂಕರ್ ಟಿ ಡಿ, 20.ಸೌಭಾಗ್ಯಮ್ಮ, 21.ಬ್ರಹ್ಮಕುಮಾರ್ ಎಂ ಎನ್, 22.ಚಂದ್ರಶೇಖರಯ್ಯ ಎ ಎಸ್, 23.ಸುಭದ್ರ ಟಿ ಎ, 24.ನಂಜುಂಡಯ್ಯ ಎಸ್, 25.ಚಿದಾನಂದ ಗುಪ್ತ ಕೆ ಎ, 26.ಅಶೋಕ್ ಕುಮಾರ್ ಟಿ ಪಿ, 27.ಅನಸೂಯ, 28.ಅಬ್ದುಲ್ ಘಾನಿ, 29.ನಾಗೇಂದ್ರ ಪ್ರಸಾದ್ ಎಸ್ ಎ, 30.ಮಲ್ಲಿಕ ಎನ್ ಬಿ, 31.ರಾಜಲಕ್ಷ್ಮಿ ಎನ್ ವಿ, 32.ನಟರಾಜು ಜಿ ಆರ್, 33.ಶಿವಕುಮಾರ್ ಎಂ

ಎಸ್, 34.ಉಮಾದೇವಿ ಜಿ ಸಿ, 35.ಫಯಾಜ್ ಅಹಮದ್ ಶರೀಫ್, 36.ರಂಗಮ್ಮ ಸಿ, 37.ವಾಸುದೇವ ಶೆಟ್ಟಿ ಎನ್ ವಿ, 38.ಚಿತ್ತರಂಜನ್ ಡಿ ಎಂ, 39.ರಾಜೀವ್ ಜೈನ್ ಟಿ ಎಸ್, 40.ಚಿದಾನಂದ ಟಿ ಎಸ್, 41.ತಮ್ಮಣ್ಣಪ್ಪ ಆರ್ 42.ನಾಗರತ್ನಮ್ಮ ಬಿ 43.ಅಬ್ದುಲ್ ಮಜೀದ್ 44.ಅರವಿಂದ್ ಕೆ ವಿ 45.ಉಮಾ ಪಿ ತಾಳಿಕೋಟಿ ಮಠ 46.ಪ್ರಮೀಳ ಬಿ ಸಿ, 47.ಡಾ. ನಾಗರಾಜ ಎಲ್, 48.ಅಶ್ವತ್ಥನಾರಾಯಣರಾವ್ ಎಂ ಎಸ್, 49.ನಾಗರತ್ನ ಜಯಕುಮಾರ್ ಬಿ ಜೆ, 50.ಜಯನಂಜುಂಡ ಶೆಟ್ಟಿ, 51.ಶಂಕರ್ ಕೆ ಎನ್, 52.ಹೊನ್ನಪ್ಪ ಎಸ್, 53.ಶ್ರೀನಿವಾಸ ಮೂರ್ತಿ ಟಿ, 54.ಗೀತಾ ಸ್ವಾಮಿ, 55.ರೇಣುಕಪ್ಪ ಪಿ, 56.ನಂದಕುಮಾರ್, 57.ಶಾರದಾಂಬ ಎನ್, 58.ಶಿವಲಿಂಗ ಶೆಟ್ಟಿ ಟಿ, 59.ಗೌರಮ್ಮ, 60.ತಾರಾದೇವಿ, 61.ಕೊಟ್ರಪ್ಪ ಎಂ, 62.ಜಗದಾಂಬ, 63.ಉಮಾ, 64.ಚಂದ್ರಶೇಖರಪ್ಪ ಟಿ ಎ, 65.ಈಶ್ವರಯ್ಯ ಕೆ, 66.ದಿವಾಕರ್ ಬಿ ಎಸ್, 67.ನಟರಾಜ್ ಎ ಎನ್, 68.ಲೀಲಾ ಸಿ ಎನ್, 69.ಸರಸ್ವತಮ್ಮ ಎನ್ ಎಸ್, 70.ರಂಗಸ್ವಾಮಿ ಆರ್, 71.ನರಹರಿ, 72.ಅಶ್ವಥರಾಂ ಎನ್, 73.ನಿರೂಪ್ ಕುಮಾರ್ ಬಿ ಜೆ, 74.ಬಸವರಾಜು ಜಿ, 75.ಜಯರತ್ನ, 76.ಸುಮನ್ ಎಸ್ ಎಂ, 77.ನರಸಿಂಹ ಮೂರ್ತಿ ಎಸ್, 78.ಮುದ್ದಪ್ಪ ಜಿ ಎನ್, 79.ಮೋಹನ್ ಎ, 80.ಕುಮಾರಸ್ವಾಮಿ ಡಿ ಎಸ್, 81.ಕಮಲಮ್ಮ, 82.ಸತ್ಯನಾರಾಯಣ ಶೆಟ್ಟಿ ಎಂ ಸಿ, 83.ಪರಮೇಶ್ವರ ಕೆ ಬಿ, 84.ಸೈಯದ್ ರಿಯಾಸತ್ ಅಲಿ ಎಂ, 85.ಎನ್ ಆರ್ ಜಗದೀಶ್, 86.ನಾಗರಾಜ್ ಎಸ್, 87.ಸೀತಮ್ಮ ಬಿ ಎಸ್, 88.ಗಾಯತ್ರಿ ದೇವಿ ಬಿ, 89.ರಾಮಯ್ಯ ಶೆಟ್ಟಿ ಕೆ, 90.ನಾಗರಾಜ ಡಿ ಪಿ, 91.ಮುಕ್ತಾಂಬ ವಿ, 92.ರೇಣುಕ ಪ್ರಸಾದ್ ಟಿ ಎಸ್, 93.ಮುತ್ತು ಕೃಷ್ಣನ್ ವಿ, 94.ರೇಣುಕಪ್ಪ ಸಿ, 95.ಸುರೇಶ್ ಹೆಚ್ ಸಿ, 96.ವಿಜಯ ಕೆ ವಿ, 97.ಗುಣ ವರ್ಮ ಎಸ್ ಜಿ, 98.ನಾರಾಯಣ ರೆಡ್ಡಿ ಕೆ ಎಸ್, 99.ಪರಶಿವ ಮೂರ್ತಿ, 100.ದೇವೇಂದ್ರ ಶೆಟ್ಟಿ, 101.ಮಹಾಬಲೇಶ್ವರ ಟಿ ಎಂ, 102.ಅನ್ನಪೂರ್ಣಮ್ಮ ಟಿ ಸಿ, 103.ನಾಗರತ್ನ ಬಿ ಪಿ.

ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ರಶ್ಮಿ ಕಿರಣ್ ರವರು ಕಾರ್ಯಕ್ರಮದಲ್ಲಿ ಮಾತನಾಡುತ್ತಾ, coming together is beginning, staying together is progress and working together is success and today we are here to make a success and to celeberate our 60th General Body meeting. Let's have a healthy conversation to improve the already massive grown organization ಎಂದು ತಿಳಿಸುತ್ತಾ ಸಭೆಯನ್ನು ಮುಂದುವರೆಸಿದರು.

**3. ಸ್ವಾಗತ:** ಸಭಾಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು 60ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಭೆಯಲ್ಲಿ ಭಾಗವಹಿಸಿರುವ ಎಲ್ಲಾ ಸಹಕಾರ ಬಂಧುಗಳಿಗೂ ಬ್ಯಾಂಕಿನ ಪರವಾಗಿ ತಮ್ಮ ಹೃತ್ಪೂರ್ವಕ ನಮಸ್ಕಾರಗಳನ್ನು ತಿಳಿಸುತ್ತಾ, ವೈಯಕ್ತಿಕವಾಗಿ ಸಹಕಾರ ಕ್ಷೇತ್ರದಲ್ಲಿ ನನ್ನ ಗುರುಗಳಾಗಿದ್ದ ಎನ್ ಆರ್ ಜಗದೀಶಾರಾಧ್ಯರು ನನಗೆ ತಂದೆಯ ಸಮಾನರಾಗಿದ್ದು, ಅವರ ಮಾರ್ಗದರ್ಶನದಲ್ಲಿ ಈದಿನ ನಾವು ಬ್ಯಾಂಕನ್ನು ಮುನ್ನಡೆಸುತ್ತಿದ್ದೇವೆ. ಹೊಸದಾಗಿ ನಾನು ಅಧಿಕಾರ ವಹಿಸಿಕೊಂಡಿರುವುದರಿಂದ ತಮ್ಮೆಲ್ಲರ ಸಹಕಾರ ಅತ್ಯಮೂಲ್ಯವಾಗಿರುತ್ತದೆ. ಎಲ್ಲ ಸಹಕಾರ ಬಂಧುಗಳು ನಮ್ಮ ಬ್ಯಾಂಕಿನ ಎಲ್ಲಾ ಷೇರುದಾರರು ನಮಗೆ ಸಂಪೂರ್ಣ ಸಹಕಾರ ಕೊಡುತ್ತೀರೆಂದು ನಂಬಿದ್ದೇನೆ. 1963 ರಿಂದ ಇದುವರೆಗೂ ನಮ್ಮ ಬ್ಯಾಂಕು ಎನ್ ಆರ್ ಜಗದೀಶ್ ಆರಾಧ್ಯರವರ ನೇತೃತ್ವದಲ್ಲಿ ನಡೆದಿದೆ. ಅವರ ನೇತೃತ್ವದಲ್ಲಿ ನಾವು ಈ ಮಟ್ಟದಲ್ಲಿ ಈ ದಿನ ಸಭೆಯನ್ನು ಕರೆದಿದ್ದೇವೆ. ನಾವು ರಾಜ್ಯ ಮಟ್ಟದಲ್ಲಿ ಬೆಳೆದಿದ್ದೇವೆ. ನಮ್ಮ ಬ್ಯಾಂಕು ಅಧ್ಯಕ್ಷರ ನೇತೃತ್ವದಲ್ಲಿ ರೂ.2100 ಕೋಟಿಗಳಿಗೂ ಹೆಚ್ಚು ಠೇವಣಿಯನ್ನು ಹೊಂದಿತ್ತು. ಇದಕ್ಕೆಲ್ಲಾ ನಿಮ್ಮೆಲ್ಲರ ಸಹಕಾರ ಇತ್ತು ಹಾಗೂ ಈಗಲೂ ಇದೆ ಮತ್ತು ರಾಜ್ಯದಲ್ಲೇ ಲಾಭದಲ್ಲಿ ಮೊಟ್ಟಮೊದಲ ಬ್ಯಾಂಕು ಎಂಬ ಹೆಗ್ಗಳಿಕೆ ಕೂಡ ನಮ್ಮ ಅಧ್ಯಕ್ಷರ ನೇತೃತ್ವದಲ್ಲಿ ಬಂದಿರುವುದಾಗಿ ಹೇಳಲು ಹೆಮ್ಮೆಯಾಗುತ್ತದೆ ಎಂದು ತಿಳಿಸುತ್ತಾ, ಆತ್ಮೀಯ ಸಹಕಾರಿ ಬಂಧುಗಳೇ ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳ ಪರವಾಗಿ ಬ್ಯಾಂಕಿನ 60ನೇ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ. ಬ್ಯಾಂಕಿನ ಅಭಿವೃದ್ಧಿಗಾಗಿ ನಿರಂತರ ಬೆಂಬಲ ನೀಡುತ್ತಿರುವ ಪ್ರತಿಯೊಬ್ಬರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ತಮಗೆಲ್ಲರಿಗೂ ತಿಳಿದಿರುವಂತೆ ಸಹಕಾರ ಕ್ಷೇತ್ರದ ದಿಗ್ಗಜ, ಸಹಕಾರ ರತ್ನ ಮತ್ತು ನಮ್ಮ ಬ್ಯಾಂಕಿನ ಸಂಸ್ಥಾಪಕ ನಿರ್ದೇಶಕರಾಗಿದ್ದ ಚಾಲೂ ಅಧ್ಯಕ್ಷರಾಗಿದ್ದ ಶ್ರೀ ಎನ್ ಆರ್ ಜಗದೀಶ್‌ರವರು ತಾರೀಖು 22-03-2023ರ ಯುಗಾದಿ ಹಬ್ಬದಂದು ದೈವಾಧೀನರಾಗಿದ್ದಾರೆ. ಅವರ ನಿಧನ ನಮ್ಮ ಬ್ಯಾಂಕಿಗೆ ಮಾತ್ರವಲ್ಲದೇ ಸಹಕಾರಿ ಕ್ಷೇತ್ರಕ್ಕೂ ಬಹಳಷ್ಟು ನಷ್ಟವನ್ನುಂಟು ಮಾಡಿದೆ. ನಮ್ಮ ಬ್ಯಾಂಕಿನ ಪ್ರಗತಿಗೆ ಅವರ ಕೊಡುಗೆ ಅವಿಸ್ಮರಣೀಯ. ಅವರ ಕೆಚ್ಚೆದೆಯ ಮತ್ತು ಸಮಯೋಚಿತ ನಿರ್ಧಾರಗಳು ನಮ್ಮ ಬ್ಯಾಂಕು ಕರ್ನಾಟಕದ ಅತ್ಯುತ್ತಮ ಸಹಕಾರ ಬ್ಯಾಂಕುಗಳಲ್ಲಿ ಒಂದಾಗಲು ಸಹಾಯ ಮಾಡಿದೆ. ಅವರ ಉದಾತ್ತ ಆತ್ಮಕ್ಕೆ ಗೌರವವನ್ನು ಸೂಚಿಸುವ ಸಲುವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದೇನೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿ ನೀಡಲೆಂದು ದೇವರಲ್ಲಿ ನಮ್ಮ ಬ್ಯಾಂಕಿನ ಪರವಾಗಿ ಪ್ರಾರ್ಥಿಸುತ್ತೇನೆ ಎಂದು ತಿಳಿಸಿ ದೇಶದ ಆರ್ಥಿಕ ಸನ್ನಿವೇಶ, ಕರ್ನಾಟಕ ಆರ್ಥಿಕ ಸನ್ನಿವೇಶ, ಸಹಕಾರಿ ಬ್ಯಾಂಕುಗಳ ಮೇಲೆ ಇದರ ಪ್ರಭಾವ, ಆರ್.ಬಿ.ಐ ನಿಂದ ಘೋಷಿಸಲಾದ ವಿತ್ತೀಯ ಹಾಗೂ ದ್ರವ್ಯತೆಯ ಕ್ರಮಗಳು, ಆರ್ಥಿಕ ವರ್ಷದಲ್ಲಿ ನಮ್ಮ ಬ್ಯಾಂಕಿನ ವ್ಯವಹಾರದ ವಿಮರ್ಶೆ ಎಲ್ಲವನ್ನು ವಿವರವಾಗಿ ತಿಳಿಸಿ ಬ್ಯಾಂಕಿಂಗ್ ಉದ್ಯಮದಲ್ಲಿನ ಬಿಕ್ಕಟ್ಟಿನ ಸಂದರ್ಭದಲ್ಲಿ ಮುಂದುವರಿದ ಬೆಂಬಲ ನೀಡಿದ್ದಕ್ಕಾಗಿ ನಾನು ನಿಮಗೆಲ್ಲರಿಗೂ ಕೃತಜ್ಞನಾಗಿದ್ದೇನೆ, ನಿಮ್ಮ ನಂಬಿಕೆಯು ಕಾರ್ಯಕಾರಿ ಮಂಡಳಿ ಮತ್ತು ಸಿಬ್ಬಂದಿಗಳಿಗೆ ಕಷ್ಟಪಟ್ಟು ಕೆಲಸ ಮಾಡಲು ಮತ್ತು ಬ್ಯಾಂಕಿನ ಪ್ರಗತಿಯನ್ನು ಮರಳಿ ತರಲು ನೈತಿಕ ಪ್ರೋತ್ಸಾಹವನ್ನು ನೀಡುತ್ತದೆ ಎಂದು ತಿಳಿಸುತ್ತಾ, ನಮ್ಮ ಬ್ಯಾಂಕಿನ ಎಲ್ಲಾ ಷೇರುದಾರರಿಗೆ, ಗ್ರಾಹಕರಿಗೆ, ವ್ಯವಹಾರ ಪಾಲುದಾರರಿಗೆ ನಮ್ಮ ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ ಸಮಾಜಕ್ಕೆ ಸದಾ ಗುಣಾತ್ಮಕ ಸೇವೆ ನೀಡಲು ಕಟಿಬದ್ಧವಾಗಿದೆ ಎಂದು ಭರವಸೆ ಕೊಟ್ಟು ಎಲ್ಲಾ ಸದಸ್ಯರಿಗೂ ಸಭೆಗೆ ಸ್ವಾಗತ ಕೋರಿದರು.

**4. 60ನೇ ವರ್ಷದ ಸಾಮಾನ್ಯ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ಅಂಗೀಕರಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ ಎಸ್ ಜಿನೇಶ್ ಜೈನ್‌ರವರು ಎಲ್ಲಾ ಸಹಕಾರಿ ಬಂಧುಗಳಿಗೆ ನಮಸ್ಕರಿಸುತ್ತಾ 60ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ಸಭೆಯ ಅಂಗೀಕಾರಕ್ಕಾಗಿ ಮಂಡಿಸಿದರು.
ಮಹಾಸಭೆಯ ಸದಸ್ಯರೆಲ್ಲರೂ ಸರ್ವಾನುಮತದಿಂದ ಆಹ್ವಾನ ಪತ್ರಿಕೆಯನ್ನು ಅಂಗೀಕರಿಸಿದರು.

**5. 59 ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಯನ್ನು ಓದಿ ಧೃಡೀಕರಿಸುವುದು:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಕೆ ಸಿ ಶ್ರೀಕಂಠಯ್ಯರವರು ಬ್ಯಾಂಕಿನ 2021-22 ನೇ ಸಾಲಿನ ಬ್ಯಾಂಕಿನ 59 ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಯನ್ನು 2022-23 ನೇ ಸಾಲಿನ ಆಡಳಿತ ವರದಿಯಲ್ಲಿ ಪುಟ ಸಂಖ್ಯೆ 31 ರಿಂದ 59 ರವರೆಗೆ ಮುದ್ರಿಸಿದ್ದು, ಆಡಳಿತ ವರದಿಯನ್ನು ಬ್ಯಾಂಕಿನಲ್ಲಿ ಈಗಾಗಲೇ ಸದಸ್ಯರಿಗೆ ವಿತರಿಸಿದ್ದು ಮತ್ತು ಬ್ಯಾಂಕಿನ ಜಾಲತಾಣದಲ್ಲಿಯೂ ಸಹ ಪ್ರಕಟಿಸಿದ್ದು ತಾವೆಲ್ಲರೂ ಈಗಾಗಲೇ ಆಡಳಿತ ವರದಿಯನ್ನು ಓದಿರುವಿರೆಂದು ಭಾವಿಸುತ್ತಾ 59ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸಲು ಸಭೆಗೆ ಮಂಡಿಸಿದರು.

ಮಹಾಸಭೆಯ ಸದಸ್ಯರೆಲ್ಲರೂ 59ನೇ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಯನ್ನು ಧೃಡೀಕರಿಸಿ ಅಂಗೀಕರಿಸಿದರು.

ಶ್ರೀ ಜಿ ಎಸ್ ಬಸವರಾಜು ರವರು ಮಾತನಾಡಿ ಆಡಳಿತ ವರದಿಯನ್ನು ಸಭೆಗೆ ಮಂಡಿಸಿದ್ದೀರಿ ಆಡಳಿತ ವರದಿಯ ಪುಟ ಸಂಖ್ಯೆ 1 ರಲ್ಲಿ ಪ್ರಶ್ನೆ ಕೇಳುತ್ತಾ ಆಡಳಿತ ವರದಿಯನ್ನು ಮಂಡಿಸಿದ ನಿರ್ದೇಶಕರು ಉತ್ತರ ಕೊಡಬೇಕೆಂದು ಮನವಿ ಮಾಡಿದರು.

ಪುಟ ಸಂಖ್ಯೆ 1 ರಲ್ಲಿ ನಿಮ್ಮ ಬ್ಯಾಂಕು ಎಂದು ಮುದ್ರಿಸಿದ್ದು, ನಿಮ್ಮ ಬ್ಯಾಂಕು ಎಂದರೆ ಯಾವುದು, ದಯವಿಟ್ಟು ನಿಮ್ಮ ಬ್ಯಾಂಕು ಎನ್ನುವುದನ್ನು ನಮ್ಮ ಬ್ಯಾಂಕು ಎಂದು ತಿದ್ದುಪಡಿ ಮಾಡಿಕೊಳ್ಳಬೇಕು ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಸದಸ್ಯರುಗಳಿಂದಲೇ ನಾವು ನಿರ್ದೇಶಕರು, ಆದ್ದರಿಂದ ಸದಸ್ಯರುಗಳನ್ನುದ್ದೇಶಿಸಿ ನಿಮ್ಮ ಬ್ಯಾಂಕು ಎಂದು ಮುದ್ರಿಸಿರುವುದು ಎಂದು ಹೇಳಿದಾಗ, ಶ್ರೀ ಜಿ ಎಸ್ ಬಸವರಾಜು ರವರು ಸದಸ್ಯರುಗಳಿಂದ ನೀವು, ಆದರೂ ಇದನ್ನು ನಮ್ಮ ಬ್ಯಾಂಕು ಎಂದು ಮಾಡಿ ಎಂದಾಗ ಸಭೆಯಲ್ಲಿ ಒಪ್ಪಿಕೊಂಡರು. ಶ್ರೀ ಜಿ ಎಸ್ ಬಸವರಾಜುರವರು ತಮ್ಮ ಮಾತನ್ನು ಮುಂದುವರೆಸುತ್ತಾ ಆಡಳಿತ ವರದಿಯಲ್ಲಿ ತೆರಿಗೆ ಮತ್ತು ಅವಕಾಶಗಳಿಗೆ ಮುನ್ನ ರೂ. 32.89 ಕೋಟಿ ಲಾಭ ಗಳಿಸಿದೆ ಎಂದು ಮುದ್ರಿಸಿದ್ದು, ಮಾರ್ಚ್ ವರ್ಷಾಂತ್ಯದ ನಂತರ ಪತ್ರಿಕಾ ಪ್ರಕಟಣೆಯಲ್ಲಿ ರೂ.33.00 ಕೋಟಿಗೂ ಮೀರಿ ಲಾಭ ಗಳಿಸಿರುವುದಾಗಿ ಪ್ರಕಟಣೆ ನೀಡಿರುತ್ತೀರಿ. ರೂ.11.00 ಲಕ್ಷ ಕಡಿಮೆ ಇರುವುದನ್ನು ಸದಸ್ಯರಿಗೆ ಮತ್ತು ಇಡೀ ರಾಜ್ಯದ ಜನತೆಗೆ ದಾರಿ ತಪ್ಪಿಸಲು ನೀವು ರೂ.33.00 ಕೋಟಿಗೂ ಮೀರಿ ಲಾಭ ಗಳಿಸಿರುವುದಾಗಿ ಪ್ರಕಟಣೆ ನೀಡಿರುತ್ತೀರಿ, ರೂ. 11.00 ಲಕ್ಷಗಳನ್ನು ಯಾರು ಕೊಡುತ್ತಾರೆ, ನಿಮ್ಮ ಜೇಬಿನಿಂದ ಕೊಡುತ್ತೀರ ಎಂದು ಕೇಳಿದಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಮಾತನಾಡಿ ಪತ್ರಿಕೆಯಲ್ಲಿ ಪ್ರಕಟಣೆಯಲ್ಲಿ "ಲೆಕ್ಕಪರಿಶೋಧನೆಗೆ ಮುನ್ನ" ಎಂದು ತಿಳಿಸಿಯೇ ಪ್ರಕಟಣೆ ನೀಡಿರುವುದು ಎಂದು ಹೇಳಿದಾಗ ಮತ್ತೆ ಶ್ರೀ ಜಿ ಎಸ್ ಬಸವರಾಜುರವರು ನೀವು ಪ್ರಕಟಣೆ ನೀಡಿರುವುದು ಮಾರ್ಚ್ ನಂತರ, ರೂ. 11.00 ಲಕ್ಷ ಕಡಿಮೆಯಿದ್ದು ರೂ. 33.00 ಕೋಟಿಗೂ ಮೀರಿ ಎಂದು ಹೇಗೆ ಪ್ರಕಟಣೆ ಕೊಡುತ್ತೀರ. ರೂ. 11.00 ಲಕ್ಷ ಕಡಿಮೆ ಇರುವುದನ್ನು ಜಾಸ್ತಿ ಎಂದು ಕೊಡಲು ಅವಕಾಶ ಇದೆಯಾ ಎಂದು ಕೇಳಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ದಯವಿಟ್ಟು ಧ್ವನಿ ಕಡಿಮೆ ಮಾಡಿ ನಿಧಾನವಾಗಿ ಪ್ರಶ್ನೆಗಳನ್ನು ಕೇಳಿ ನಾವು ಉತ್ತರಿಸುತ್ತೇವೆ ಎಂದು ಹೇಳಿ ನಾವು ಪತ್ರಿಕೆಯಲ್ಲಿ ಪ್ರಕಟಣೆ ನೀಡಿರುವುದು ಏಪ್ರಿಲ್‌ನಲ್ಲಿ, ಆಡಿಟ್ ಆಗಿರುವುದು ಜೂನ್ ತಿಂಗಳಿನಲ್ಲಿ, ನಾವು ಪ್ರಕಟಣೆ ನೀಡುವಾಗ ಲೆಕ್ಕಪರಿಶೋಧನೆಗೆ ಮುನ್ನ ಎಂದು ಸಹ ಮುದ್ರಿಸಿದ್ದು ತಾವು ದಯವಿಟ್ಟು ಗಮನಿಸಬೇಕು ಮತ್ತು ದಯವಿಟ್ಟು ಕಡಿಮೆ ಧ್ವನಿಯಲ್ಲಿ ಮಾತನಾಡಿ ಎಂದು ತಿಳಿಸಿದರು. ಆದರೆ ಸದಸ್ಯರು ಈಗಲೂ ನಿಮ್ಮ ಅನೇಕ ಶಾಖೆಗಳಲ್ಲಿ ರೂ. 33.00 ಕೋಟಿಗೂ ಮೀರಿ ಎಂಬ ಪ್ರಕಟಣೆಯನ್ನು ಹಾಕಿದ್ದೀರಿ ಎಂದಾಗ ಅಧ್ಯಕ್ಷರು ಆ ಪ್ರಕಟಣೆಯಲ್ಲಿಯೇ ಲೆಕ್ಕಪರಿಶೋಧನೆಗೆ ಮುನ್ನ ಎಂದು ಮುದ್ರಿಸಲಾಗಿದೆ ಎಂದು ತಿಳಿಸಿದರೂ ಸಹ ಲೆಕ್ಕಪರಿಶೋಧನೆಗೂ ಮುನ್ನ ರೂ. 32.89 ಕೋಟಿಗಳಷ್ಟೇ ಇದ್ದು, ನೀವು ತಪ್ಪಾಗಿ ಪ್ರಕಟಣೆ ನೀಡಿರುತ್ತೀರಿ, ತಪ್ಪಾಗಿದೆ ಅದನ್ನು ಒಪ್ಪಿಕೊಳ್ಳಿ ಎಂದು ಮತ್ತೆ ಅದನ್ನೇ ಹೇಳಿದರು. ಅದಕ್ಕೆ ಅಧ್ಯಕ್ಷರು ಕೊಟ್ಟಿರುವ ಪ್ರಕಟಣೆ ಏಪ್ರಿಲ್‌ನಲ್ಲಿ ಲೆಕ್ಕಪರಿಶೋಧನೆಗೆ ಮುನ್ನ ಆದರೆ ಲೆಕ್ಕ ಪರಿಶೋಧನೆ ನಂತರ ರೂ. 32.89 ಕೋಟಿ ಆಗಿರುತ್ತದೆ. ಇದರಲ್ಲಿ ತಪ್ಪಾಗಿರುವುದಿಲ್ಲ ಎಂದು ಹೇಳಿದರೂ ಸಹ ರೂ. 32.89 ಕೋಟಿಗಳ ಬದಲಾಗಿ ರೂ. 33.00 ಕೋಟಿ ಎಂದು ತಪ್ಪಾಗಿ ಪ್ರಕಟಣೆ ನೀಡಿರುತ್ತೀರಿ, ಅದನ್ನು ಒಪ್ಪಿಕೊಳ್ಳಿ ಎಂದಾಗ ಅಧ್ಯಕ್ಷರು ತಪ್ಪಾಗಿರುವುದಿಲ್ಲ ಎಂದು ಮತ್ತೆ ಹೇಳಿದಾಗ, ತಪ್ಪಾಗಿಲ್ಲ ಎಂದು ರೆಸಲ್ಯೂಷನ್‌ನಲ್ಲಿ ಬರೆಸಿ ಎಂದು ಹೇಳಿದರು. ಆಗ ಅಧ್ಯಕ್ಷರು ಲೆಕ್ಕಪರಿಶೋಧನೆಗೂ ಮುನ್ನ 33.00 ಕೋಟಿ ಎಂದು ಪ್ರಕಟಣೆ ನೀಡಿದ್ದು, ಲೆಕ್ಕಪರಿಶೋಧನೆ ಆದ ನಂತರ ರೂ. 32.89 ಕೋಟಿಗಳಾಗಿದ್ದು, ನೀಡಿರುವ ಪ್ರಕಟಣೆಯಲ್ಲಿ ಯಾವುದೇ ತಪ್ಪಾಗಿರುವುದಿಲ್ಲ, ಇದನ್ನು ರೆಸಲ್ಯೂಷನ್‌ನಲ್ಲೂ ಬರೆಸುತ್ತೇವೆ ಎಂದಾಗ ಸದಸ್ಯರು ನೀವು ಪ್ರಕಟಣೆಯನ್ನು ಲೆಕ್ಕ ಪರಿಶೋಧನೆಗೂ ಮುನ್ನ ಕೊಡಬೇಕಾ ಅಥವಾ ಲೆಕ್ಕಪರಿಶೋಧನೆ ನಂತರ ಕೊಡಬೇಕಾ ಎಂದು ಕೇಳಿದಾಗ ಅಧ್ಯಕ್ಷರು ಎರಡನ್ನೂ ಪ್ರಕಟಣೆ ನೀಡಿದ್ದೇವೆ. ಎಂದಾಗ ಸದಸ್ಯರು ಈ ರೀತಿ ತಪ್ಪಾಗಿ ಪ್ರಕಟಣೆ ನೀಡಿ ನಮ್ಮ ಬ್ಯಾಂಕಿನ ಗೌರವಕ್ಕೆ ಧಕ್ಕೆ ಬರುವ ರೀತಿ ಮಾಡಬೇಡಿ ಎಂದು ಮತ್ತೆ ಹೇಳಿದರು. ಅದಕ್ಕೆ ಅಧ್ಯಕ್ಷರು ನಾವು ಬ್ಯಾಂಕಿನ ಗೌರವಕ್ಕೆ ಧಕ್ಕೆ ಬರುವ ಯಾವುದೇ ತಪ್ಪನ್ನು ಮಾಡಿಲ್ಲ, ಇದನ್ನು ನೀವೊಬ್ಬರೇ ಹೇಳುತ್ತಿರುವುದು, ಬೇರೆ ಯಾರೂ ಹೇಳುತ್ತಿಲ್ಲ ಎಂದಾಗ ನಾನು ಸದಸ್ಯ, ಇಲ್ಲಿ ಒಬ್ಬರು ಇಬ್ಬರು ಎಂದು ಬರುವುದಿಲ್ಲ, ತಪ್ಪನ್ನು ತಿದ್ದಿಕೊಳ್ಳಿ ಎಂದು ಮತ್ತೆ ಅದನ್ನೇ ಹೇಳಿದರು. ಮತ್ತೊಬ್ಬ ಸದಸ್ಯರಾದ ಶ್ರೀ ಕೆ ಎಸ್ ದಯಾನಂದ್‌ರವರು ಮಾತನಾಡಿ ನೀವು ಮಾರ್ಚ್ 31 ಆದ ಮೇಲೆ ಇನ್ನೂ ಲೆಕ್ಕ ಅಡ್ಜೆಸ್ಟ್ ಮಾಡುವ ಪದ್ಧತಿಯನ್ನು ಇಟ್ಟುಕೊಂಡಿರುತ್ತೀರ ಎಂದು ಕೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ರೂ. 32.89 ಕೋಟಿ ಆದಾಯ ಬಂದಿರುವುದನ್ನು ಹೇಳುತ್ತಿಲ್ಲ. ರೂ. 11.00 ಲಕ್ಷ ಹೆಚ್ಚಿಗೆ ಹಾಕಿರುವುದನ್ನು ಮಾತ್ರ ಹೇಳುತ್ತಿದ್ದೀರ, ಅದನ್ನು ಲೆಕ್ಕಪರಿಶೋಧನೆಗೂ ಮುನ್ನ ಎಂದು ಹೇಳಿದರೂ ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದೀರ ಎಂದಾಗ ಸದಸ್ಯರು ನೀವು ರೂ. 11.00 ಲಕ್ಷ ಹೆಚ್ಚಿಗೆ ಹಾಕಿದ್ದು, ಇದನ್ನು ತಮ್ಮ ಜೇಬಿನಿಂದ ಕೊಡುತ್ತೀರ, ತಪ್ಪು ಪ್ರಕಟಣೆ ನೀಡಿರುತ್ತೀರಿ ಅದನ್ನು

ಒಪ್ಪಿಕೊಳ್ಳಿ, ಸಮರ್ಥನೆ ಮಾಡಿಕೊಳ್ಳಬೇಡಿ ಎಂದು ಮತ್ತೆ ಅದನ್ನೇ ಧ್ವನಿಯೇರಿಸಿ ಮಾತನಾಡಿದಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಸದಸ್ಯರು ದಯವಿಟ್ಟು ನಿಧಾನವಾಗಿ ಮಾತನಾಡಬೇಕೆಂದು ಕೇಳಿಕೊಂಡಾಗ ಸದಸ್ಯರು ನನ್ನ ಧ್ವನಿ ಇರುವುದೇ ಹೀಗೆ, ನಿಮಗೋಸ್ಕರ ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಪಟ್ಟು ಬಿಡದೇ ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದರಿಂದ ಸಭೆಯಲ್ಲಿ ಇತರ ಸದಸ್ಯರು ಅವರನ್ನು ನಿಲ್ಲಿಸುವಂತೆ ಹೇಳಿ ಅವರವರೇ ಮಾತನಾಡಿಕೊಂಡು ಸಭೆಯಲ್ಲಿ ಗಲಿಬಿಲಿ ಉಂಟುಮಾಡಿದರು. ಆ ಸಮಯದಲ್ಲಿ ಮತ್ತೊಬ್ಬ ಸದಸ್ಯರಾದ ಶ್ರೀ ಟಿ ಎಸ್ ನಾಗೇಶ್‌ರವರು ಮಾತನಾಡಿ ಸಭಿಕರನ್ನೆಲ್ಲ ಅವರವರ ಜಾಗದಲ್ಲಿ ಕುಳಿತುಕೊಳ್ಳಿ ಎಂದು ವಿನಂತಿಸಿ, ವೇದಿಕೆ ಮೇಲಿರುವ ಅಧ್ಯಕ್ಷರಿಗೆ ಮತ್ತು ನಿರ್ದೇಶಕ ಮಂಡಳಿಯವರಿಗೆ ಮತ್ತು ಸಭೆಯ ಎಲ್ಲ ಸದಸ್ಯರಿಗೂ ವಂದಿಸುತ್ತಾ ಸಭೆಯನ್ನುದ್ದೇಶಿಸಿ ಮಾತನಾಡಿ ಸಣ್ಣ ಪುಟ್ಟ ಲೋಪಗಳಾಗಿರಬಹುದು, ಸದಸ್ಯರೊಬ್ಬರು ಮೊದಲು ಕೋರಂ ಇಲ್ಲ ಎಂದು ವಾದಿಸಿದರು, ಸದಸ್ಯರುಗಳು ಬಂದು ಸಹಿ ಮಾಡಿ ಕೋರಂ ಆದ ನಂತರವೇ ಸಭೆಯನ್ನು ಪ್ರಾರಂಭಿಸಿದ್ದು, ಸಹಿ ಮಾಡಿದ ಎಲ್ಲರನ್ನೂ ಬಲವಂತದಿಂದ ಕೈಹಿಡಿದುಕೊಂಡು ಬಂದು ಸಭೆಯಲ್ಲಿ ಕೂರಿಸಲು ಸಾಧ್ಯವಿರುವುದಿಲ್ಲ. ಸಭೆಯಲ್ಲಿ ಕೋರಂ ಆಗಿರುವುದಾಗಿ ನಾವು ಒಪ್ಪಿದ್ದು, ಇದರಲ್ಲಿ ಯಾವುದೇ ಅನುಮಾನವಿಲ್ಲ. ತಪ್ಪು ಆಗಿರಬಹುದು, ತಪ್ಪು ಎಲ್ಲರೂ ಮಾಡುತ್ತಾರೆ. ಆಗಿರುವ ಲೋಪದೋಷಗಳನ್ನು ಕಂಡುಹಿಡಿದು ಹೇಳಿ, ಅವರು ಅದಕ್ಕೆ ತಕ್ಕ ಸಮಜಾಯಿಷಿ/ವಿವರಣೆ ಕೊಡುತ್ತಾರೆ. ರೂ. 11.00 ಲಕ್ಷ ವ್ಯತ್ಯಾಸ ನೀಡಿರುವುದಕ್ಕೆ ವಿವರಣೆ ನೀಡುತ್ತಿದ್ದಾರೆ, ಅದನ್ನು ಕೇಳಿಸಿಕೊಳ್ಳಿ ಅದನ್ನು ಬಿಟ್ಟು ಎಲ್ಲರೂ ಒಂದೇ ಬಾರಿಗೆ ಅವರವರಲ್ಲಿಯೇ ಮಾತನಾಡಿ ಸಂತೆ ಮೈದಾನದಂತೆ ಮಾಡಬೇಡಿ, ಲೋಪಗಳಾಗಿರುವುದನ್ನು ಸಭೆಯಲ್ಲಿ ನಿಧಾನವಾಗಿ ಚರ್ಚಿಸಿ, ಸಂಸ್ಥಾಪಕ ನಿರ್ದೇಶಕರು, ಹಿರಿಯ ಸಹಕಾರಿ ಚೇತನ ಶ್ರೀ ಎನ್ ಆರ್ ಜಗದೀಶ್ ರವರಿಗೆ ಗೌರವ ಕೊಟ್ಟು, ಶಾಂತವಾಗಿ ಸಭೆ ನಡೆಸಿ, ಒಬ್ಬರಿಗೊಬ್ಬರು ವೈಷಮ್ಯ ಬಿಟ್ಟು ಸಭೆ ನಡೆಸಿ, ಸುಮ್ಮನೆ ವಾದ ಮಾಡುವುದರಿಂದ ಯಾರೂ ಏನೂ ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಡಿವಿಡೆಂಡ್ ಕೊಟ್ಟಾಗ ಮಾತ್ರ ತೆಗೆದುಕೊಂಡು ಹೋಗುತ್ತೇವೆ. ಆಡಳಿತ ನಡೆಸಲು ಎಷ್ಟು ಶ್ರಮ ಇದೆ ಎಂದು ಆ ಜಾಗದಲ್ಲಿ ಕುಳಿತಿರುವವರಿಗೆ ಗೊತ್ತೇ ಹೊರತು ಬೇರೆಯವರಿಗೆ ಗೊತ್ತಾಗುವುದಿಲ್ಲ. ಇವತ್ತು ಸಾಲ ಕೊಟ್ಟು ವಸೂಲಿ ಮಾಡುವುದು ಬಹಳ ಕಷ್ಟ ಇದೆ. Nationalised bank ಬಗ್ಗೆ ತಿಳಿದುಕೊಳ್ಳಿ, ಈ ಬ್ಯಾಂಕಿನಲ್ಲಿ ಎಲ್ಲಾ ವಿಚಾರಗಳೂ ನಮಗೆ ಗೊತ್ತಾಗುವುದರಿಂದ ಈ ರೀತಿ ಕೇಳುತ್ತಿದ್ದೇವೆ. Nationalised bank ನಲ್ಲಿ ಯಾರಾದರೂ ಗಮನಿಸಿದ್ದೀರ ಅಥವಾ ಕೇಳುತ್ತೀರಾ ಎಂದು ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರನ್ನು ಉದ್ದೇಶಿಸಿ ಲೋಪಗಳು ಎಲ್ಲರಿಂದಲೂ ಆಗುತ್ತದೆ. ಅದನ್ನು ಹೇಗೆ ಸರಿಪಡಿಸಿಕೊಳ್ಳಬೇಕು, ಸ್ಪರ್ಧಾತ್ಮಕ ಯುಗದಲ್ಲಿ ಯಾವ ರೀತಿ ಮುಂದುವರೆಯಬೇಕೆಂದು ಸಲಹೆಗಳನ್ನು ಕೊಡಿ ಎಂದು ಹೇಳಿದರು. ಆಗ ಸದಸ್ಯರೊಬ್ಬರು ಮಾತನಾಡಿ ಸಭೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಆಡಳಿತ ಮಂಡಳಿಯವರು ಉತ್ತರ ಕೊಡಬೇಕೆಂದು ಹೇಳಿದಾಗ ಸದಸ್ಯರಾದ ಶ್ರೀ ಟಿ ಎಸ್ ನಾಗೇಶ್ ರವರು ಅವರು ಉತ್ತರ ಕೊಡಲೆಂದೇ ಇರುವುದು, ಉತ್ತರ ಕೊಡುವಾಗ ನೀವು ಸಮಾಧಾನದಿಂದ ಕೇಳಿಸಿಕೊಳ್ಳಿ ಕೊಡುತ್ತಾರೆ. ಕೋವಿಡ್ ಆದಾಗಿನಿಂದ ಬ್ಯಾಂಕಿಂಗ್ ಸೆಕ್ಟಾರ್‌ನಲ್ಲಿ ಬಹಳ ಹಿನ್ನಡೆಯಾಗಿದೆ. ಆಗಿರುವ ಲೋಪಗಳಿಗೆ ಸರಿಪಡಿಸಿಕೊಳ್ಳುವ ಸಲಹೆಗಳನ್ನು ಕೊಡಿ, ಅದು ಬಿಟ್ಟು ಕಾಲೆಳೆಯುವುದು ಸರಿಯಿರುವುದಿಲ್ಲ. ಕೆಲಸ ಮಾಡುವುದು ಅಲ್ಲಿ ಕುಳಿತಿರುವವರಿಗೆ ಗೊತ್ತು, ಕೆಲವರು ದುಡ್ಡು ಕಟ್ಟುತ್ತಾರೆ ಆದರೆ ಕೆಲವರು ಫ್ರಾಡ್ ಮಾಡಬೇಕೆಂದೇ ಸಾಲ ತೆಗೆದುಕೊಂಡಿರುತ್ತಾರೆ. ವಸೂಲಾತಿ ಮಾಡುವ ಕಷ್ಟ ಅಲ್ಲಿ ಕೆಲಸ ಮಾಡುತ್ತಿರುವವರಿಗೇ ಗೊತ್ತು. ದಯವಿಟ್ಟು ಶಾಂತ ರೀತಿಯಿಂದ ಒಳ್ಳೆ ಸಲಹೆಗಳನ್ನು ಕೊಡಿ ಎಂದು ಹೇಳಿದರು ನಂತರ ಸಭೆಯನ್ನುದ್ದೇಶಿಸಿಯೂ ಸಹ ಒಳ್ಳೆಯ ಸಲಹೆಗಳನ್ನು ಕೊಡಿ ಎಂದು ವಿನಂತಿಸಿದರು ಮತ್ತು ಆಡಳಿತ ಮಂಡಳಿಗೆ ಮುಂದೆ ಒಳ್ಳೆಯದಾಗಲಿ ಎಂದು ಹಾರೈಸಿದರು.

ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ಆಡಳಿತ ಮಂಡಳಿಯವರು ವೇದಿಕೆ ಮೇಲೆ ಕುಳಿತಿರುವುದು ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು, ನಾವು ಸದಸ್ಯರು ಕೆಳಗೆ ಕುಳಿತಿರುವುದು ನಿಮ್ಮನ್ನು ಪ್ರಶ್ನೆಗಳನ್ನು ಕೇಳಲು, ವರ್ಷದ 365 ದಿವಸಗಳಲ್ಲಿ 364 ದಿವಸ ನಿಮ್ಮದೇ, ನೀವು ಏನು ಮಾಡಿರುತ್ತೀರಿ ಎಂದು ನಮಗೆ ಗೊತ್ತಾಗುವುದಿಲ್ಲ. ಸದಸ್ಯರಿಗೆ ಅವಕಾಶ ಸಿಗುವುದು 1 ದಿನ ಮಾತ್ರ, ಆ ದಿನದಲ್ಲಿ ಯಾವುದೇ ಸದಸ್ಯರು ಏನೇ ಪ್ರಶ್ನೆ ಕೇಳಿದರೂ ನೀವು ಉತ್ತರ ಕೊಡಿ, ಕೆಳಗಡೆ ಇರುವ ಸದಸ್ಯರಿಗೆ ಉತ್ತರ ಕೊಡಲು ಅವಕಾಶ ಕೊಟ್ಟರೆ ನಿಮ್ಮತನ ಉಳಿಯುವುದಿಲ್ಲ. ಆಡಳಿತ ಮಂಡಳಿಯ ಗೌರವ ಹಾಳಾಗುತ್ತದೆ ದಯವಿಟ್ಟು ಸಭೆಯ ಗಂಭೀರತೆಯನ್ನು ಗಮನಿಸಿ ಸದಸ್ಯರು ಕೇಳುವ ಪ್ರಶ್ನೆಗಳಿಗೆ ನೀವು ಉತ್ತರ ಕೊಡಿ ಎಂದು ಹೇಳಿದರು. ಆಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ಮಾರ್ಚ್ ವರ್ಷಾಂತ್ಯದ ನಂತರ 45 ದಿನಗಳಲ್ಲಿ ಲೆಕ್ಕಪರಿಶೋಧನೆಗೂ ಮುನ್ನ ಬ್ಯಾಂಕಿನ ಲಾಭ ನಷ್ಟದ ವಿವರಗಳನ್ನು ಪ್ರಕಟಿಸಬೇಕಾಗಿದ್ದು, 90 ದಿನಗಳನ್ನು ಲೆಕ್ಕಪರಿಶೋಧನೆ ನಂತರ ನಿಜವಾದ ಅಂಕಿ ಅಂಶಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿದ್ದು, ಅದರಂತೆ ಪ್ರಕಟಿಸಲಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ವೇದಿಕೆ ಮೇಲೆ ಇರುವಂತಹ ಆಡಳಿತ ಮಂಡಳಿಯವರಿಗೆ ಮತ್ತು ಎಲ್ಲಾ ಸದಸ್ಯರಿಗೂ ತಮ್ಮ ನಮಸ್ಕಾರಗಳನ್ನು ತಿಳಿಸುತ್ತಾ ಶ್ರೀ ಜಿ ಎಸ್ ಬಸವರಾಜುರವರನ್ನು ಉದ್ದೇಶಿಸಿ ದಯವಿಟ್ಟು ಮುಖ್ಯ ವಿಷಯದ ಮೇಲೆ ಮಾತ್ರ ಪ್ರಶ್ನೆಗಳನ್ನು ಕೇಳಿ, ನಾವು ವಾರ್ಷಿಕ ಸಾಮಾನ್ಯ ಸಭೆಗೆ ಬಂದಿರುವುದು ಆ ವರ್ಷದಲ್ಲಿ ಆಗಿರುವಂತಹ ವ್ಯವಹಾರಗಳ ಬಗ್ಗೆ ಮಾತನಾಡುವುದಕ್ಕೆ, ಆ ವರ್ಷದಲ್ಲಿ ಏನು ತಪ್ಪು ಒಪ್ಪುಗಳು ಆಗಿರುತ್ತದೆ, ಏನು ಉತ್ತಮವಾದ ಕೆಲಸಗಳನ್ನು ಮಾಡಿರುತ್ತಾರೆ ಎಂದು ತಿಳಿದುಕೊಳ್ಳಲು, 2022-23 ನೇ ಸಾಲಿನಲ್ಲಿ ವ್ಯವಹಾರದ ಬಗ್ಗೆ ಅನುಮಾನಗಳಿದ್ದರೆ ಅದರ ಬಗ್ಗೆ ಚರ್ಚೆ ಮಾಡಿ, ಇತರೆ ವಿಷಯಗಳಾದ ಕೋರಂ ಬಗ್ಗೆ ಆಗಿರಬಹುದು, ಲಾಭದ ಬಗ್ಗೆ ನೀಡಿದ ಪ್ರಕಟಣೆಯಲ್ಲಿರಬಹುದು, ನಾವು ಈ ವರ್ಷದಲ್ಲಿ ಇಷ್ಟು ಸಾಧನೆ ಮಾಡುವುದಾಗಿ ಎಲ್ಲಾ ಕಡೆಯೂ ನೀಡಿರುತ್ತಾರೆ ಆದರೆ ಎಲ್ಲವೂ ಸಾಧ್ಯವಾಗುವುದಿಲ್ಲ, ಈ ವರ್ಷದ ಅಂಕಿ ಅಂಶಗಳನ್ನು ಪುಸ್ತಕದಲ್ಲಿ ನೀಡಿರುತ್ತಾರೆ. ಸಣ್ಣ ಪುಟ್ಟ ವಿಷಯಗಳನ್ನು ಬಿಟ್ಟು 2022-23 ನೇ ವರ್ಷದ ಲಾಭ–ನಷ್ಟ, ಜಮಾ–ಖರ್ಚು ಮತ್ತು ಮುಂಗಡಗಳ ಮೇಲೆ ಮಾತ್ರ ಮಾತನಾಡಿ ಎಂದು ಮನವಿ ಮಾಡಿದರು. ನಂತರ ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಮುನಿಗಂಗಪ್ಪ ಅವರು ದೊಡ್ಡ ವ್ಯಕ್ತಿ, ಬ್ಯಾಂಕಿನ ಉಪಾಧ್ಯಕ್ಷರಾಗಿ ಕೆಲಸ ಮಾಡಿದಂತವರು, ಅವರ ಬಗ್ಗೆ ನನಗೆ ಬಹಳ ಗೌರವವಿದೆ, ಅವರು ನನಗೆ ಮುಖ್ಯ ವಿಷಯದ ಬಗ್ಗೆ ಮಾತನಾಡಿ ಮತ್ತು 2022-23 ನೇ ಸಾಲಿನ ವಿಷಯದ

ಬಗ್ಗೆ ಮಾತ್ರ ಮಾತನಾಡಿ ಎಂದು ತಿಳಿಸಿದ್ದು, ನಾನು ಈಗ ಮಾತನಾಡುತ್ತಿರುವ ವಿಷಯ 2022-23 ನೇ ಸಾಲಿನದಾಗಿದ್ದು 2023-24 ನೇ ಸಾಲಿಗೆ ಹೋಗಿರುವುದಿಲ್ಲ ಎನ್ನುವುದನ್ನು ಅವರ ಗಮನಕ್ಕೆ ತರುತ್ತಾ, ವಾರ್ಷಿಕ ಸಾಮಾನ್ಯ ಸಭೆಯನ್ನು ನಿಯಮದಂತೆ ನಡೆಸಿ, ಸದಸ್ಯರ ಏನೇ ಪ್ರಶ್ನೆಗಳಿದ್ದರೂ ಆಡಳಿತ ಮಂಡಳಿಯವರು ಉತ್ತರ ಕೊಡಿ, ಅದರ ಬದಲು ಇತರೆ ಸದಸ್ಯರಿಗೆ ಮೈಕ್ ಕೊಟ್ಟು, ನಿಮ್ಮ ಬಗ್ಗೆ ಸಮರ್ಥಿಸಿಕೊಳ್ಳುವುದು, ಆಡಳಿತ ಮಂಡಳಿಯ ಗೌರವಕ್ಕೆ ಧಕ್ಕೆ ಬರುವ ವಿಷಯ ಎಂದು ಹೇಳಿದರು.

**6.** 2022-23 ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಸಭೆಯ ಅಂಗೀಕಾರಕ್ಕಾಗಿ ಮಂಡಿಸುವುದು ಹಾಗೂ 2023-24 ನೇ ಸಾಲಿನ ಕಾರ್ಯ ಯೋಜನೆಗಳನ್ನು ಸಭೆಯ ಅಂಗೀಕಾರಕ್ಕಾಗಿ ಮಂಡಿಸುವುದು:

ಬ್ಯಾಂಕಿನ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್‌ಕುಮಾರ್‌ರವರು ಸಹಕಾರಿ ಸದಸ್ಯರೆಲ್ಲರಿಗೂ ನಮಸ್ಕರಿಸುತ್ತಾ ಬ್ಯಾಂಕಿನ 2022-23 ನೇ ಸಾಲಿನ 60 ನೇ ವಾರ್ಷಿಕ ವರದಿಯಲ್ಲಿ ನಮೂದಿಸಿರುವ ಅಂಕಿ ಅಂಶಗಳನ್ನು ಹಾಗೂ ವಾರ್ಷಿಕ ವರದಿಯಲ್ಲಿ ನಮೂದಿಸಿರುವ 2023-24 ನೇ ಸಾಲಿನ ಉದ್ದೇಶಿತ ಯೋಜನೆಗಳನ್ನು ಸಭೆಯ ಅಂಗೀಕಾರಕ್ಕಾಗಿ ವಿವರವಾಗಿ ಮಂಡಿಸುವಾಗ ಅನೇಕ ಸದಸ್ಯರು ತಾವು ಓದುತ್ತಿರುವ ಎಲ್ಲಾ ವಿಷಯಗಳು ಆಡಳಿತ ವರದಿಯಲ್ಲಿ ಮುದ್ರಿಸಿರುವುದರಿಂದ ಇದಕ್ಕೆ ತಮ್ಮ ಒಪ್ಪಿಗೆ ಇರುವುದರಿಂದ ಎಲ್ಲವನ್ನೂ ಓದುವ ಅವಶ್ಯಕತೆ ಇಲ್ಲವೆಂದು ತಿಳಿಸಿದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಎಲ್ಲವನ್ನೂ ಓದಲಿ ಎಂದರು. ನಂತರ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್ ಕುಮಾರ್‌ರವರು ಆಡಳಿತ ವರದಿಯನ್ನು ಸಭೆಗೆ ಮಂಡಿಸುವಾಗ ಮತ್ತೆ ಸದಸ್ಯರುಗಳು ಎಲ್ಲಾ ವಿವರಗಳು ಆಡಳಿತ ವರದಿಯಲ್ಲಿ ಮುದ್ರಿಸಿರುವುದರಿಂದ ಇಷ್ಟೊಂದು ವಿವರವಾಗಿ ಓದುವುದು ಬೇಡ, ಪುಟ ಸಂಖ್ಯೆ ಹೇಳಿ ಅದರಲ್ಲೇನಾದರೂ ಪ್ರಶ್ನೆಗಳಿದ್ದರೆ ಕೇಳುತ್ತೇವೆ ಎಂದಾಗ ಶ್ರೀ ಜಿ ಎಸ್ ಬಸವರಾಜುರವರು ಪುಟ ಸಂಖ್ಯೆ 2 ರಲ್ಲಿ ಪ್ರಶ್ನೆಯಿದೆ ಎಂದಾಗ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್‌ಕುಮಾರ್ ರವರು ನಾವು ಆಗಲೇ ಆ ಪುಟ ಮುಗಿಸಿ ಮುಂದೆ ಬಂದಿದ್ದು ನೀವು ಮತ್ತೆ ಹಿಂದೆ ಹಿಂದೆ ಹೋಗಬೇಡಿ ಎಂದಾಗ ಚರ್ಚೆಗೆ ಅವಕಾಶ ಕೊಡಿ, ಇಲ್ಲವಾದರೆ ಅದರಂತೆ ರೆಸಲ್ಯೂಷನ್ ಬರೆಸಿ ಎಂದಾಗ ಸಭೆಯಲ್ಲಿ ಇತರೆ ಸದಸ್ಯರು ಸಭೆ ಮುಂದುವರೆಸುವಂತೆ ಸಲಹೆ ನೀಡಿದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ತಮ್ಮ ಪ್ರಶ್ನೆಗೆ ಉತ್ತರ ಬೇಕೆಂದು ಕೇಳಿದಾಗ ನಿರ್ದೇಶಕರು ಮತ್ತೆ ಸದರಿ ಆಡಳಿತ ವರದಿಯಲ್ಲಿ ನಮ್ಮ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾದವರಿಗೆ ಅಭಿನಂದನೆಗಳನ್ನು ತಿಳಿಸುವ ಬಗ್ಗೆ ಓದಿದ ನಂತರ ತಮ್ಮ ಪ್ರಶ್ನೆಯನ್ನು ಕೇಳಿ ಎಂದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಓದಿ ನಿಮ್ಮ ಆಸೆ ತೀರಿಸಿಕೊಳ್ಳಿ ಎಂದು ಹಗುರವಾಗಿ ಮಾತನಾಡಿದರು. ನಂತರ ನಿರ್ದೇಶಕರಾದ ಶ್ರೀ ಆರ್ ಎ ಸುರೇಶ್‌ಕುಮಾರ್ ಆಡಳಿತ ವರದಿಯನ್ನು ಓದಿ ಮುಗಿಸಿದ ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ಶ್ರೀ ಜಿ ಎಸ್ ಬಸವರಾಜುರವರಿಗೆ ನೀವು ಆಡಳಿತ ವರದಿ ಓದುತ್ತಿರುವ ನಿರ್ದೇಶಕರಿಗೆ ಓದಿ ಆಸೆ ತೀರಿಸಿಕೊಳ್ಳಿ ಎಂದು ಹಗುರವಾಗಿ ಮಾತನಾಡಿರುತ್ತೀರಿ, ಒಬ್ಬ ಆಡಳಿತ ಮಂಡಳಿ ನಿರ್ದೇಶಕರಿಗೆ ಈ ರೀತಿಯಾಗಿ ಹಗುರವಾಗಿ ಮಾತನಾಡಬಾರದು, ಸಭೆಗೆ ಗೌರವ ಕೊಡಿ ಎಂದು ಹೇಳಿದರು. ಆಗ ಶ್ರೀ ಜಿ ಎಸ್ ಬಸವರಾಜುರವರು, ಹೌದು ನೀವು ನಮ್ಮ ಪ್ರಶ್ನೆಗಳಿಗೆ ಉತ್ತರಿಸಿ ಸದಸ್ಯರ ಆಸೆ ತೀರಿಸಿ, ಸದಸ್ಯರ ಬಗ್ಗೆ ನೀವು ಹಗುರವಾಗಿ ಮಾತನಾಡುತ್ತಿರುತ್ತೀರಿ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಇಲ್ಲಿ ಯಾರೂ ಆಸೆ ತೀರಿಸಿಕೊಳ್ಳಲು ಬಂದಿರುವುದಿಲ್ಲ, ನಾವು ಇಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಕುಳಿತಿರುತ್ತೇವೆ. ಸ್ವಲ್ಪ ಗೌರವ ಕೊಟ್ಟು ಮಾತನಾಡಿ, ನಿಮ್ಮ ಮಾತನಾಡುವ ಭಾಷೆಯನ್ನು ಬದಲಾಯಿಸಿಕೊಳ್ಳಿ ಎಂದರು. ನಂತರ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಪುಟ ಸಂಖ್ಯೆ 2 ರಲ್ಲಿ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿ ಷೇರು ಬಂಡವಾಳ 2021-22 ನೇ ಸಾಲಿನಲ್ಲಿ 3435.33 ಕೋಟಿ ಲಕ್ಷಗಳಿರುತ್ತದೆ. 2022-23 ನೇ ಸಾಲಿನಲ್ಲಿ 3331.02 ಕೋಟಿ ಲಕ್ಷಗಳಿರುತ್ತದೆ. ಸದಸ್ಯರ ಸಂಖ್ಯೆ 2021-22 ನೇ ಸಾಲಿನಲ್ಲಿ 15591 ಇದ್ದು, 2022-23 ನೇ ಸಾಲಿನಲ್ಲಿ 18260 ಆಗಿರುತ್ತದೆ. ಸುಮಾರು 3000 ಸದಸ್ಯರ ಸಂಖ್ಯೆ ಜಾಸ್ತಿಯಾಗಿರುತ್ತದೆ. ಆದರೆ ಷೇರು ಬಂಡವಾಳ ರೂ. ಒಂದು ಸಾವಿರ ಲಕ್ಷ ಕೋಟಿ ಕಡಿಮೆಯಾಗಿದೆ. –3.03 ರಷ್ಟಾಗಿರುತ್ತದೆ. ಸದಸ್ಯರ ಸಂಖ್ಯೆ ಜಾಸ್ತಿಯಾಗಿದೆ. ಇದು ಹೇಗೆ ಸಾಧ್ಯ ಎಂದು ಕೇಳಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಮಾತನಾಡಿ ಷೇರು ಮೊತ್ತ ಕಡಿಮೆಯಾಗಲು ಕಾರಣ ತಮಗೇ ಗೊತ್ತಿದೆ. ತಾವೇ 100 ಷೇರುಗಳಿಂದ 50 ಷೇರುಗಳಿಗೋ ಅಥವಾ 10 ಷೇರುಗಳಿಗೋ ಕಡಿಮೆ ಮಾಡಿಕೊಂಡಿದ್ದೀರಿ, ಸಾಲ ತೆಗೆದುಕೊಂಡಿರುವವರು ಸಾಲ ಮುಕ್ತಾಯವಾದಾಗ ಕಟ್ಟಿರುವ link ಷೇರನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ಷೇರು ಹಣ ಕಡಿಮೆಯಾಗಲೂ ಇದೂ ಒಂದು ಕಾರಣ. ನಮ್ಮ ಮೇಲೆ ನಂಬಿಕೆ ಇಡದೆ ನೀವೇ ನಿಮ್ಮ ಷೇರು ಹಣ ವಾಪಸ್ಸು ತೆಗೆದುಕೊಂಡು ಈಗ ನೀವೇ ಈ ಪ್ರಶ್ನೆ ಕೇಳಬಹುದೇ? ಎಂದು ಕೇಳಿದರು. ಅದಕ್ಕೆ ಶ್ರೀ ಜಿ ಎಸ್ ಬಸವರಾಜುರವರು ಮಾನ್ಯ ಅಧ್ಯಕ್ಷರು ಒಳ್ಳೆಯ ವಿಷಯವನ್ನು ಮಾತನಾಡಿದ್ದಾರೆ, ನಾನು 2021, 2022, 2023 ರಲ್ಲಿ ಷೇರು ಹಣ ವಾಪಸ್ಸು ತೆಗೆದುಕೊಂಡಿರುವುದಲ್ಲ, 5 ವರ್ಷಗಳ ಹಿಂದೆಯೇ ವಾಪಸ್ಸು ತೆಗೆದುಕೊಂಡಿರುತ್ತೇನೆ. ಯಾಕೆಂದರೆ ಮುಂದಿನ ದಿನಗಳಲ್ಲಿ ಬ್ಯಾಂಕಿನಲ್ಲಿ ಡಿವಿಡೆಂಡ್ ಕೊಡುವ ಸ್ಥಿತಿ ಇರುವುದಿಲ್ಲ ಎಂದು ಕಾರಣ ಕೊಟ್ಟು ವಾಪಸ್ಸು ತೆಗೆದುಕೊಂಡಿರುತ್ತೇನೆ. 5 ವರ್ಷದಿಂದ ಡಿವಿಡೆಂಡ್ ಕೊಟ್ಟಿರುವುದಿಲ್ಲ. ಸದಸ್ಯರು ಷೇರು ಹಣವನ್ನು ಯಾಕೆ ಇಟ್ಟಿರುತ್ತಾರೆ. ಡಿವಿಡೆಂಡ್ ಕೊಡದ ಮೇಲೆ ಸದಸ್ಯರು ಷೇರು ಹಣವನ್ನು ಯಾಕೆ ಇಡಬೇಕು ಎಂದು ಕೇಳಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್‌ಕುಮಾರ್ ರವರು ಶ್ರೀ ಜಿ ಎಸ್ ಬಸವರಾಜುರವರಿಗೆ ಷೇರು ಹಣ ಕಡಿಮೆಯಾಗಲು ನೀವು ಒಂದು ಕಾರಣ ಬ್ಯಾಂಕಿನ ಮೇಲೆ ಇಲ್ಲಸಲ್ಲದ ಅಪಪ್ರಚಾರ ಮಾಡಿರುತ್ತೀರಿ, ಸಾಮಾಜಿಕ ಜಾಲಾತಾಣದಲ್ಲಿ ಸಂದೇಶ ಕಳುಹಿಸಿರುತ್ತೀರ, ಷೇರು ಹಣ ಕಡಿಮೆಯಾಗಲು ನೀವೇ ಕಾರಣರಾಗಿದ್ದು ನೀವು ಹೇಗೆ ಈ ಬಗ್ಗೆ ಮಾತನಾಡುತ್ತೀರ ಎಂದು ಕೇಳಿದರು, ನಂತರ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಶ್ರೀ ಜಿ ಎಸ್ ಬಸವರಾಜುರವರಿಗೆ ನೀವು ಷೇರು ಹಣದ ಬಗ್ಗೆ ಕೇಳುತ್ತಿದ್ದೀರಿ, ನಾನು ನಿಮಗೆ ಸಭೆಯಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ, ನಿಮ್ಮಿಂದ ನಮ್ಮ ಬ್ಯಾಂಕಿನಲ್ಲಿ ಎಷ್ಟು ಠೇವಣಿ ಕಡಿಮೆಯಾಗಿದೆ ಎಂದು ಕೇಳಿದರು. ಇದಕ್ಕೆ ಮತ್ತೊಬ್ಬ ಸದಸ್ಯರಾದ ಟಿ ಎಸ್ ರವಿಕುಮಾರ್ ರವರು ಬಸವರಾಜು ರವರಿಂದ ಎಷ್ಟು ಠೇವಣಿ ಹೋಗಿದೆ ಎಂದು ನಾನು ಹೇಳುತ್ತೇನೆ ಆದರೆ ಅವರು ಎಷ್ಟು ಠೇವಣಿ ಅವರ ಕಡೆಯಿಂದ ಬ್ಯಾಂಕಿಗೆ ಬಂದಿದೆ ಎಂದು ಅವರು ಹೇಳಲಿ ಎಂದು ಹೇಳಿದರು. ಎಷ್ಟು ನಷ್ಟ ಆಗಿದೆ ಎಂದು ನಾನು ಹೇಳಬಲ್ಲೆ, ಎಷ್ಟು ಲಾಭ ಆಗಿದೆ ಎಂದು ಅವರು ಹೇಳಲಿ, ಎಷ್ಟು ಸಾಲ ಹೊಸದಾಗಿ ತಂದಿರುತ್ತೀರಿ, ಎಷ್ಟು ವಸೂಲಾತಿ ಮಾಡಲು ಸಹಾಯ ಮಾಡಿರುತ್ತೀರಿ ಸಭೆಗೆ ಉತ್ತರ ಕೊಡಿ, ಇವರಿಂದ ಬ್ಯಾಂಕಿಗೆ ಅಗೌರವ ಆಗಿದೆ, ಬ್ಯಾಂಕಿಗೆ ನಷ್ಟ

ಆಗಿದೆ, ದಯವಿಟ್ಟು ಅವರನ್ನು ವಾರ್ಷಿಕ ಸಾಮಾನ್ಯ ಸಭೆಯಿಂದ boycott ಮಾಡಿ ಎಂದು ಹೇಳಿದರು. ಸಭೆಯಲ್ಲಿ ಸರ್ವಾನುಮತದಿಂದ ಹೇಳುತ್ತಿದ್ದೇವೆ, ಅವರನ್ನು ಸದಸ್ಯತ್ವದಿಂದ ವಜಾ ಮಾಡಿ ಎಂದು ಹೇಳಿದರು.

ಮತ್ತೊಬ್ಬ ಸದಸ್ಯರಾದ ಶ್ರೀ ಟಿ ಎನ್ ಚಂದ್ರಶೇಖರ್ ರವರು ಮಾತನಾಡಿ ಬಸವರಾಜುರವರಿಂದ ಬ್ಯಾಂಕಿಗೆ ಎಷ್ಟು ಠೇವಣಿ ಬಂದಿದೆ, ಅವರ ಕಡೆಯಿಂದ ಬ್ಯಾಂಕಿನಲ್ಲಿ ಎಷ್ಟು ಜನರಿಗೆ ಸಾಲ ಕೊಡಿಸಿದ್ದಾರೆ ಅದಕ್ಕೆ ಉತ್ತರ ಕೊಡಲಿ ಎಂದು ಹೇಳಿದರು. ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ನಿಮ್ಮಿಂದ ನಮ್ಮ ಬ್ಯಾಂಕಿನಲ್ಲಿ ಠೇವಣಿ ಮಾಡುವವರೇ ಇಲ್ಲವಾಗಿದ್ದಾರೆ. ನಿಮ್ಮ whats app message ಗಳಿಂದ ಬ್ಯಾಂಕಿಗೆ ಬಹಳ ನಷ್ಟವಾಗಿದೆ.

ಮತ್ತೆ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಬ್ಯಾಂಕಿನ ಘನತೆಗೆ ಧಕ್ಕೆ ತರುವಂತಹ ವ್ಯಕ್ತಿಗಳು ನಮ್ಮ ಬ್ಯಾಂಕಿಗೆ ಬೇಡ ಎಂದು ಬಹಳ ಸದಸ್ಯರು ಅವರಿಗೆ ಧಿಕ್ಕಾರ ಕೂಗಿದರು. ಅವರನ್ನು ಬ್ಯಾಂಕಿನ ಸದಸ್ಯತ್ವದಿಂದ ವಜಾ ಮಾಡಿಬಿಡಿ, ನಾವು 280 ಕ್ಕೂ ಹೆಚ್ಚು ಸದಸ್ಯರು ಈಗಾಗಲೇ ಪತ್ರ ನೀಡಿದ್ದು ಅವರನ್ನು ಬ್ಯಾಂಕಿನ ಸದಸ್ಯತ್ವದಿಂದ ವಜಾ ಮಾಡಿಬಿಡಿ. ಇದಕ್ಕೆ ಅನೇಕ ಸದಸ್ಯರು ಧ್ವನಿಗೂಡಿಸಿದರು. ಈ ಸಭೆಯಲ್ಲಿಯೇ ಇದರ ಬಗ್ಗೆ ತೀರ್ಮಾನ ಮಾಡಿಬಿಡಿ ಅವರನ್ನು ಸದಸ್ಯತ್ವದಿಂದ ತೆಗೆದುಬಿಡಿ ಎಂದು ಸದಸ್ಯರು ಸಭೆಯಲ್ಲಿ ಕೋರಿದರು. ನಂತರ ಸದಸ್ಯರಾದ ಶ್ರೀ ರೇಣುಕಾರಾಧ್ಯ ರವರು ಮಾತನಾಡಿ ಸದಸ್ಯರೆಲ್ಲರ ಪರವಾಗಿ ಮಾತನಾಡಿ ಸದಸ್ಯರಾದ ಬಸವರಾಜು ರವರಿಂದ ಬ್ಯಾಂಕಿಗೆ ಯಾವುದೂ ಒಳ್ಳೆಯದಾಗುತ್ತಿಲ್ಲ ಅವರು ಸಾರ್ವಜನಿಕವಾಗಿ ಮತ್ತು whats app message & vedios ನಲ್ಲಿ ಬ್ಯಾಂಕಿನ ತದ್ವಿರುದ್ಧವಾಗಿ ಮಾತನಾಡುತ್ತಿದ್ದಾರೆ ಇದರಿಂದ ಯಾರು ಬ್ಯಾಂಕಿನಲ್ಲಿ ಠೇವಣಿ ಇಡುತ್ತಾರೆ. ಇವರನ್ನು ಸದಸ್ಯತ್ವದಿಂದ ವಿಮುಕ್ತಿಗೊಳಿಸಿ ಎಂದು ಸಭೆಯ ಪರವಾಗಿ ಕೇಳಿಕೊಂಡರು

ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಮಾತನಾಡಿ ನೀವು ಈ ಹಿಂದೆಯೂ ಅವರನ್ನು ಸದಸ್ಯತ್ವದಿಂದ ವಜಾ ಮಾಡಿರುತ್ತೀರಿ ಮತ್ತೆ ಯಾವ ಕಾರಣದಿಂದ ಅವರನ್ನು ಸದಸ್ಯತ್ವಕ್ಕೆ ತೆಗೆದುಕೊಂಡಿರುತ್ತೀರಿ ಗೊತ್ತಾಗುತ್ತಿಲ್ಲ. ಅವರನ್ನು ಮತ್ತೆ ಸದಸ್ಯತ್ವದಿಂದ ವಜಾಗೊಳಿಸಿ ಎಂದು, ಅವರು ಯಾವ ಕೋರ್ಟಿಗೆ ಬೇಕಾದರೂ ಹೋಗಲಿ, ನೀವು ಈಗಲೇ ಅವರನ್ನು ಸದಸ್ಯತ್ವದಿಂದ ವಜಾಗೊಳಿಸಿ ಎಂದು ಹೇಳಿದರು, ಸಭೆಯು ಇದನ್ನು ಅನುಮೋದಿಸಿತು. ಆಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಶ್ರೀ ಜಿ ಎಸ್ ಬಸವರಾಜುರವರು ಬ್ಯಾಂಕಿನ ಅನುಕೂಲಕ್ಕೆ, ಬ್ಯಾಂಕಿನ ಪ್ರಗತಿಗೆ ಇಷ್ಟೆಲ್ಲ ಪ್ರಶ್ನೆ ಕೇಳುತ್ತಿದ್ದೇನೆ ಎನ್ನುತ್ತಾರೆ. ನೀವು ಹೇಳುತ್ತಿದ್ದೀರ ಅವರು ಕಳುಹಿಸುವ whats app message ನಿಂದ ಬ್ಯಾಂಕಿಗೆ ತೊಂದರೆಯಾಗುತ್ತಿದೆ. ಠೇವಣಿ ಹೊರಗೆ ಹೋಗುತ್ತಿದೆ ಎಂದು, ಇದಕ್ಕೆ ಅವರು ಏನು ಉತ್ತರ ಕೊಡುತ್ತಾರೆಂದು ನೋಡೋಣ ಎಂದು ಹೇಳಿದರು. ಅದಕ್ಕೆ ಸದಸ್ಯರು ಅವರು ಏನು ಉತ್ತರ ಕೊಡುವ ಅಗತ್ಯವಿಲ್ಲ. ಅವರಿಂದ ಈಗಾಗಲೇ ರೂ. 400.00 ಕೋಟಿಗಳಷ್ಟು ಠೇವಣಿ ಹೊರಗೆ ಹೋಗಿದೆ ಇನ್ನೂ ಏನೂ ಹೇಳುವ ಅಗತ್ಯವಿಲ್ಲ ಅವರನ್ನು ಸದಸ್ಯತ್ವದಿಂದ ವಜಾ ಮಾಡಿ, ಇದನ್ನು ರೆಸಲ್ಯೂಷನ್‌ನಲ್ಲಿ ರೆಕಾರ್ಡ್ ಮಾಡಿಸಿ ಎಂದು ಒಕ್ಕೊರಲಿನಿಂದ ತಿಳಿಸಿದರು.

ಸದಸ್ಯರಾದ ಶ್ರೀ ಭಾನುಪ್ರಕಾಶ್ ರವರು ಮಾತನಾಡಿ ದಿವಂಗತ ಶ್ರೀ ಎನ್ ಆರ್ ಜಗದೀಶ್‌ರವರು, ಈಗಿನ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರು ಸರಿಯಾಗಿ ಕರ್ತವ್ಯ ನಿರ್ವಹಿಸಿದ್ದರೂ ನಿಮ್ಮ ಮೇಲೆ ಕಂಪ್ಲೇಂಟ್ ಕೊಟ್ಟಿದ್ದಾರಲ್ಲಾ, ನೀವು ಅವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದಾಗ ಅಧ್ಯಕ್ಷರು ಮಾತನಾಡಿ ಬಸವರಾಜುರವರು ನಮ್ಮ ಮೇಲೆ, ಆರ್.ಸಿ.ಎಸ್ ಗೆ, ಮಿನಿಸ್ಟರ್ ಗೆ, ಡಿ. ಆರ್ ಗೆ, ಲೋಕಾಯುಕ್ತಕ್ಕೆ ಎಲ್ಲರಿಗೂ ನಮ್ಮ ಮೇಲೆ ಕಂಪ್ಲೇಂಟ್ ಕೊಟ್ಟಿದ್ದರು, ಆ ಕಂಪ್ಲೆಂಟ್ ಮೇಲೆ ಪೋಲೀಸರು ಕ್ರಮ ತೆಗೆದುಕೊಂಡಿಲ್ಲ ಎಂದು ಕೋರ್ಟ್‌ಗೆ ಅರ್ಜಿ ಹಾಕಿದರು. ಇದರಿಂದ ಅಧ್ಯಕ್ಷರಿಗೆ ನನಗೆ ಹಾಗೂ ಕೆಲವು ಆಡಳಿತ ಮಂಡಳಿ ಸದಸ್ಯರ ಮೇಲೆ FIR ಸಹಾ ಆಗಿದೆ. ಅದಕ್ಕಾಗಿ ನಾವು ಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದೇವೆ. ಇವರು ನಮ್ಮ ಮೇಲೆ FIR ಆಗುವಂತಹ ಕಂಪ್ಲೇಂಟ್ ಏಕೆ ಕೊಟ್ಟರೋ ನಮಗಂತೂ ಗೊತ್ತಿಲ್ಲ. ಇವರ ದ್ವೇಷ ನಮ್ಮ ಮೇಲಾ ಅಥವಾ ಬ್ಯಾಂಕಿನ ಮೇಲಾ ಎಂದು ಅವರೇ ಹೇಳಬೇಕು. ಅವರು ಬ್ಯಾಂಕನ್ನು ಉದ್ಧಾರ ಮಾಡುವ ಬಗ್ಗೆ ಇಷ್ಟೆಲ್ಲಾ ಮಾತನಾಡುತ್ತಾರೆ, ನೀವೇ ಹೇಳಿದ ಹಾಗೆ ಇವರು ಬ್ಯಾಂಕಿನ ಬೆಳವಣಿಗೆಗೆ ಎಷ್ಟು ಠೇವಣಿ ಇಡಿಸಿದ್ದಾರೆ, ಎಷ್ಟು ಸಾಲ ಕೊಡಿಸಿದ್ದಾರೆ, ಎಷ್ಟು ವಸೂಲಾತಿ ಮಾಡಿದ್ದಾರೆ, ಇವರು ಯಾವತ್ತಾದರೂ ನಮ್ಮ ಬಳಿ ಸೌಹಾರ್ದಯುತವಾಗಿ ಮಾತನಾಡಿದ್ದಾರಾ ಎಂದು ಕೇಳಿದರು. ಸದಸ್ಯರಾದ ಶ್ರೀ ಭಾನುಪ್ರಕಾಶ್ ರವರು ಮಾತನಾಡಿ ಇವರಿಂದ ಬ್ಯಾಂಕಿಗೆ ಕೋಟ್ಯಾಂತರ ರೂಪಾಯಿ ನಷ್ಟ ಆಗಿದೆ, ಬ್ಯಾಂಕಿನ ಇಮೇಜ್‌ಗೆ ಎಷ್ಟು ಡ್ಯಾಮೇಜ್ ಮಾಡಿದ್ದಾರೆ. ಇವರು whats app group ಮಾಡಿಕೊಂಡು ನಿಮ್ಮ ಬ್ಯಾಂಕಿನ ಬಗ್ಗೆ, ನಿಮ್ಮ ಹಳೇ ಅಧ್ಯಕ್ಷರು, ಈಗಿನ ಅಧ್ಯಕ್ಷರು ಆಡಳಿತ ಮಂಡಳಿ ಬಗ್ಗೆ ಹಾಕುತ್ತಿದ್ದಾರೆ. ಇದಕ್ಕೆ ನೀವು ಏನು legal action ತೆಗೆದುಕೊಂಡಿದ್ದೀರಾ ಎಂದು ಕೇಳಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಅವರ ಮೇಲೆ ಹೈಕೋರ್ಟ್‌ನಲ್ಲಿ ಲೀಗಲ್ ಕೇಸ್ ಹಾಕಲಾಗಿದೆ ಎಂದು ತಿಳಿಸಿದರು. ಇದಕ್ಕೆ ಮತ್ತೊಬ್ಬ ಸದಸ್ಯರಾದ ಶ್ರೀ ಕೆ ಎಸ್ ದಯಾನಂದ್‌ರವರು ಸದಸ್ಯರಾದ ಭಾನುಪ್ರಕಾಶ್‌ರವರನ್ನುದ್ದೇಶಿಸಿ ಮೊದಲು ಬ್ಯಾಂಕಿನಲ್ಲಿ ನೀವು ತೆಗೆದುಕೊಂಡಿರುವ ಸಾಲ ಕಟ್ಟಿ ಎಂದಾಗ ಸದಸ್ಯರಾದ ಶ್ರೀ ಭಾನುಪ್ರಕಾಶ್ ರವರು ನನ್ನ ಸಾಲದ ಯಾವುದೇ ಕಂತು ಬಾಕಿ ಇರುವುದಿಲ್ಲ ಎಂದು ಅವರಿಗೆ ತಿಳಿಸಿದರು.

ನಂತರ ಸದಸ್ಯರಾದ ಶ್ರೀ ಎನ್ ಡಿ ವಿಜಯ್ ಪ್ರಕಾಶ್ ರವರು ಮಾತನಾಡಿ ಬಸವರಾಜುರವರಿಗೆ ಬ್ಯಾಂಕಿನ ಬಗ್ಗೆ ಅಷ್ಟೊಂದು ಕಾಳಜಿ ಇದ್ದರೆ, ಬ್ಯಾಂಕಿಗೆ ಯಾವುದೇ ಠೇವಣಿ ತಂದಿರುವುದಿಲ್ಲ, ಯಾವುದೇ ಸಾಲ ತಂದಿರುವುದಿಲ್ಲ, ಇದನ್ನೆಲ್ಲಾ ಮಾಡಲಿ, ಇಲ್ಲವೆಂದರೆ ಸಾಲ ವಸೂಲಾತಿ ಮಾಡಿ ಸುಸ್ತಿ ಸಾಲದ ಶೇಕಡಾ ಪ್ರಮಾಣವನ್ನು ಕಡಿಮೆ ಮಾಡಲಿ, ಆಗ ನಾವು ಅವರು ಏನು ಹೇಳುತ್ತಾರೋ ಅದನ್ನು ಕೇಳಲು ಸಿದ್ದರಾಗಿದ್ದೇವೆ. ಇದ್ಯಾವುದೂ ಮಾಡದೇ ಸುಮ್ಮನೆ ಗಲಾಟೆ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಹೇಳಿದರು. ಸದಸ್ಯರಾದ ಶ್ರೀ ಭಾನುಪ್ರಕಾಶ್ ರವರು ಇವರ ಮೇಲೆ ಕಾನೂನು ಕ್ರಮ ಕೈಗೊಂಡು ಸಸ್ಪೆಂಡ್ ಮಾಡಿ ಎಂದಾಗ ಮತ್ತೊಬ್ಬ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಮಾತನಾಡಿ ಸಸ್ಪೆಂಡ್ ಮಾಡುವುದು ಮತ್ತೆ ಒಳಗೆ ಕರೆದುಕೊಳ್ಳುವುದು ಯಾವುದೂ ಬೇಡ, ಒಂದೇ ಬಾರಿಗೆ ಅವರನ್ನು ಸದಸ್ಯತ್ವದಿಂದ ವಜಾ ಮಾಡಿಬಿಡಿ ಎಂದು ಹೇಳಿದರು. ಸಭೆಯು ಅದನ್ನು ಅನುಮೋದಿಸಿತು. ನಂತರ

ಸದಸ್ಯರೊಬ್ಬರು ಮಾತನಾಡಿ ಬಸವರಾಜುರವರನ್ನು ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ ಸದಸ್ಯರ ಅನುಮತಿ ಮೇರೆಗೆ ಅವರನ್ನು ಸದಸ್ಯತ್ವದಿಂದ ಉಚ್ಚಾಟನೆ ಮಾಡಿ, ಆಡಳಿತ ಮಂಡಳಿಯಿಂದ ಮಾಡಬೇಡಿ, ವಾರ್ಷಿಕ ಸಾಮಾನ್ಯ ಸಭೆಯ ಒಪ್ಪಿಗೆ ಮೇರೆಗೆ ಮಾಡಿ, ಯಾವ ಕೋರ್ಟಿಗೆ ಬೇಕಾದರೂ ಹೋಗಲಿ ಎಂದು ಹೇಳಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಸಾಮಾನ್ಯ ಸಭೆಯ ತೀರ್ಮಾನ ಅಂತಿಮವಾದುದು, ನೀವು ಬೇಕಾದರೆ ಸದಸ್ಯರ ಮತಗಳನ್ನು ಕೇಳಬಹುದು, ನಾವು ಅವರನ್ನು ತೆಗೆದುಹಾಕಲು ಮತ ನೀಡುತ್ತೇವೆ ಎಂದು ಹೇಳಿದರು. ಮತ್ತೊಬ್ಬ ಸದಸ್ಯರಾದ ಶ್ರೀ ರಂಗಪ್ಪ ರವರು ಮಾತನಾಡಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ 100 ಕ್ಕೆ 99 ಜನ ಅವರನ್ನು ಸದಸ್ಯತ್ವದಿಂದ ತೆಗೆಯುವಂತೆ ಒಪ್ಪಿಗೆ ನೀಡಿದ್ದು, ಇವರಿಂದ ಬ್ಯಾಂಕಿಗೆ ತೊಂದರೆಯಾಗುತ್ತಿದೆಯೇ ವಿನಃ ಯಾವುದೇ ವಿಧವಾದಂತಹ ಅನುಕೂಲವಾಗುವುದಿಲ್ಲ. ನಾನು ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಎಲ್ಲಾ ಕಡೆ ಅಧ್ಯಕ್ಷರಾಗಿ, ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವದ ಮೇಲೆ ಹೇಳುತ್ತಿದ್ದೇನೆ ಅವರನ್ನು ಸದಸ್ಯತ್ವದಿಂದ ತೆಗೆದುಹಾಕಿ, ಇಲ್ಲವಾದರೆ ಉಳಿದ ಎಲ್ಲಾ ಸದಸ್ಯರಿಗೂ ಅವಮಾನ ಮಾಡಿದಂತೆ, ಈಗಲೇ ರೆಸಲ್ಯೂಷನ್ ಬರೆಸಿ ಅವರನ್ನು ಸದಸ್ಯತ್ವದಿಂದ ತೆಗೆದುಹಾಕಿ ಎಂದು ಹೇಳಿದರು. ಮತ್ತೆ ಸಭೆಯ ಬಹುತೇಕ ಸದಸ್ಯರು ಅವರ ಮಾತಿಗೆ ಒಪ್ಪಿ ಈಗಲೇ ರೆಸಲ್ಯೂಷನ್ ಬರೆಸಿ ಅವರನ್ನು ಈಗಲೇ ಎಲ್ಲರ ಸಮ್ಮುಖದಲ್ಲೇ ವಜಾ ಮಾಡಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಡಿ ಆರ್ ಶಿವಕುಮಾರ್ ರವರು ಮಾತನಾಡಿ ಸಭೆಯಲ್ಲಿ ಮಾತನಾಡಿ 18260 ಜನ ಸದಸ್ಯರಿದ್ದು, ಬಸವರಾಜು ಒಬ್ಬರಿಗೇ ನೀವು ಸಭೆಯಲ್ಲಿ ಪ್ರತಿ ಪುಟಕ್ಕೂ ಉತ್ತರ ಕೊಡುತ್ತಾ ಹೋದರೆ ಬೇರೆ ಸದಸ್ಯರು ಏನು ಮಾಡಬೇಕು ಎಂದು ಪ್ರಶ್ನಿಸಿ, ಅವರು ಆಡಳಿತ ಮಂಡಳಿಯ ಮೇಲೆ ಕಂಪ್ಲೇಂಟ್ ಮಾಡುವಾಗ ನೀವು ಏನು ಮಾಡುತ್ತಿದ್ದಿರಿ, ನೀವು ಬೇರೆ ಎಲ್ಲದಕ್ಕೂ SMS ಕಳುಹಿಸುತ್ತಿದ್ದೀರ, ಅದರಂತೆ ಬ್ಯಾಂಕಿನ ಇಂತಹ ಸದಸ್ಯರೊಬ್ಬರು ಬ್ಯಾಂಕಿಗೆ ಅಗೌರವ ಸೂಚಿಸಿದ್ದು, ಅವರನ್ನು ಆಡಳಿತ ಮಂಡಳಿ ಸಭೆಯಲ್ಲಿ ಸದಸ್ಯತ್ವದಿಂದ ತೆಗೆದುಹಾಕುವುದಾಗಿ ವಿಚಾರವಾಗಿ ಸಂದೇಶ ಕಳುಹಿಸಿದ್ದರೆ, ಇಲ್ಲವೆಂದರೆ ಒಂದು Special meeting ಕರೆದು ಈ ವಿಚಾರ ಮಂಡಿಸಿದ್ದರೆ ನಾವು ನಿಮಗೆ ಬೆಂಬಲ ನೀಡುತ್ತಿದ್ದೆವು, ಅದು ಬಿಟ್ಟು ನೀವು ಇನ್ನೂ ಏಕೆ ಸುಮ್ಮನಿದ್ದೀರಿ, ಅವರು ಹೇಗೆ ಕೇಸ್ ಹಾಕಿದರು, ಬೇರೆ ಬ್ಯಾಂಕುಗಳಲ್ಲಿ ಅಧ್ಯಕ್ಷರಿಗೆ ಕಾರು, ಸಂಬಳ ಇತರೆ ಸವಲತ್ತುಗಳಿರುತ್ತದೆ. ಆದರೆ ನಮ್ಮ ಬ್ಯಾಂಕಿನಲ್ಲಿ ಇಷ್ಟು ವರ್ಷದಿಂದ ಏನೂ ಸವಲತ್ತು ತೆಗೆದುಕೊಂಡಿರುವುದಿಲ್ಲ. ಆಡಳಿತ ಮಂಡಳಿಯವರು ಲೂಟಿ ಹೊಡೆದು ಜನಗಳಿಗೆ ಮೋಸ ಮಾಡಿದ್ದರೆ ಇಷ್ಟು ವರ್ಷದಿಂದ ಬ್ಯಾಂಕು ನಡೆಸಲು ಸಾಧ್ಯವಾಗುತ್ತಿತ್ತಾ, ಎಲ್ಲಾ ಕಡೆಯಲ್ಲೂ ಸಹಕಾರ ಪ್ರಶಸ್ತಿಗಳನ್ನು ತೆಗೆದುಕೊಂಡಿದ್ದು, ಪ್ರಶಸ್ತಿಯನ್ನು ಸುಮ್ಮನೆ ಕೊಡುತ್ತಾರಾ. ಇದನ್ನೆಲ್ಲಾ ಸದಸ್ಯರು ಗಮನಿಸಬೇಕು, ನಿಮಗೆ ಕಾರ್ಯಕಾರಿ ಮಂಡಳಿಯಲ್ಲಿ ನಿರ್ಧಾರ ತೆಗೆದುಕೊಳ್ಳಲು ಆಗಲಿಲ್ಲ ಎಂದರೆ ಈಗಲೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿಯೇ ನಿರ್ಧಾರ ತೆಗೆದುಕೊಳ್ಳಿ, ನಾವು ನಿಮಗೆ ಸಹಕಾರ ಕೊಡುತ್ತೇವೆ. ಅವರು whats app ನಲ್ಲಿ ಹಾಕುವ 90% ಸಂದೇಶಗಳು ನಿಜವಾಗಿರುವುದಿಲ್ಲ. ಇವರು ಟಿಜಿಎಂಸಿ ಬ್ಯಾಂಕ್ ಮುಳುಗಿಹೋಗಿದೆ, ದಿವಾಳಿಯಾಗಿದೆ ಎಂದು ಸಂದೇಶಗಳನ್ನು ಕಳುಹಿಸಿದರೆ ಅದೆಲ್ಲ ನಿಜವಾಗುವುದಿಲ್ಲ. ಹಾಗಾದರೇ ನಮ್ಮದೂ ಠೇವಣಿ ಇದೆ, ನಮಗೆ ಏಕೆ ನಷ್ಟವಾಗಿಲ್ಲ. ಇಂತಹವರನ್ನು ಈಗಲೇ, ಇದೇ ಸಭೆಯಲ್ಲಿಯೇ ವಜಾ ಮಾಡಿ, ಇಲ್ಲಿ ಪ್ರತಿಯೊಬ್ಬರೂ ಬಂದಿದ್ದಾರೆ ಎಲ್ಲರ ಬೆಂಬಲವೂ ಇದೆ. ಇದೇ ಸಭೆಯಲ್ಲಿ ಅವರನ್ನು ಸದಸ್ಯತ್ವದಿಂದ ವಜಾ ಮಾಡಿ, ಅವರು ಮೊದಲೇ ಹೇಳಿದ ಹಾಗೆ ಕೋರಂ ಆಗಿಲ್ಲ, ಸಹಿ ಮಾಡಿದ ಮಾತ್ರಕ್ಕೆ ಕೋರಂ ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿದ್ದು, 100% ಕಾನೂನಿನ ಪ್ರಕಾರ ಯಾರೂ ನಡೆದುಕೊಳ್ಳುವುದಿಲ್ಲ, ನಡೆದುಕೊಳ್ಳಲು ಸಾಧ್ಯವಿಲ್ಲ, ಹಾಗೆ ನೋಡುವುದಾದರೆ ನಮ್ಮದು ಕೋ ಆಪರೇಟಿವ್ ಬ್ಯಾಂಕು, ಇನ್ನೂ ಸರ್ಕಾರಿ ಬ್ಯಾಂಕುಗಳಲ್ಲಿ ಎಷ್ಟು ಎಷ್ಟು ದಿವಾಳಿಯಾಗಿದೆ. ಅವರು ಏನು Action ತೆಗೆದುಕೊಂಡಿದ್ದಾರೆ ಏನು ಇಲ್ಲ ಎಂದರು. ಸದಸ್ಯರಾದ ಶ್ರೀ ರಂಗಪ್ಪರವರು ನಾನು ಸಭೆಯಲ್ಲಿ ಹೇಳುತ್ತಿದ್ದೇನೆ, ಅವರಂತೆ ಬ್ಯಾಂಕಿನ ಬಗ್ಗೆ ಯಾರೂ ಅವಹೇಳನಕಾರಿಯಾಗಿ ಮಾತನಾಡಿಲ್ಲ. ಬ್ಯಾಂಕಿಗೆ ಕೆಟ್ಟ ಹೆಸರು ಬರುವಂತೆ ಮಾಡಿಲ್ಲ, ಬ್ಯಾಂಕಿಗೆ ನಷ್ಟವಾಗುವಂತೆ ಮಾಡಿಲ್ಲ, ಆದ್ದರಿಂದ ಇಂಥವರೊಬ್ಬರನ್ನು ನೀವು ಬ್ಯಾಂಕಿನ ಸದಸ್ಯರನ್ನಾಗಿ ಇಟ್ಟುಕೊಂಡರೆ ಬ್ಯಾಂಕಿನ ಉಳಿದ ಸದಸ್ಯರಿಗೆ ಅವಮಾನ ಮಾಡಿದಂತೆ, ಆದ್ದರಿಂದ ಇವರನ್ನು ಈ ದಿನವೇ ಸದಸ್ಯತ್ವದಿಂದ ತೆಗೆದುಹಾಕಿ ಎಂದಾಗ ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ಸೂಚಿಸಿತು.

ಹಿರಿಯ ಸದಸ್ಯರಾದ ಮತ್ತು ಹಿಂದಿನ ನಿರ್ದೇಶಕರಾದ ಶ್ರೀ ಟಿ ಸಿ ವಿಜಯ್‌ಕುಮಾರ್‌ರವರು ಮಾತನಾಡಿ ನೀವು ಏನು ಸಭೆ ನಡೆಸುತ್ತಿದ್ದೀರ 60 ವರ್ಷ ಆಗಿದೆ. ಯಾವ ಸಭೆಯಲ್ಲಿಯೂ ಹೀಗೆ ಆಗಿರಲಿಲ್ಲ. ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಿ. ಎಲ್ಲರಿಗೂ 15 ನಿಮಿಷ ಅವಕಾಶ ಮಾಡಿಕೊಡಿ, ನಮ್ಮ ಕಾಲದಲ್ಲಿ ಹೀಗೆಲ್ಲ ಆಗುತ್ತಿರಲಿಲ್ಲ, ಸಿಲ್ವರ್ ಜ್ಯುಬಿಲಿ ಮಾಡಿದಾಗ ಹೀಗೆಲ್ಲ ಆಗಿರಲಿಲ್ಲ, ನೀವು ಹೀಗೇನಾ ಮೀಟಿಂಗ್ ಮಾಡುವುದು ಎಲ್ಲರಿಗೂ ಮಾತನಾಡಲು ಅವಕಾಶ ಕೊಡಿ ಎಂದು ಹೇಳಿದರು. ಆಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಸಭೆಯನ್ನುದ್ದೇಶಿಸಿ ಮಾತನಾಡಿ 280 ಕ್ಕೂ ಹೆಚ್ಚು ಸದಸ್ಯರು ಸಹಿ ಮಾಡಿ ಬಸವರಾಜುರವರನ್ನು ಸದಸ್ಯತ್ವದಿಂದ ತೆಗೆಯುವಂತೆ ಪತ್ರ ನೀಡಿದ್ದು, ಆ ವಿಷಯ ಬಂದಾಗ ನೀವು ಈಗ ಒಪ್ಪಿಗೆ ಕೊಟ್ಟಿರುವುದನ್ನು ರೆಸಲ್ಯೂಷನ್ ಬರೆಸಿ ಅವರನ್ನು ತೆಗೆದುಹಾಕುವಂತೆ ತೀರ್ಮಾನ ಮಾಡುವುದಾಗಿ ತಿಳಿಸಿದಾಗ ಸದಸ್ಯರಾದ ಶ್ರೀ ಕೆ ಎನ್ ಪ್ರವೀಣ್ ಕುಮಾರ್ ರವರು ಮಾತನಾಡಿ ಆ ವಿಷಯ ಬರುವವರೆಗೂ ಕಾಯುವುದು ಬೇಕಿಲ್ಲ, ಸಭೆಯನ್ನು ಸುಗಮವಾಗಿ ನಡೆಸಬೇಕಾ, ಬೇಡವೇ? ನೀವು ಇಷ್ಟು ಸದಸ್ಯರಿಗೆ ಸಭೆ ನಡೆಸುತ್ತಿದ್ದೀರಾ ಅಥವಾ ಬಸವರಾಜುರವರಿಗೆ ಒಬ್ಬರಿಗೆ ಮಾತ್ರ ಸಭೆ ನಡೆಸುತ್ತಿದ್ದೀರ? ಸಭೆ ಸುಗಮವಾಗಿ ನಡೆಯಬೇಕೆಂದರೆ ನೀವು ಎಲ್ಲ ಸದಸ್ಯರಿಗೂ ಉತ್ತರ ಕೊಡುತ್ತೀರ ಅಥವಾ ಬರೀ ಬಸವರಾಜುರವರಿಗೆ ಮಾತ್ರ ಪ್ರತಿ ಪುಟಕ್ಕೂ ಉತ್ತರ ಕೊಡುತ್ತೀರ ಎಂದು ಕೇಳಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಈಗ ಆಗಿರುವ ಎಲ್ಲ ಚರ್ಚೆಯಂತೆ ರೆಸಲ್ಯೂಷನ್ ಬರೆಸುತ್ತೇವೆ. ಅದರ ಆಧಾರದ ಮೇಲೆ ಕೂನೂನಿನ ಪ್ರಕಾರ ಅವರನ್ನು ಸದಸ್ಯತ್ವದಿಂದ ತೆಗೆಯುವ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದಾಗ ಶ್ರೀ ಕೆ ಎನ್ ಪ್ರವೀಣ್ ಕುಮಾರ್‌ರವರು ಪ್ರಯತ್ನ ಮಾಡುವುದಲ್ಲ, ತೆಗೆದುಬಿಡಿ ವಾರ್ಷಿಕ ಸಾಮಾನ್ಯ ಸಭೆಯ ತೀರ್ಮಾನವೇ ಅಂತಿಮ, ನಾವು ಹೇಳುತ್ತಿದ್ದೇವೆ ಅವರನ್ನು ಸದಸ್ಯತ್ವದಿಂದ ತೆಗೆಯಲೇಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಟಿ ಎನ್ ಚಂದ್ರಶೇಖರ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿ ನಾನು ರೈತ ಸಂಘದ ಅಧ್ಯಕ್ಷನಾಗಿ ಹೇಳುತ್ತಿದ್ದೇನೆ, ಸಭೆಯಲ್ಲಿ ಯಾರೂ ದಾರಿ ತಪ್ಪಿಸುವ ಕೆಲಸ ಮಾಡಬೇಡಿ, ಗೊಂದಲಕ್ಕೀಡುಮಾಡಬೇಡಿ. ಸಭೆಯ ಅಭಿಪ್ರಾಯದಂತೆ ರೆಸಲ್ಯೂಷನ್ ಬರೆಸಿ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಿ ಎಂದು ಮನವಿ ಮಾಡಿದರು. ಎಲ್ಲರೂ ಒಳ್ಳೆಯ ರೀತಿ ಕೆಲಸ ಮಾಡಿ ನಮಗೆ ಡಿವಿಡೆಂಡ್ ಕೊಡಿ ಎಂದು ಹೇಳಿದರು. ಸದಸ್ಯರಾದ ಶ್ರೀ ಡಿ ಆರ್ ಶಿವಕುಮಾರ್‌ರವರು ಮಾತನಾಡಿ ಇವರು ನೀಡಿರುವ ಮಾನಸಿಕ ಒತ್ತಡದಿಂದಲೇ ಶ್ರೀ ಎನ್ ಆರ್ ಜಗದೀಶ್‌ರವರು ಸತ್ತುಹೋದರು, ಇಲ್ಲವಾದರೆ ಇನ್ನೂ 10-15 ವರ್ಷ ಬದುಕಿರುತ್ತಿದ್ದರು ಎಂದು ಹೇಳಿದರು. ನಂತರ ಸದಸ್ಯರಾದ ಶ್ರೀ ರಂಗಪ್ಪರವರು ಮಾತನಾಡಿ ಇಂದಿನ ಸಭೆಯ ನಡಾವಳಿ, ಸಭೆಯಲ್ಲಿರುವ ಸದಸ್ಯರುಗಳ ಒತ್ತಾಯ, 280 ಕ್ಕೂ ಹೆಚ್ಚು ಸದಸ್ಯರು ಬಸವರಾಜುರವರನ್ನು ಸದಸ್ಯತ್ವದಿಂದ ವಜಾ ಮಾಡುವಂತೆ ಕೋರಿ ನೀಡಿರುವ ಪತ್ರ, ಇವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದಾಖಲಿಸಿರುವ ದೂರು ಇವುಗಳನ್ನೆಲ್ಲ ಮಾನ್ಯ ಉಪನಿಬಂಧಕರಿಗೆ ನೀಡಿ, ಜಿ ಎಸ್ ಬಸವರಾಜುರವರನ್ನು ಬ್ಯಾಂಕಿನ ಸದಸ್ಯತ್ವದಿಂದ ವಿಮುಕ್ತಿಗೊಳಿಸುವಂತೆ ಕೋರಿಕೊಳ್ಳುವಂತೆ ತಿಳಿಸಿದರು. ಇದಕ್ಕೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಈ ವಿಚಾರದಲ್ಲಿ ನಿಮ್ಮ ಸಲಹೆಯಂತೆ ಮತ್ತು ಕಾನೂನು ಪ್ರಕಾರವಾಗಿ ಸಹ ಕ್ರಮ ಜರುಗಿಸುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಡಿ ಜೆ ಶಶಿಧರ್ ರವರು ಮಾತನಾಡಿ ನಮಗೆ ವಿಷಯದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಿ ಪುಟ ಸಂಖ್ಯೆ 2 ರಲ್ಲಿ ಮಾತನಾಡುತ್ತಿದ್ದೆವು, ಅದರಲ್ಲಿ ನನ್ನದೊಂದು ಪ್ರಶ್ನೆಯಿದೆ, ಎಂದು ಹೇಳಿದರು. ಮತ್ತೆ ಶ್ರೀ ಜಿ ಎಸ್ ಬಸವರಾಜು ರವರು ಮಾತನಾಡಿ ಈಗ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈಗ ಮಾತನಾಡಿರುವುದನ್ನೆಲ್ಲ ರೆಸಲ್ಯೂಷನ್‌ನಲ್ಲಿ ಬರೆಸಿ ಎಂದಾಗ, ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಬಸವರಾಜುರವರೇ ನೀವೊಬ್ಬರೇ ಮೇಧಾವಿಗಳಂತೆ ಮಾತನಾಡಬೇಡಿ, ಎಲ್ಲವೂ ರೆಸಲ್ಯೂಷನ್‌ನಲ್ಲಿ ದಾಖಲಾಗಿದೆ. ಎಲ್ಲ ಸದಸ್ಯರೂ ನಿಮ್ಮನ್ನು ಸಭೆಯಿಂದ ಈಚೆಗೆ ಕಳುಹಿಸಿ ಎಂದು ಹೇಳಿದ್ದಾರೆ. ನಾವು ನಿಮಗೆ ಗೌರವ ಕೊಟ್ಟು ಸಭೆಯಲ್ಲಿಯೇ ಉಳಿಸಿಕೊಂಡಿದ್ದೇವೆ, ಆ ಗೌರವವನ್ನು ನೀವು ಉಳಿಸಿಕೊಳ್ಳಿ ಎಂದಾಗ ಬಸವರಾಜುರವರು ಕಳುಹಿಸಿ ನೋಡೋಣ, ಅದು ಹೇಗೆ ಆಚೆ ಕಳುಹಿಸುತ್ತೀರ, ಏನು ಮಾತನಾಡುತ್ತಿದ್ದೀರ ಈಚೆ ಹಾಕಿ ನೋಡೋಣ ಎಂದು ಮತ್ತೆ ಗಲಾಟೆ ಪ್ರಾರಂಭಿಸಿದರು. ಅದಕ್ಕೆ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಗೌರವದಿಂದಲೇ ಹೇಳುತ್ತಿದ್ದೇವೆ ಕುಳಿತುಕೊಳ್ಳಿ ಎಂದು ಹೇಳಿದರು.

ಸದಸ್ಯರಾದ ಜಿ ಎಸ್ ಬಸವರಾಜುರವರು ಮಾತನಾಡಿ ಈಗ ಚರ್ಚೆಯಾದಂತೆ ರೂ. 400.00 ಕೋಟಿ ಠೇವಣಿ ಬಸವರಾಜುರವರಿಂದ ಹೊರಗೆ ಹೋಗಿದೆ ಎಂದು ನನ್ನ ಮೇಲೆ ಆರೋಪ ಮಾಡಿರುತ್ತೀರಿ, ಇದಕ್ಕೆ ನನ್ನ ಕಡೆಯಿಂದ ವಿವರಣೆ ಸಹ ಕೇಳಬೇಕು, ಸಭೆಯಲ್ಲಿ ಯಾವತ್ತೂ one way ಆಗಬಾರದು ನನ್ನ ಕಡೆಯಿಂದಲೂ ವಿವರಣೆ ಕೇಳಿ ಎಂದು ಹೇಳುತ್ತಾ ಇದು ಸತ್ಯವೇ, ದಯವಿಟ್ಟು ಇದೇ ಪುಸ್ತಕದ 29 ನೇ ಪುಟ ತೆಗೆಯಿರಿ, 29 ನೇ ಪುಟದಲ್ಲಿ ಠೇವಣಿ ಯಾಕೆ ಹೋಗಿದೆ ಎಂದು ಮುದ್ರಿಸಿ ಸಭೆಗೆ ಕೊಟ್ಟಿದ್ದಾರೆ, ನಾನು ಓದುವುದನ್ನು ದಯವಿಟ್ಟು ಕೇಳಿ ಎಂದು ಕೇಳಿದಾಗ ಇತರೆ ಸದಸ್ಯರುಗಳು ನೀವೊಬ್ಬರೇ ಸಭೆಯಲ್ಲಿ ಮಾತನಾಡುವುದಲ್ಲ. ಬೇರೆಯವರಿಗೂ ಅವಕಾಶ ಮಾಡಿಕೊಡಿ ಎಂದು ಅವರನ್ನು ಸುಮ್ಮನಾಗಿಸಿದರು. ನಂತರ ಸದಸ್ಯರಾದ ಶ್ರೀ ಡಿ ಜೆ ಶಶಿಧರ್‌ರವರು ಮಾತನಾಡಿ 2022-23 ರಲ್ಲಿ ಅಂಕಿ ಅಂಶಗಳು ಎಲ್ಲಾ ನೆಗೆಟಿವ್‌ನಲ್ಲಿದೆ. ಇದಕ್ಕೆ ವಿವರಣೆ ಕೊಡಿ ಸಿ.ಆರ್.ಎ.ಆರ್ ಜಾಸ್ತಿಯಾಗಿದೆ. ಕಳೆದ ವರ್ಷ 11% ಇದ್ದದ್ದು ಈ ವರ್ಷ 15% ಆಗಿದೆ, ಎನ್.ಪಿ.ಎ ಜಾಸ್ತಿಯಾಗಿದೆ. ಸರ್ಕಾರಿ ಆದೇಶದಂತೆ ಸಿ.ಆರ್.ಎ.ಆರ್ 6% ಒಳಗೆ ಇರಬೇಕಾಗಿದ್ದು, ನೀವು ಯಾವಾಗಲೂ ಜಾಸ್ತಿ ಮಾಡುತ್ತಿದ್ದೀರ ಎಂದಿದ್ದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಸಾಲ ಕಡಿಮೆಯಾಗಿರುವುದರಿಂದ, risk ಕಡಿಮೆಯಾಗಿರುವುದರಿಂದ loss ಕಡಿಮೆಯಾಗಿದೆ ಆದ್ದರಿಂದ ಸಿ.ಆರ್.ಎ.ಆರ್ ಜಾಸ್ತಿಯಾಗಿದೆ ಎಂದು ವಿವರಿಸಿದರು ಅದಕ್ಕೆ ಸದಸ್ಯರು loss ಕಡಿಮೆಯಾದರೆ ಸಿ.ಆರ್.ಎ.ಆರ್ ಕಡಿಮೆಯಾಗಬೇಕು, ಜಾಸ್ತಿಯಾಗಿದೆ, ನೀವು ಉಲ್ಟಾ ಹೇಳುತ್ತಿದ್ದೀರ ಎಂದು ಹೇಳಿದಾಗ ಅಧ್ಯಕ್ಷರು loss ಕಡಿಮೆಯಾದರೆ ಸಿ.ಆರ್.ಎ.ಆರ್ ಜಾಸ್ತಿಯಾಗುತ್ತದೆ ನೀವೂ ಸಹ ಬ್ಯಾಂಕಿನಲ್ಲಿ ಕೆಲಸ ಮಾಡಿದ್ದು, ನಿಮಗೆ ನಾವು ಹೇಳಿಕೊಡಬೇಕಾ ಎಂದು ಅವರ ಪ್ರಶ್ನೆಗೆ ಉತ್ತರಿಸಿದರು. ಮತ್ತೆ ಜಿ ಎಸ್ ಬಸವರಾಜುರವರು ಮಾತನಾಡಿ ಆಡಳಿತ ವರದಿ ಪುಟ ಸಂಖ್ಯೆ 29 ರಲ್ಲಿ ಪತ್ರಿಕಾ ಮಾಧ್ಯಮದಲ್ಲಿ ಸಹಕಾರ ಬ್ಯಾಂಕುಗಳ ಬಗ್ಗೆ ಪ್ರತೀಕೂಲ ವರದಿ ಪ್ರಕಟವಾದ ಪರಿಣಾಮ ಬ್ಯಾಂಕಿನ ವ್ಯವಹಾರವು ಕುಂಠಿತವಾಗಿರುವುದಾಗಿ ತಾವೇ ಮುದ್ರಿಸಿದ್ದೀರ ಎಂದು ಹೇಳಿದಾಗ ಬಾಕಿ ಸದಸ್ಯರು ಅವರನ್ನು ಬಿಟ್ಟು ಸಭೆ ಮುಂದುವರೆಸಿ ಎಂದು ಹೇಳಿದರು.

ಮುಂದೆ ಲೆಕ್ಕಪರಿಶೋಧನಾ ವರದಿ ಮಂಡಿಸುವ ವಿಷಯ ಬಂದಾಗ ಸದಸ್ಯರಾದ ಶ್ರೀ ಡಿ ಜೆ ಶಶಿಧರ್ ರವರು ಮೊದಲು ಆಡಳಿತ ವರದಿ ಪೂರ್ತಿಯಾಗಿ ಮುಗಿಯಲಿ ನಂತರ ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಚರ್ಚಿಸೋಣ ಎಂದಾಗ (ಪ್ರ) ಉಪಾಧ್ಯಕ್ಷರಾದ ಸಿ ಆರ್ ನಟರಾಜ್ ರವರು ತಾವು ಕೇಳಿರುವ ಪ್ರಶ್ನೆ ಲೆಕ್ಕಪರಿಶೋಧನಾ ವರದಿಯಲ್ಲಿಯೂ ಬರುತ್ತದೆ ಎಂದು ಹೇಳಿದರು. ಆದರೆ ಶ್ರೀ ಜಿ ಎಸ್ ಬಸವರಾಜು ರವರು ಮತ್ತೆ ಸಭೆ ಮುಂದುವರೆಸಲು ಬಿಡದೆ ಗಲಾಟೆ ಶುರುಮಾಡಿದಾಗ ಅಧ್ಯಕ್ಷರು ದಯವಿಟ್ಟು ಸಭೆ ನಡೆಸಲು ಅವಕಾಶ ಮಾಡಿಕೊಡಿ ಎಂದು ಕೋರಿದರು. ಅದರಂತೆ ಬಾಕಿ ಎಲ್ಲಾ ಸದಸ್ಯರು ಸಭೆ ಮುಂದುವರೆಸುವಂತೆ ಹೇಳಿ ಆಡಳಿತ ವರದಿಗೆ ಅನುಮೋದನೆಯನ್ನು ನೀಡಿದರು.

7. ಬ್ಯಾಂಕಿನ ಶಾಸನಬದ್ಧ ಲೆಕ್ಕ ಪರಿಶೋಧಕರು ಬಿಡುಗಡೆಗೊಳಿಸಿರುವ 2022-23 ನೇ ಸಾಲಿನ ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಹಾಗೂ ಆಡಳಿತ ಮಂಡಳಿಯವರ ಸಮಾಧಾನಗಳನ್ನು ಸಭೆಯ ಅಂಗೀಕಾರಕ್ಕಾಗಿ ಮಂಡಿಸುವುದು.

ಸಭೆಯಲ್ಲಿ ಮತ್ತೆ ಶ್ರೀ ಜಿ ಎಸ್ ಬಸವರಾಜುರವರು ಮಾತು ಪ್ರಾರಂಭಿಸಿದಾಗ ಸದಸ್ಯರೆಲ್ಲರೂ ಬೇರೆಯವರಿಗೂ ಮಾತನಾಡಲು ಅವಕಾಶ ಮಾಡಿಕೊಡಿ ಎಂದಾಗ ಅವರವರಲ್ಲಿಯೇ ಚರ್ಚೆ ನಡೆಯಿತು ನಂತರ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಸಭೆ ಮುಂದುವರೆಸಲು ಅವಕಾಶ ಮಾಡಿಕೊಡಿ ಎಂದು ಸಭೆಗೆ ಕೇಳಿಕೊಂಡರು, ಆಗ ಸದಸ್ಯರು ಸಭೆಯಲ್ಲಿ ಇಂತಹವರು ಇದ್ದೇ ಇರುತ್ತಾರೆ, ನೀವು ಸಭೆಯನ್ನು ಮುಂದುವರೆಸಿ ಎಂದು ಹೇಳಿದರು. ಬ್ಯಾಂಕಿನ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಸದಸ್ಯರೆಲ್ಲರಿಗೂ ನಮಸ್ಕರಿಸುತ್ತಾ 2022-23 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಗೆ ಮಂಡಿಸುತ್ತಿದ್ದು, ಲೆಕ್ಕ ಪರಿಶೋಧನಾ ವರದಿಯ ಪುಟ ಸಂಖ್ಯೆ ತಿಳಿಸುತ್ತೇನೆ, ಯಾವ ಪುಟ ಸಂಖ್ಯೆಯಲ್ಲಿ ಯಾರಿಗಾದರೂ ಅನುಮಾನಗಳಿದ್ದರೆ ಸದಸ್ಯರು ಕೇಳಬಹುದು ಎಂದು ತಿಳಿಸಿದರು. ಸದಸ್ಯರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬಹುದು ಆದರೆ ಅದರ ನಂತರ ಚರ್ಚೆಗೆ ಅವಕಾಶವಿಲ್ಲ. ಇನ್ನೂ ಏನಾದರೂ ಅನುಮಾನಗಳಿದ್ದರೆ Higher Authorities ಹತ್ತಿರ ಚರ್ಚೆ ಮಾಡಬಹುದು ಎಂದು ಹೇಳಿದರು. ಪುಟ ಸಂಖ್ಯೆ 1,2,3,4,5,6,7,8,9 ಎಂದು ಹೇಳಿದಾಗ ಸದಸ್ಯರಾದ ಶ್ರೀ ಡಿ ಜೆ ಶಶಿಧರ್ ರವರು ಪುಟ ಸಂಖ್ಯೆ 9 ರಲ್ಲಿ ವರದಿಯಲ್ಲಿ ಹಲವಾರು ನ್ಯೂನತೆಗಳನ್ನು ಸರಿಪಡಿಸಿಕೊಂಡಿದ್ದು, ಉಳಿದ ನ್ಯೂನತೆಗಳನ್ನು ಹಂತ ಹಂತವಾಗಿ ಸರಿಪಡಿಸಿಕೊಳ್ಳಲಾಗುತ್ತಿದೆ ಎಂದು ನಮೂದಿಸಿದ್ದು, ಇನ್ನೂ ಯಾವ ಯಾವ ನ್ಯೂನತೆಗಳಿವೆ ಎಂದು ಕೇಳಿದರು ಅದಕ್ಕೆ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್ ರವರು ಮಾತನಾಡಿ ಇಲ್ಲಿ ನಮೂದಿಸಿರುವ ನ್ಯೂನತೆಗಳು ಸಾಮಾನ್ಯ ನ್ಯೂನತೆಗಳಾಗಿದ್ದು, ಯಾವುದೇ ನಿರ್ದಿಷ್ಟವಾದ ಅಥವಾ ಹೊಸ ವಿಷಯದ ಬಗ್ಗೆ ಇರುವುದಿಲ್ಲ ಎಂದು ಹೇಳಿದಾದ ಸದಸ್ಯರಾದ ಶ್ರೀ ಡಿ ಜೆ ಶಶಿಧರ್ ರವರು ಅದೇ ಪುಟದಲ್ಲಿರುವ ಕೆಲವು ನ್ಯೂನತೆಗಳು ಅಂದರೆ ಚಿನ್ನಾಭರಣ ಸಾಲ ಮಂಜೂರಾತಿ ಸಮಯದಲ್ಲಿ ಮಂಜೂರಾತಿ ಪತ್ರ ನೀಡಿರುವುದಿಲ್ಲ, ಲಾಕರ್ ಖಾತೆಗೆ ಸಂಬಂಧಿಸಿದಂತೆ ಅರ್ಜಿ, ಕೆವೈಸಿ ಧೃಡೀಕರಣ, ವಾರಸುದಾರರ ಮಾಹಿತಿ ಹೀಗೆ ಬರೆದಿರುತ್ತಾರೆ ಎಂದಾಗ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್ ರವರು ಇವೆಲ್ಲ ಸಾಮಾನ್ಯ ನ್ಯೂನತೆಗಳು ಇವನ್ನೆಲ್ಲ ಹಂತಹಂತವಾಗಿ ಸರಿಪಡಿಸಲಾಗುತ್ತಿದೆ ಎಂದಾಗ ಸದಸ್ಯರು ಇವು ಸಾಮಾನ್ಯ ನ್ಯೂನತೆಗಳಲ್ಲ. 3 ವರ್ಷಗಳಿಂದ ಬರುತ್ತಲೇ ಇವೆ. ಇವುಗಳನ್ನು ಆದಷ್ಟು ಬೇಗ ಸರಿಪಡಿಸಬೇಕು ಎಂದಾಗ ಶ್ರೀ ಸಿ ಆರ್ ನಟರಾಜ್ ರವರು ಈ ವರ್ಷದಲ್ಲಿ ಎಲ್ಲವನ್ನು ಸರಿಪಡಿಸುತ್ತೇವೆ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ಕೆಲವೊಂದು ಖಾತೆಗಳಲ್ಲಿ ಕೆವೈಸಿ ದಾಖಲೆಗಳನ್ನು ಪಡೆದಿರುವುದಿಲ್ಲ, ಕೆಲವೊಂದು ಲಾಕರ್ ಹೊಂದಿರುವ ಹಳೇ ಗ್ರಾಹಕರು ಆಪರೇಟ್ ಮಾಡಲು ಬಂದಿಲ್ಲದಿರುವುದರಿಂದ ಅವರ ಕೆವೈಸಿ ಪಡೆಯಲು ಸಾಧ್ಯವಾಗಿರುವುದಿಲ್ಲ, ಇವನ್ನೆಲ್ಲ ಆದಷ್ಟು ಬೇಗೆ ಬಗೆಹರಿಸುತ್ತೇವೆ ಎಂದು ಹೇಳಿದರು. ನಂತರ ಸದಸ್ಯರಾದ ಶ್ರೀ ಡಿ ಜೆ ಶಶಿಧರ್ ರವರು ಮತ್ತೆ ವ್ಯವಹಾರ ಸಂಸ್ಥೆಗಳ ಸ್ಥಿರಾಸ್ತಿ ಸಾಲಗಳ ಮಂಜೂರಾತಿ ಸಂದರ್ಭದಲ್ಲಿ ದಾಖಲೆಗಳು ಅಪೂರ್ಣವಿದ್ದರೂ ಸಾಲ ಮಂಜೂರು ಮಾಡಲಾಗಿದೆ. ಅಗತ್ಯ ದಾಖಲೆಗಳಾದ ಪ್ರಾಜೆಕ್ಟ್ ವರದಿ, ರೇರಾ ಅನುಮೋದನೆ, ಆರ್ಥಿಕ ತಃಖ್ತೆಗಳು ಮತ್ತು ಹಂತ ಹಂತವಾಗಿ ಸಾಲ ಬಿಡುಗಡೆ ಆಗಿಲ್ಲದಿರುವುದು ವರದಿಯಾಗಿದೆ ಎಂದು ವರದಿ ಮಾಡಲಾಗಿದೆ ಎಂದಾಗ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್ ರವರು ಮಾತನಾಡಿ ಈ ವರ್ಷದಲ್ಲಿ ಎಲ್ಲಾ ದಾಖಲೆಗಳನ್ನು ಪಡೆಯಲಾಗುತ್ತಿದೆ ಎಂದು ಹೇಳಿದರು.

ಮತ್ತೆ ಪುಟ ಸಂಖ್ಯೆಗಳನ್ನು ಮುಂದುವರೆಸಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ಪುಟ ಸಂಖ್ಯೆ 11 ರಲ್ಲಿ ಕೆ ಆರ್ ಮೊಹಲ್ಲಾ ಶಾಖೆ, ಜಯನಗರ ಶಾಖೆ, ರಾಜಾಜಿನಗರ ಶಾಖೆಗಳಲ್ಲಿ ವರದಿಯಲ್ಲಿ ನಮೂದಿಸಿರುವ 3 ಖಾತೆಗಳಿಗೆ ನೀಡಿರುವ ಸಾಲಗಳ ದಾಖಲಾತಿಗಳು ನಕಲಿ ಎಂದಾಗಿದ್ದು, ಇದು ಯಾವ ರೀತಿ ನಕಲಾಗುತ್ತದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಬ್ಯಾಂಕಿನ ಕಾನೂನು ಸಲಹೆಗಾರರು ದಾಖಲೆಗಳನ್ನು ನೋಡಿರುತ್ತಾರೆ. ಉಪ ಸಮಿತಿ ಸಭೆಯವರು ಸ್ಥಿರಾಸ್ತಿಯನ್ನು ಪರಿವೀಕ್ಷಣೆ ಮಾಡಿರುವುದಿಲ್ಲವಾ, ಕಾರ್ಯಕಾರಿ ಮಂಡಳಿಯವರದು ಇದರಲ್ಲಿ ಜವಾಬ್ದಾರಿ ಏನು? ಸ್ವಲ್ಪ ಹಿಂದೆ ಯೋಚಿಸಿ ಮಾತನಾಡುವುದಾದರೆ ನಾನು ಬೆಂಗಳೂರಿನಲ್ಲಿ ಶಾಖೆ ತೆರೆಯುವಾಗಲೇ ಕಾರ್ಯಕಾರಿ ಮಂಡಳಿಯವರಿಗೆ ಹುಷಾರಾಗಿ ನೋಡಿಕೊಂಡು ಸಾಲ ಕೊಡಿ ಎಂದು ಹೇಳಿದ್ದೆ, ಬ್ಯಾಂಕಿನಲ್ಲಿ ಇಷ್ಟು ಎನ್.ಪಿ.ಎ ಆಗಲು ನಾವು ಬೆಂಗಳೂರಿನಲ್ಲಿ ಶಾಖೆಗಳನ್ನು ತೆರೆದು ದೊಡ್ಡ ದೊಡ್ಡ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಸಾಲವನ್ನು ನೀಡಿರುವುದೇ ಇದಕ್ಕೆ ಕಾರಣ, ನಾನು ಬ್ಯಾಂಕನ್ನು ದೊಡ್ಡದಾಗಿ ಬೆಳೆಸಿರುವುದನ್ನು ತಪ್ಪು ಎಂದು ಹೇಳುತ್ತಿಲ್ಲ, ಬೆಳವಣಿಗೆ ಆಗಬೇಕು, ಟಿ.ಜಿ.ಎಂ.ಸಿ ಬ್ಯಾಂಕು ಈ ಮಟ್ಟಕ್ಕೆ ಬೆಳೆದಿರುವುದರಲ್ಲಿ ಎ.ಕೆ.ಎ ಪಾರ್ಶ್ವನಾಥ್‌ರವರಿಂದ ಹಿಡಿದು ಎನ್ ಆರ್ ಜಗದೀಶಾರಾಧ್ಯರವರ ವರೆಗೂ ಬಹಳ ಶ್ರಮಿಸಿದ್ದು, ಬ್ಯಾಂಕು ಈ ಮಟ್ಟಕ್ಕೆ ಬೆಳೆಯಲು ಅವರೇ ಕಾರಣಕರ್ತರು, ಅವರ ಮಾರ್ಗದರ್ಶನದಲ್ಲಿ ಈ ಮಟ್ಟಕ್ಕೆ ಬೆಳೆದಿದ್ದು, ಇತ್ತೀಚಿನ ವರ್ಷಗಳಲ್ಲಿ ಅಂದರೆ ಕಳೆದ 10-15 ವರ್ಷಗಳಲ್ಲಿ ನೀವು ಬೆಂಗಳೂರಿನಲ್ಲಿ 10-20 ಕೋಟಿಗಳಲ್ಲಿ ಸಾಲ ಕೊಟ್ಟಾಗಲೇ ನಾನು ಹೇಳಿದ್ದೆ, ನೀವು ಅಷ್ಟು ಸಾಲ ಕೊಡುವಾಗ ಹೆಚ್ಚುವರಿ ಸ್ಥಿರಾಸ್ತಿಯನ್ನು ತೆಗೆದುಕೊಳ್ಳಿ ಅಥವಾ ಜಾಮೀನುದಾರರದ್ದೇ ಆಸ್ತಿಯನ್ನು ತೆಗೆದುಕೊಳ್ಳಿ ಎಂದು, ನೀವು ಹಾಸ್ಪಿಟಲ್ ಆಗಲಿ, ಸ್ಕೂಲ್ ಆಗಲಿ ಇಂತಹ ಸಂಸ್ಥೆಗಳಿಗೆ ಸಾಲ ಕೊಡುವಾಗ ಬೇರೆ ಸ್ಥಿರಾಸ್ತಿಗಳನ್ನು ತೆಗೆದುಕೊಳ್ಳಬೇಕು, ಏಕೆಂದರೆ ಹಾಸ್ಪಿಟಲ್, ಶಾಲೆ ಇಂತಹವುಗಳನ್ನು ನೀವು ವಸೂಲಾತಿಗೆ ಹೋದಾಗ ಅದನ್ನು ಮುಚ್ಚಿಸಲು ಸಾಧ್ಯವಾಗುವುದಿಲ್ಲ, ಇಂತಹ ಸಂದರ್ಭದಲ್ಲಿ ಆಡಳಿತ ಮಂಡಳಿಯವರು ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡಬೇಕು, ಬೆಂಗಳೂರಿನಲ್ಲಿ ಆಗ ಕರ್ತವ್ಯ ನಿರ್ವಹಿಸುತ್ತಿದ್ದ ಕೆಲವು ಅಧಿಕಾರಿ/ಸಿಬ್ಬಂದಿ ವರ್ಗದವರೂ ಸಹ ಅವ್ಯವಹಾರ ಮಾಡಿರುವುದಾಗಿ ಕೇಳಿಬಂದಿದ್ದು, ನೀವು ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡಬೇಕಿತ್ತು ಎಂದು ತಿಳಿಸಿದರು. ನಾನೂ ಸಹ ಈ ಹಿಂದೆ 10 ವರ್ಷ ಆಡಳಿತ ಮಂಡಳಿಯಲ್ಲಿ ಕೆಲಸ ನಿರ್ವಹಿಸಿದ್ದೇನೆ ಆ ಸಂದರ್ಭದಲ್ಲಿ ಆರ್.ಬಿ.ಐ ನಿಂದ ಬಂದಂತಹ ಹಲವಾರು ನಿಯಮಗಳನ್ನು ಅಳವಡಿಸಿಕೊಂಡಿದ್ದೇನೆ. ಅದರಲ್ಲಿ ಒಂದು Movable asset ಮೇಲೆ ಸಾಲ ಕೊಡಬೇಕಾದರೆ ಹೆಚ್ಚುವರಿ ಭದ್ರತೆ ತೆಗೆದುಕೊಂಡೇ ಕೊಡಬೇಕು ಎಂದು ಒಂದು ನಿಯಮ ಜಾರಿಗೆ ತಂದಿದ್ದು, ಅಂದು ಸಭೆಯಲ್ಲಿದ್ದ ಒಬ್ಬ ನಿರ್ದೇಶಕರು ನನ್ನ ಮೇಲೆ ಬೇಜಾರು ಮಾಡಿಕೊಂಡಿದ್ದು, 6 ತಿಂಗಳ ನಂತರ ಅವರೇ ಹೇಳಿದರು, ನೀವು ಈ ನಿಯಮ ತಂದಿದ್ದು ಒಳ್ಳೆಯದೇ ಆಯಿತು, ಬ್ಯಾಂಕಿನ safety ನಮಗೆ ತುಂಬಾ ಮುಖ್ಯ ಎಂದು ಹೇಳಿದರು, ಬೆಂಗಳೂರಿನ ಇಬ್ಬರಿಗೆ ತಲಾ ರೂ. 7,50,000/- ಗಳ ವಾಹನ ಸಾಲ ನೀಡಿದ್ದು, ಅವರು DD ತೆಗೆದುಕೊಂಡು ಮೋಸ ಮಾಡಿರುತ್ತಾರೆ. ನೀವು ರಸ್ತೆಯಲ್ಲಿ ಹೋಗುವವರಿಗೆಲ್ಲ ಸಾಲ ಕೊಟ್ಟಿರುತ್ತೀರ, ನಿಮ್ಮ ಹತ್ತಿರ ಅವರಿಗೆ ಸಂಬಂಧಪಟ್ಟ ಬೇರೆ ದಾಖಲೆಗಳು ಇರುವುದಿಲ್ಲವೇ? ನಿಮ್ಮ ಶಾಖೆಗಳಲ್ಲಿ follow-up ಮಾಡುವುದಿಲ್ಲವಾ? ನೀವು

ಆಡಳಿತ ಮಂಡಳಿಯವರು ಕಷ್ಟಪಟ್ಟು ಕೆಲಸ ನಿರ್ವಹಿಸುತ್ತಿದ್ದೀರ ಸರಿ, ಆದರೂ ಕೆಲವೊಂದು ತಪ್ಪುಗಳಾಗುತ್ತದೆ. ಕೆಲವೊಮ್ಮ ಸದಸ್ಯರ ಮಾತುಗಳನ್ನೂ ಕೇಳಿ ಎಂದು ಹೇಳಿದರು, ಜಯನಗರ ಶಾಖೆಯಲ್ಲಿ 2003 ರಲ್ಲಿ ಅಥವಾ 2005 ರಲ್ಲಿ ಸಾಲ ಕೊಟ್ಟಿರುತ್ತೀರ, ಈ ವಿಷಯದ ಬಗ್ಗೆ ನಾನು ಕಳೆದ 2 ಸಭೆಗಳಲ್ಲಿಯೂ ಪ್ರಶ್ನಿಸಿದ್ದೇನೆ, ಆದರೆ ನೀವು ನನಗೆ ಸಮಂಜಸವಾದ ಉತ್ತರಗಳನ್ನು ನೀಡಿರುವುದಿಲ್ಲ, ನೀವು ಪದೇ ಪದೇ ಅದೇ ಪ್ರಶ್ನೆಗಳನ್ನು ಕೇಳುತ್ತೀರ ಎಂದು ಹೇಳಿದಿರಿ ಎಂದು ಹೇಳಿದಾಗ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ದಯವಿಟ್ಟು ಈ ವಿಷಯ ಬಂದಾಗ ಅದರ ಬಗ್ಗೆ ಚರ್ಚಿಸೋಣ ಎಂದು ಹೇಳಿದಾಗ ಶ್ರೀ ಕೆ ಜಿ ಮುನಿಗಂಗಪ್ಪ ರವರು ನೀವು ಕಳೆದ 2 ಬಾರಿಯೂ online meeting ನಲ್ಲಿ ನಮ್ಮನ್ನು ಮಾತನಾಡಲು ಬಿಟ್ಟಿರುವುದಿಲ್ಲ ಎಂದು ಹೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ಮಾನ್ಯ ಸದಸ್ಯರು ಈ ಹಿಂದೆ ನಮ್ಮ ಬ್ಯಾಂಕಿನಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ, ಅವರ ಸಲಹೆ ಸೂಚನೆ ಮತ್ತು ಮಾರ್ಗದರ್ಶನ ಯಾವಾಗಲೂ ನಮಗೆ ಇರುತ್ತದೆ ಎಂದು ಹೇಳಿ ಅವರ ಪ್ರಶ್ನೆಗೆ ಮುಂದಿನ ಪುಟದಲ್ಲಿ ಸಮಾಧಾನವನ್ನು ಮುದ್ರಿಸಿದ್ದು ಅದನ್ನು ಅವರಿಗೆ ಓದಿ ತಿಳಿಸಿದರು ಮತ್ತು ಈಗ ಸಾಲ ಕೊಡುವ ಮುನ್ನ search report ಸಹಾ ಮಾಡಿಸುತ್ತಿದ್ದು, ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೇವೆ ಎಂದು ತಿಳಿಸಿದರು. ನಂತರ ಶ್ರೀ ಸಿ ಆರ್ ನಟರಾಜ್ ರವರೂ ಸಹಾ ನಿಮ್ಮ ಸಲಹೆಯನ್ನು ಇನ್ನು ಮುಂದೆ ಪರಿಗಣಿಸುತ್ತೇವೆ, ಸಭೆ ಮುಂದುವರೆಸಲು ಅವಕಾಶ ಕೊಡಿ ಎಂದು ಕೇಳಿ ಮತ್ತೆ ಪುಟ ಸಂಖ್ಯೆ 12, 13, 14 ಎಂದು ಮುಂದುವರೆಸಿದಾಗ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ಪುಟ ಸಂಖ್ಯೆ 14 ರಲ್ಲಿ ಜಯನಗರದ ಶಾಖೆಯಲ್ಲಿ ಒಂದೇ ಸಮೂಹಕ್ಕೆ ಸಂಬಂಧಿಸಿದಂತೆ 4 ಸಾಲಗಳನ್ನು ನೀಡಿದ್ದು, ಅದರಲ್ಲಿ 1,50,00,000/- OD ನೀಡಿದ್ದು, ಅದಕ್ಕೆ ಒಂದು ಮುಕ್ಕಾಲು ಕೋಟಿ ಬಡ್ಡಿ ಆಗಿದ್ದು, ಒಂದುವರೆ ಕೋಟಿ OD ಇರುವುದು ಮೂರು ಕಾಲು ಕೋಟಿ ಆಗಿದೆ, ನೀವು ಇಷ್ಟು ವರ್ಷದಿಂದ ಏನು ಮಾಡುತ್ತಿದ್ದೀರಿ, ನಮಗೆ OD ಕೊಡುತ್ತೀರ, ವರ್ಷಕ್ಕೆ ಒಂದು ಬಾರಿ ನವೀಕರಿಸಿಕೊಳ್ಳಬೇಕು ಇಲ್ಲವಾದರೆ ನಮ್ಮ ಖಾತೆಯಲ್ಲಿ ನಮ್ಮ ವ್ಯವಹಾರ ಬಂದ್ ಮಾಡುತ್ತೀರ, ನೀವು ಈ ತರಹ ಸಾಲ ಕೊಟ್ಟು ವಸೂಲಾತಿಗೆ ಹೋಗದೇ ಇರುವುದಕ್ಕೆ ಇಂದು ನಮ್ಮ ಬ್ಯಾಂಕು ರೂ. 500.00 ಕೋಟಿ ಎನ್ ಪಿ ಎ ಆಗಿದೆ. ಕೋವಿಡ್‌ನಿಂದ ನಮ್ಮ ಬ್ಯಾಂಕಿಗೆ ಏನೂ ತೊಂದರೆ ಆಗಿಲ್ಲ, 2020 ಕ್ಕೆ ಮುಂಚೆನೇ ರೂ. 450.00 ಕೋಟಿ ಸುಸ್ತಿಯಾಗಿದೆ. ಹಿಂದಿನ ಸಭೆಯಲ್ಲಿ ಯಾರೋ ಕೋಲಾರದವರು ತೆಗೆದುಕೊಂಡುಬಿಟ್ಟಿದ್ದಾರೆ, ರೂ. 14.00 ಕೋಟಿಗೆ ವ್ಯಾಪಾರ ಆಗಿಬಿಟ್ಟಿದೆ. ನಮ್ಮದು ರೂ. 7.30 ಕೋಟಿ ಮೊತ್ತ ಪೂರ್ತಿ ಬಂದುಬಿಡುತ್ತದೆ ಎಂದು ಹೇಳಿ 2 ವರ್ಷ ಆಗಿದೆ ಇನ್ನೂ ಬಂದಿಲ್ಲ. ಪದೇ ಪದೇ ನಾವು ಅದನ್ನೇ ಹೇಳಲು ಸಾಧ್ಯವಿಲ್ಲ. ನಮ್ಮಲ್ಲಿ ಸಾಲ ಕೊಟ್ಟ ಮೇಲೆ follow-up ಬಹಳ ಕಡಿಮೆ ಇದೆ, ಸಾಲ ಕೊಡುವಾಗ ಇರುವ ಮುತುವರ್ಜಿ ವಸಾಲಾತಿ ಮಾಡುವಾಗ ತೆಗೆದುಕೊಂಡಿರುವುದಿಲ್ಲ ಎಂದು ಹೇಳಿದಾಗ ಬ್ಯಾಂಕಿನ ಮತ್ತೊಬ್ಬ ಸದಸ್ಯರಾದ ಶ್ರೀ ಪಿ ಸದಾಶಿವಯ್ಯ ರವರು ಮಾತನಾಡಿ ನೀವು 3 ಕಂತು ಕಟ್ಟದೇ ಇದ್ದಾಗಲೇ ಕಾನೂನು ಕ್ರಮ ತೆಗೆದುಕೊಳ್ಳಬಹುದಾಗಿದ್ದು ಯಾಕೆ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ಕೇಳಿದರು. ಮತ್ತೆ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ಬಹಳಷ್ಟು waive off ಕೇಳಿದ್ದು, ಇತರೇ ವಿಷಯದಲ್ಲಿ 24 ಕೇಸಿನಿಂದ ಒಟ್ಟು ಒಂದು ಕೋಟಿ ಚಿಲ್ಲರೆ waive off ಮಾಡಲು ನೀವೇ ಬರೆದುಕೊಂಡಿರುತ್ತೀರಿ, ಅದರಲ್ಲಿ 4 ಕೇಸು unsecured ಮತ್ತು 20 ಕೇಸು secured loan, ಇದರಲ್ಲಿ ಎಲ್ಲ ರೂ. 4 ರಿಂದ ರೂ. 5 ಲಕ್ಷಗಳ ಸಾಲ, ಇಷ್ಟು ಸಣ್ಣಸಾಲಗಳನ್ನು ನೀವು ವಸೂಲಿ ಮಾಡಲು ಸಾಧ್ಯವಾಗಲಿಲ್ಲವೆ? ಮತ್ತು ಎರಡನೆಯದಾಗಿ ಇಷ್ಟು ಸಾಲಗಳನ್ನು waive off ಕೇಳುತ್ತಿದ್ದು, ಆದರೆ ನಮ್ಮ ಸದಸ್ಯರಿಗೆ 25 ವರ್ಷಗಳಿಂದ ರೂ. 25000/- ಗಳ ಜಂಟಿ ಸಾಲ ಮಾತ್ರ ನೀಡುತ್ತಿದ್ದು ಇವತ್ತಿನ ದಿನಗಳಿಗೆ ರೂ. 25000/- ಬದಲಾಗಿ ರೂ. 50000/- ಗಳಿಗೆ ಹೆಚ್ಚಿಸಿ ಕೊಡಿ, ನಾವು ನಮ್ಮ ವರ್ತಕರಿಗೋಸ್ಕರ ಬ್ಯಾಂಕು ಪ್ರಾರಂಭಿಸಿದ್ದು, ವರ್ತಕರಿಗೆ ಜಂಟಿ ಸಾಲ ನೀಡುತ್ತಿದ್ದು ಅವರಿಗೆ ಅನುಕೂಲವಾಗುವಂತೆ ರೂ. 50000/- ಗಳಿಗೆ ಹೆಚ್ಚಿಸಿ ಕೊಡಿ, ಯಾರಾದರೂ 5 ರಿಂದ 6 ಜನ ಸುಸ್ತಿಯಾದರೂ ಕಡಿಮೆ ಮೊತ್ತದಲ್ಲಿ ಆಗುತ್ತದೆ. ಯಾರೋ ಲಕ್ಷಗಟ್ಟಲೆ ಸಾಲ ತೆಗೆದುಕೊಂಡು ದುರುಪಯೋಗ ಮಾಡುವುದಕ್ಕಿಂತ ನಮ್ಮ ವರ್ತಕರಿಗೆ ಜಂಟಿ ಸಾಲ ಕೊಡಿ ಎಂದರು, ಅದಕ್ಕೆ ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜುರವರು ಮಾತನಾಡಿ ನಾವು ಈಗ ಲೆಕ್ಕಪರಿಶೋಧನಾ ವರದಿಯನ್ನು ಓದುತ್ತಿದ್ದು, ನೀವು ಈ ಪ್ರಶ್ನೆಯನ್ನು ಇತರೇ ವಿಷಯಗಳನ್ನು ಓದುವಾಗ ಹೇಳಿ ಎಂದಾಗ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ನಾನು ಹೆಚ್ಚಾಗಿ ಪ್ರಶ್ನೆ ಮಾಡುವುದಿಲ್ಲ, ಇನ್ನು ಒಂದು ಪ್ರಶ್ನೆ ಮಾತ್ರ, ನಾನು ಬ್ಯಾಂಕಿನಲ್ಲಿ ಈ ಹಿಂದೆ 10 ವರ್ಷ ಬ್ಯಾಂಕಿನಲ್ಲಿ ಬಹಳ ಕಷ್ಟ ಪಟ್ಟು ಕೆಲಸ ಮಾಡಿದ್ದು, ಆಗ ರೂ. 8 ರಿಂದ ರೂ. 9 ಕೋಟಿ ಠೇವಣಿ ಇದ್ದು, ಠೇವಣಿ ತರಲು ಮನೆ ಮನೆಗೆ ಓಡಾಡಿದ್ದೇವೆ. ಈ ಸಂದರ್ಭದಲ್ಲಿ ನಾನು ಎನ್ ಆರ್ ಜಗದೀಶ್, ಆರ್ ಜೆ ಅನಂತರಾಜಯ್ಯ, ಪಿ ಜಿ ಶ್ರೀನಿವಾಸ ಶೆಟ್ಟರು ಇವರುಗಳಿಂದ ಬಹಳ ಕೆಲಸ ಕಲಿತಿದ್ದೇನೆ. ನನಗೆ ಇಷ್ಟು ಬ್ಯಾಂಕಿನ ಬಗ್ಗೆ ಅರಿವಾಗಲು ಅವರೇ ಕಾರಣ. ನನಗೆ ಬ್ಯಾಂಕಿನ ಬಗ್ಗೆ ಬಹಳ ಕಾಳಜಿ ಇದೆ, ಈಗ ಬ್ಯಾಂಕಿಗೆ ಬಂದಿರುವ ಕೆಟ್ಟ ಹೆಸರನ್ನು ಹೋಗಲಾಡಿಸಲು ಹಿರಿಯ ಸದಸ್ಯರನ್ನು ಕರೆದು ಸಭೆ ನಡೆಸಲು ಪ್ರಯತ್ನ ಪಟ್ಟಿದ್ದು, ನಿಮ್ಮ ಸಹಕಾರ ನಮಗೆ ಸಿಕ್ಕಿರುವುದಿಲ್ಲ. ಈಗಲಾದರೂ ಒಂದು ಸಭೆ ಸೇರಿಸಿ ಮಾತನಾಡಿ ಬ್ಯಾಂಕಿನಲ್ಲಿರುವ ಸಮಸ್ಯೆಗಳನ್ನು ತಿಳಿಗೊಳಿಸೋಣ ಎಂದು ಹೇಳಿ, ಇಂದಿರಾನಗರ ಶಾಖೆಯಲ್ಲಿ ನೀಡಿರುವ ಒಂದು ಸಾಲದಲ್ಲಿ ರೂ. 3,00,00,000/- ನೀಡಿದ್ದು ನಿಯಮಗಳ ಪ್ರಕಾರ ಅದರ ಆಸ್ತಿ ಐದರಿಂದ ಆರು ಕೋಟಿಗಳಾದರೂ ಇರಬೇಕಾಗಿದ್ದು, ಬ್ಯಾಂಕಿನಿಂದ ಆಸ್ತಿ ಮಾರಿದಾಗ ಬರೀ 1 ಕೋಟಿ 40 ಲಕ್ಷಗಳಿಗೆ ಮಾರಾಟವಾಗಿರುತ್ತದೆ. ನೀವು ಏನು ಕೆಲಸ ಮಾಡುತ್ತಿದ್ದೀರಿ, ಆಗಿನ ಕಾಲದಲ್ಲಿ ಅಷ್ಟು ಕಷ್ಟ ಪಟ್ಟು ಬ್ಯಾಂಕನ್ನು ಬೆಳೆಸಿದ ನಮಗೆ ಬೇಜಾರಾಗುತ್ತದೆ. ನಾನು ಬ್ಯಾಂಕಿನ ಮೇಲಿನ ಕಾಳಜಿಯಿಂದ ಮಾತನಾಡಿದ್ದು, ಯಾರಿಗಾದರೂ ಬೇಜಾರಾಗಿದ್ದರೆ ಕ್ಷಮಿಸಿ ಎಂದರು. ಬ್ಯಾಂಕು ಇಂದು ಇಷ್ಟು ಎನ್.ಪಿ.ಎ ಆಗುವುದಕ್ಕೆ ಮುಖ್ಯ ಬ್ಯಾಂಕಿನ ಉದಾರವಾದ ಸಾಲ ನೀತಿ. ಸರಿಯಾಗಿ ಅರ್ಜಿದಾರರನ್ನು ಪರಿಶೀಲನೆ ಮಾಡದೇ ಇದ್ದಾಗ ಮತ್ತು ಸರಿಯಾಗಿ ಕ್ರಮವಿಲ್ಲದೇ ಸಾಲ ಬಿಡುಗಡೆ ಮಾಡಿದಾಗ, ವಸೂಲಾತಿ ಸರಿಯಾಗಿ ಮಾಡದೇ ಇರುವುದರಿಂದ ಬ್ಯಾಂಕು ಹೀಗೆ ಆಗುತ್ತದೆ, ನಾವು ಪ್ರಾರಂಭದಲ್ಲೇ ಸರಿಮಾಡಿಕೊಳ್ಳಬೇಕು, ಅವರಿಗೆ ವ್ಯವಹಾರ ಅಭಿವೃದ್ಧಿ ಮಾಡಿಕೊಳ್ಳಲು ಬೇಕಾದರೆ ಒಂದು ವರ್ಷ ಕಾಲಾವಕಾಶ ಕೊಡಿ, ಆದರೆ ಅದರ ನಂತರ ಸರಿಯಾಗಿ ಸಾಲ ವಸೂಲಿ ಮಾಡಿ, ಅದು ಬಿಟ್ಟು, 10 ವರ್ಷ ನೀವು ವಸೂಲಾತಿ ಮಾಡಿಲ್ಲ ಎಂದು ನಿಮ್ಮ ವರದಿಯಲ್ಲಿ ಕಾಣಿಸುತ್ತಿದೆ ಎಂದು ಹೇಳಿದರು ಇದಕ್ಕೆ

ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಶ್ರೀ ಕೆ ಜಿ ಮುನಿಗಂಗಪ್ಪ ರವರ ಮೊದಲನೇ ಪ್ರಶ್ನೆಯಾದ ಜಯನಗರ ಶಾಖೆಯಲ್ಲಿ ಯಲ್ಲಮ್ಮ ದಾಸಪ್ಪ ಹಾಸ್ಪಿಟಲ್‌ಗೆ ನಾವು ಸಾಲ ಕೊಟ್ಟಿದ್ದು, ಅವರು ಕೌಟುಂಬಿಕ ತೊಂದರೆಯಿಂದ ಸಾಲವನ್ನು ಕಟ್ಟಿರುವುದಿಲ್ಲ. ನಾವು ವಸೂಲಾತಿಗೆ ಪ್ರಯತ್ನ ಮಾಡಿದಾಗ ಅರ್ಜಿದಾರರು ಕೋರ್ಟಿಗೆ ಹೋದರು, ನಾವೂ ಸಹ ವಸೂಲಾತಿಗಾಗಿ ಕೋರ್ಟಿಗೆ ಕೇಸ್ ಹಾಕಿದಾಗ ಆಸ್ತಿಯನ್ನು ಹರಾಜು ಮಾಡಲು ಕೋರ್ಟಿನಿಂದ ಆರ್ಡರ್ ಬಂತು. ನಾವು ಪ್ರಕಟಣೆ ಕೊಟ್ಟು 2-3 ಬಾರಿ ಹರಾಜಿಗೆ ಪ್ರಯತ್ನ ಮಾಡಿದರೂ ಯಾರೂ ಆಸ್ತಿ ಕೊಂಡುಕೊಳ್ಳಲು ಮುಂದೆ ಬಂದಿರುವುದಿಲ್ಲ. ಆದ್ದರಿಂದ ನಾವು ಆರ್.ಸಿ.ಎಸ್ ರವರ ಜೊತೆ ಮಾತನಾಡಿ ಅವರ ಅನುಮತಿ ಪಡೆದು ಆಸ್ತಿಯನ್ನು ನಮ್ಮ ಬ್ಯಾಂಕಿನ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡಿದ್ದೇವೆ. ಈಗ ಆಸ್ತಿ ನಮ್ಮಲ್ಲಿದೆ. ಈ ನಡುವೆಯೇ ಅರ್ಜಿದಾರರು ಕೋಲಾರದ ಕಡೆಯವರಾದ ಧನ್ವಂತರಿ ಹಾಸ್ಪಿಟಲ್ ಕಡೆಯವರಿಗೆ ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟಿದ್ದು, ಅವರು ಬಂದು ಹಾಸ್ಪಿಟಲ್‌ಗೆ ಬೀಗ ಹಾಕಿದರು, ಈ ವಿಷಯ ಗೊತ್ತಾಗಿ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಎನ್ ಆರ್ ಜಗದೀಶ್‌ರವರು ಅಲ್ಲಿಗೆ ಹೋಗಿ ಬೀಗ ಒಡೆಸಿ ಸದರಿ ಸ್ವತ್ತನ್ನು ನಮ್ಮ ಸುಪರ್ದಿಗೆ ತೆಗೆದುಕೊಂಡರು. ಈ ಮಧ್ಯೆ ಯಲ್ಲಮ್ಮ ದಾಸಪ್ಪ ಹಾಸ್ಪಿಟಲ್ ಕಡೆಯವರು ಮತ್ತು ಧನ್ವಂತರಿ ಹಾಸ್ಪಿಟಲ್ ಕಡೆಯವರು ಸೇರಿ ಮತ್ತೆ ಇನ್ನೊಂದು ಕೇಸ್ ಹಾಕಿದರು. ಆದರೆ ನಾವು ಧನ್ವಂತರಿ ಹಾಸ್ಪಿಟಲ್‌ನವರೊಂದಿಗೆ ಮಾತುಕತೆ ನಡೆಸಿದ್ದು, ಇಂದು ಅವರೇ ಸದರಿ ಆಸ್ತಿಯನ್ನು 17 ಕೋಟಿಗಳಿಗೆ ಕೇಳುತ್ತಿದ್ದಾರೆ. ಅದು ಮಾರಾಟ ಮಾಡಿದರೆ ನಮಗೆ ಅಂದಿನಿಂದ ಇಂದಿನವರೆಗೂ ಬರಬೇಕಾದ ಸಾಲದ ಬಾಕಿ ಬಡ್ಡಿ ಸಮೇತ ಬರುತ್ತದೆ, ಬಾಕಿ ದುಡ್ಡು ಯಲ್ಲಮ್ಮ ದಾಸಪ್ಪ ಹಾಸ್ಪಿಟಲ್‌ರವರಿಗೆ ಕೊಡಬೇಕಾಗುತ್ತದೆ. ಅದರಂತೆ ಕೊಡುತ್ತೇವೆ ಎಂದು ಹೇಳಿದರು. ಸದಸ್ಯರಾದ ಕೆ ಜಿ ಮುನಿಗಂಗಪ್ಪ ರವರು ನೀವು ಹೇಳುತ್ತಿರುವ ರೂ.7 ಕೋಟಿ 39 ಲಕ್ಷ ಮಾರ್ಚ್ 2019 ಕ್ಕೆ, ಈಗ ಆ ಮೊತ್ತ ಎರಡರಷ್ಟಾಗಿರುತ್ತದೆ. ನೀವು ಮಾರಾಟ ಮಾಡಿದರೆ ಇಂದಿನವರೆಗೂ ಬರುತ್ತದೆಯಾ ಎಂದು ಕೇಳಿದಾಗ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್ ರವರು ಆಸ್ತಿಯನ್ನು 31-03-2019 ರಿಂದ ನಮ್ಮ ಸುಪರ್ದಿಗೆ ತೆಗೆದುಕೊಂಡಿರುವುದರಿಂದ ಅಂದಿನಿಂದ ಬಡ್ಡಿ ಬೀಳುವುದಿಲ್ಲ. ಮತ್ತೆ ನಾವು ಆರ್.ಸಿ.ಎಸ್ ರವರ ಒಪ್ಪಿಗೆ ತೆಗೆದುಕೊಂಡು ಆಸ್ತಿಯನ್ನು ಮಾರಾಟ ಮಾಡಿ ನಮಗೆ ಬರಬೇಕಾದ ದುಡ್ಡನ್ನು ನಾವು ತೆಗೆದುಕೊಳ್ಳುತ್ತೇವೆ ಎಂದಾಗ ಆಸ್ತಿ ನಿಮ್ಮ ಸುಪರ್ದಿನಲ್ಲಿ ಇದೆಯಾ ಎಂದು ಸದಸ್ಯರು ಕೇಳಿದಕ್ಕೆ ಶ್ರೀ ಸಿ ಆರ್ ನಟರಾಜುರವರು ಹೌದೆಂದು ಹೇಳಿದಾಗ, ಅಧ್ಯಕ್ಷರು ನಾವೇ ಸದರಿ ಆಸ್ತಿಗೆ ಬೀಗ ಹಾಕಿದ್ದು, ಸೆಕ್ಯುರಿಟಿಯನ್ನು ಸಹ ನೇಮಿಸಿದ್ದೇವೆ. ಸದಸ್ಯರು ಮತ್ತೆ ನಿಮ್ಮ ಸುಪರ್ದಿನಲ್ಲಿರುವ ಆಸ್ತಿಗೆ ಧನ್ವಂತರಿ ಹಾಸ್ಪಿಟಲ್ ನವರು ಹೇಗೆ ಬರುತ್ತಾರೆ ಎಂದು ಕೇಳಿದಾಗ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಯಲ್ಲಮ್ಮ ದಾಸಪ್ಪ ಹಾಸ್ಪಿಟಲ್ ಕಡೆಯವರು ಮತ್ತು ಧನ್ವಂತರಿ ಹಾಸ್ಪಿಟಲ್ ಕಡೆಯವರು ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದರಿಂದ ಧನ್ವಂತರಿ ಹಾಸ್ಪಿಟಲ್ ನವರು ಆಸ್ತಿ ನಮ್ಮದು ಎಂದು ಬಂದಿದ್ದರು, ಆದರೆ ನಾವು ನಿಮಗೆ ಅಗ್ರಿಮೆಂಟ್ ಆಗುವುದಕ್ಕೆ ಮೊದಲೇ ನಾವು ಸದರಿ ಆಸ್ತಿಗೆ ಸಾಲ ಕೊಟ್ಟಿರುತ್ತೇವೆ ಎಂದು ಹೇಳಿ ಹರಾಜಿಗೆ ಯಾರೂ ಖರೀದಿದಾರರು ಬರದೇ ಇದ್ದುದರಿಂದ 2019 ರಲ್ಲಿ ನಮ್ಮ ಬ್ಯಾಂಕಿನ ಹೆಸರಿಗೆ ಆಸ್ತಿಯನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದೇವೆ. ಈಗ ಧನ್ವಂತರಿ ಹಾಸ್ಪಿಟಲ್ ಕಡೆಯವರೇ ಆಸ್ತಿ ಕೊಂಡುಕೊಳ್ಳಲು ಬಂದಿದ್ದು, ಇಲ್ಲಿಯವರೆಗೂ ನಮಗೆ ದುಡ್ಡು ಬರುತ್ತದೆ. ಅದನ್ನು ಮಾರಾಟದ ಸಮಯದಲ್ಲಿ ಲೆಕ್ಕಾಚಾರ ಮಾಡುತ್ತೇವೆ ಎಂದು ತಿಳಿಸಿದರು.

ಶ್ರೀ ಜಿ ಎಸ್ ಬಸವರಾಜು ರವರು ಮಾತನಾಡಿ ನೀವು ಯಲ್ಲಮ್ಮ ದಾಸಪ್ಪ ಹಾಸ್ಪಿಟಲ್‌ನವರು ಧನ್ವಂತರಿ ಹಾಸ್ಪಿಟಲ್ ರವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿದಿರಿ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ನಾವು ಮಾರಾಟ ಮಾಡಿರುವುದೆಂದು ಹೇಳಿರುವುದಿಲ್ಲ, ಎಂದು ಹೇಳಿ ಮತ್ತೆ ಮತ್ತೊಂದು ಸಾರಿ ಎಲ್ಲವನ್ನೂ ವಿವರವಾಗಿ ತಿಳಿಸಿದರು.

(ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜುರವರು ಮತ್ತೊಮ್ಮೆ ಮುಂದಿನ ಪುಟ ಸಂಖ್ಯೆಗಳನ್ನು ಹೇಳುತ್ತಾ ಹೋದಾಗ ಸದಸ್ಯರೊಬ್ಬರು ನಿಧಾನವಾಗಿ ಹೇಳಿ ಎಂದರು. ಅದಕ್ಕೆ ಶ್ರೀ ಸಿ ಆರ್ ನಟರಾಜು ರವರು ಈ ಪುಟಗಳಲ್ಲಿ ಬರೀ ಬ್ಯಾಂಕಿನ ಬಗ್ಗೆ ಬರೆದಿದ್ದು, ಅದಕ್ಕೆ ಬೇಗ ಹೇಳುತ್ತಿದ್ದೇನೆ ಎಂದರು.

ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ರವರು ಪುಟ ಸಂಖ್ಯೆ 50 ರಲ್ಲಿ ARCIL ಬಗ್ಗೆ ಕೇಳಿದಾಗ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜುರವರು ARCIL ಕಂಪನಿಯ ಬಗ್ಗೆ ವಿವರಿಸುವಾಗ ಸದಸ್ಯರು ಇದು ರೂ. 114.94 ಕೋಟಿ ಸಾಲ ಯಾವ ಖಾತೆಯದು ಎಂದು ಕೇಳಿದಾಗ ಉಪಾಧ್ಯಕ್ಷರು ಅದು 2 ಸಾಲದ ಖಾತೆಯದು, ಅದರ ಬಗ್ಗೆ ವಿವರ ಕೊಡಲು ಸಾಧ್ಯವಿರುವುದಿಲ್ಲ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಅದರಲ್ಲಿ 1 ಖಾತೆ ಬೆಂಗಳೂರಿನದ್ದು, 2 ಛತ್ರ, 2 ಮನೆ 1 ಕಾಲೇಜು 2 ಸೈಟು ಇನ್ನೊಂದು ಖಾತೆ ಮಂಡ್ಯ ಶಾಖೆಯದು ಅಮರಾವತಿ ಚಂದ್ರಶೇಖರ್ ಅನ್ನುವವರದು, ಈ ಸಾಲದ ಖಾತೆಗಳನ್ನು ನಾವು ARCIL ಗೆ ವಹಿಸಿದ್ದೇವೆ, ARCIL ಎಂದರೆ ಏನು, ನಾವು ಯಾಕೆ ಅವರಿಗೆ ವಹಿಸಿದ್ದೇವೆ, ಅದರಿಂದಾಗುವ ಅನುಕೂಲ ಅನಾನುಕೂಲಗಳನ್ನು ಈಗ ಸಭೆಯಲ್ಲಿ ಹೇಳುತ್ತಾರೆ ಎಂದಾಗ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ಮೇಲಿನ 2 ಕೇಸ್‌ಗಳಿಂದ ಸದರಿ ವರ್ಷದಲ್ಲಿ ರೂ. 32.60 ಕೋಟಿ ನಷ್ಟವೆಂದು ತೋರಿಸಿರುತ್ತೀರ, ಇದು ಮುಂದೆ ಏನಾಗುತ್ತದೆ ಎಂದು ಗೊತ್ತಿಲ್ಲ, ನೀವು ಅವರಿಗೆ ಮೇಲಿನ 2 ಸಾಲಗಳ ಆಸ್ತಿಯನ್ನು ಮಾರಾಟ ಮಾಡಿರುತ್ತೀರಿ ಎಂದಾಗ ಉಪಾಧ್ಯಕ್ಷರು ನಾವು ಸದರಿ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಅದರ ಬಗ್ಗೆಯೇ ಹೇಳುತ್ತಿದ್ದೇನೆ ಎಂದಾಗ ಸದಸ್ಯರು ಮಾರಾಟ ಮಾಡಿರುವುದಾಗಿ ನೀವೇ ವರದಿಯಲ್ಲಿ ಮುದ್ರಿಸಿರುತ್ತೀರ ಎಂದಾಗ ಉಪಾಧ್ಯಕ್ಷರು ಲೆಕ್ಕಪರಿಶೋಧಕರು ಹಾಗೆ ಬರೆದಿದ್ದಾರೆ ಆದರೆ ಅದು ಮಾರಾಟ ಆಗಿರುವುದಲ್ಲ ಅದನ್ನೇ ವಿವರಿಸುತ್ತಿದ್ದೇನೆ ಕೇಳಿ ಎಂದು ARCIL ಬಗ್ಗೆ ವಿವರಿಸಿದರು. ARCIL ಎಂದರೆ ಮೆ॥ ARCIL ಎಂಬುದು ಖಾಸಗಿ ಒಡೆತನದ ಕಂಪನಿ ಆಗಿರುವುದಿಲ್ಲ ಅದು ಆರ್.ಬಿ.ಐ ನ ನಿಯಮಾವಳಿಗಳಿಗೆ ಒಳಪಟ್ಟು ಅದರ ಪರವಾನಗಿ ಪಡೆದ ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಯಾಗಿದೆ. ಸದರಿ ಸಂಸ್ಥೆಯು ಯಾವುದೇ ಬ್ಯಾಂಕಿನ ಬೃಹತ್ ಮೊತ್ತದ NPA ಆಸ್ತಿಗಳನ್ನು ಮಾರಾಟ ಮಾಡಿಕೊಡುವ ಮೂಲಕ ದೇಶಾದ್ಯಂತ ತನ್ನ ವ್ಯವಹಾರ ಜಾಲವನ್ನು ಹೊಂದಿದ್ದು ಮುಂಚೂಣಿಯಲ್ಲಿದೆ. ಅದು ಆರ್.ಬಿ.ಐ ನಿಯಮದಡಿ Asset

Restructuring & Recovery Company ಆಗಿರುತ್ತದೆ ನಾವುಗಳೂ ಸಹ ಆರ್.ಬಿ.ಐ ನಿಯಮಾನುಸಾರ NPA ಕಡಿಮೆ ಮಾಡುವ ದೃಷ್ಟಿಯಿಂದ ARCIL Company ಯವರಿಗೆ ಮಾರಾಟ ಮಾಡಲು ನಿಯೋಜಿಸಿದ್ದೇವೆ.

ಸದರಿ ಸ್ಥಿರಾಸ್ತಿಗಳ ಮೌಲ್ಯವು ಸುಮಾರು ರೂ. 255 ಕೋಟಿಗಳಿಗಿಂತಲೂ ಹೆಚ್ಚಾಗಿದ್ದು, ಈಗಾಗಲೇ ARCIL Company ಯವರು ಗ್ಯಾರಂಟಿಯಾಗಿ ರೂ. 91.95 ಕೋಟಿಗಳನ್ನು ನಮ್ಮ ಬ್ಯಾಂಕಿಗೆ ವರ್ಗಾಯಿಸಿರುತ್ತಾರೆ ಆದ್ದರಿಂದ ಈ ವ್ಯತ್ಯಾಸದ ಮೊತ್ತವು ಸದರಿ ವರ್ಷದಲ್ಲಿ ತಾತ್ಕಾಲಿಕ ನಷ್ಟವಾಗಿರುತ್ತದೆ. ಈ ವ್ಯವಹಾರದಲ್ಲಿ ಸದರಿ ಕಂಪನಿಯವರೊಂದಿಗೆ ಮಾಡಿಕೊಳ್ಳಲಾಗಿರುವ ಕಾನೂನು ಒಪ್ಪಂದದ ಪ್ರಕಾರ ARCIL Company ಯವರು ತ್ವರಿತವಾಗಿ ಸ್ಥಿರಾಸಿಯನ್ನು ಮಾರಾಟ ಮಾಡಿ ತಕ್ಷಣ ಬ್ಯಾಂಕಿಗೆ ಜಮಾ ಪಡೆಯಲಾಗುತ್ತದೆ. ಮುಖ್ಯವಾಗಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಸಂಪೂರ್ಣವಾಗಿ ತೀರುವಳಿಯಾಗುವವರೆಗೆ ಈ ಎಲ್ಲ ಸ್ಥಿರಾಸ್ತಿಗಳ ಮೇಲೆ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಬ್ಯಾಂಕಿನ ಋಣಭಾರ ಚಾಲ್ತಿಯಲ್ಲಿರುತ್ತದೆ ಎಂದು ವಿವರಿಸಿದರು.

ಅದು ನಮ್ಮದೇ ಆಸ್ತಿ ನಾವು ಅವರಿಗೆ ಮಾರಾಟ ಮಾಡಲು ಕೊಟ್ಟಿದ್ದೇವೆಯೇ ಹೊರತು ಅವರಿಗೆ ನಾವು ಮಾರಾಟ ಮಾಡಿರುವುದಿಲ್ಲ ಎಂದು ಹೇಳಿದರು. ಅದಕ್ಕೆ ಸದಸ್ಯರು ಈ ಆಸ್ತಿ ಮಾರಾಟವಾದಾಗ ನಮಗೆ ಪೂರ್ಣಮೊತ್ತ ಬರುತ್ತದೆಯೇ ಮತ್ತು ಅದಕ್ಕೆ ಏನು ಚಾರ್ಜಸ್ ಇದೆ ಎಂದು ಕೇಳಿದಾಗ ಉಪಾಧ್ಯಕ್ಷರು ಆ ದುಡ್ಡು ನಮಗೆ ಬರುತ್ತದೆ ಮತ್ತು ಚಾರ್ಜಸ್ ಅನ್ನು ಅವರು ಗ್ರಾಹಕರಿಂದಲೇ ಪಡೆಯುತ್ತಾರೆ. ಮತ್ತೆ ಸದಸ್ಯರು ರೂ. 91 ಕೋಟಿ ಆಗಲೇ ವರ್ಗಾವಣೆ ಆಗಿದೆ ಎಂದು ಹೇಳಿದಿರಿ ಆದರೆ ಅದು ವರ್ಗಾವಣೆ ಆಗಿರುವುದಿಲ್ಲ, ಬದಲಾಗಿ ರೂ. 18 ಅಥವಾ ರೂ. 19 ಕೋಟಿ ವರ್ಗಾವಣೆ ಆಗಿದ್ದು, ಉಳಿಕೆ ಮೊತ್ತಕ್ಕೆ ಬಾಂಡ್ ಕೊಟ್ಟಿರುತ್ತಾರೆ ಎಂದಾಗ (ಪ್ರ) ಉಪಾಧ್ಯಕ್ಷರು ಹೌದು ಎಂದು ಹೇಳಿದರು. ನಂತರ ಸದಸ್ಯರು ಇದನ್ನು ಸಭೆ ಸೆಮಿನಾರು ಗೆ ಖರ್ಚು ಹಾಕಿರುತ್ತೀರಿ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಬೆಂಗಳೂರಿನ ಖಾತೆದಾರರ ಆಸ್ತಿ ಮಾರಾಟ ಮಾಡುವುದರಿಂದ 142 ಕೋಟಿ 20 ಲಕ್ಷ ದುಡ್ಡು ಬರುತ್ತದೆ. ಬೆಂಗಳೂರಿನ ಆಸ್ತಿ ಒಂದನ್ನೇ ರೂ. 75.00 ಕೋಟಿಗಳಿಗೆ ವ್ಯಾಪಾರ ಮಾಡಿದ್ದಾರೆ ಎಂದು ತಿಳಿಸಿದರು. ಮತ್ತೆ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ನಾನು ಬ್ಯಾಂಕಿನ ಬಗ್ಗೆ ಕಾಳಜಿಯಿಂದ ಕೇಳುತ್ತಿದ್ದೇನೆ, ಇದು ವ್ಯಾಪಾರ ಆಗಿ ಲಾಭ ಆದರೆ ಒಳ್ಳೆಯದು, ಬ್ಯಾಂಕು ನಡೆಸುವಾಗ ಇಂಥದ್ದೆಲ್ಲಾ ಆಗುತ್ತದೆ. ಇದೇ ತರಹದ ನಾಲ್ಕಾರು ಕೇಸುಗಳಾದಾಗ ರೂ. 1-2 ಕೋಟಿಗಳಾದರೆ ಬಿಟ್ಟು ಬಿಡಬಹುದು. ಐವತ್ತು ಕೋಟಿ ವ್ಯವಹಾರ ಮಾಡುವ ಕಡೆ ರೂ.1-2 ಕೋಟಿಗಳಾದರೆ ಪರವಾಗಿಲ್ಲ, ಇದು ವ್ಯವಹಾರ, ಅದರಲ್ಲಿ ಹೀಗೆ ಆಗುತ್ತದೆ. ಆದರೆ ಇಲ್ಲಿ ಹೆಚ್ಚಿನ ಮೊತ್ತದ್ದೆಲ್ಲ ಈ ತರಹ ಇರುವುದಕ್ಕೆ ಸದಸ್ಯರಿಗೆಲ್ಲ ಆತಂಕ. ಕರ್ನಾಟಕದಲ್ಲೇ ನಂ. 1 ಬ್ಯಾಂಕಾಗಿದ್ದು, ಇತ್ತೀಚೆಗೆ ನ್ಯೂಸ್ ಪೇಪರ್‌ನಲ್ಲಿ ದಿವಾಳಿ ಎಂದು ಬಂದಿದ್ದು, ಅದರಲ್ಲಿ ನಮ್ಮದೊಂದೆ ಅಲ್ಲ 48 ಬ್ಯಾಂಕುಗಳು ಇದ್ದು ನಮ್ಮ ತುಮಕೂರಿನಲ್ಲಿ 2 ಬ್ಯಾಂಕುಗಳು ಇದ್ದು, ನಾನು ಮಾರನೇ ದಿನವೇ ಕೇಳಿದೆ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರ ಎಂದು, ಆದರೆ ನೀವು ಏನೂ ಕ್ರಮ ತೆಗೆದುಕೊಳ್ಳಲಿಲ್ಲ, ನೀವು ಲೋಕಲ್ ಪೇಪರ್‌ನಲ್ಲಿ ಜಾಹೀರಾತು ಕೊಟ್ಟರೆ ಪ್ರಯೋಜನ ಇರುವುದಿಲ್ಲ. ಪ್ರೆಸ್ ಮೀಟ್ ಕರೆದು ರಾಜ್ಯದ ಪತ್ರಿಕೆಯಲ್ಲಿ ವರದಿ ನೀಡಿದ್ದರೆ ನಿಮ್ಮ ಠೇವಣಿಯೂ ಕಡಿಮೆಯಾಗುತ್ತಿರಲಿಲ್ಲ. ಯಾವ ಸದಸ್ಯರಿಗೂ ಆತಂಕವೂ ಇರುತ್ತಿರಲಿಲ್ಲ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಪತ್ರಿಕೆಯಲ್ಲಿ ವರದಿ ಬಂದ ಮೇಲೆ ನಾವು ಮಹಾಮಂಡಳವನ್ನು ಭೇಟಿಯಾಗಿ ಮಾತನಾಡಿದ್ದು, ಸೌತ್ ಕೆನರಾದ 1 ಬ್ಯಾಂಕ್‌ನಿಂದ ಅವರ ಮೇಲೆ deformation ಕೇಸ್ ಹಾಕಿದ್ದು, ಇನ್ನೂ ಕೇಸ್ ಕೋರ್ಟಿನಲ್ಲಿ ಹಿಯರಿಂಗ್‌ಗೇ ಬಂದಿರುವುದಿಲ್ಲ. ನಾವು ಸಹ ಅಡ್ವೋಕೇಟ್ ಅನ್ನು ಭೇಟಿ ಮಾಡಿ ಮಾತನಾಡಿದಾಗ ಅವರು ಲಕ್ಷಗಟ್ಟಲೇ ಫೀಸ್ ಕೇಳಿದರು. ಅದಕ್ಕೆ ಅಧ್ಯಕ್ಷರು ಮೊದಲು ಅವರು ಹಾಕಿರುವ ಕೇಸು ಇತ್ಯರ್ಥವಾಗಲಿ ನಂತರ ನಾವು ಮುಂದಿನ ಕ್ರಮ ತೆಗೆದುಕೊಳ್ಳೋಣ ಎಂದರು ಅದಕ್ಕೇ ನಾವು ಅವರ ಮೇಲೆ ಕೇಸ್ ಹಾಕಿರುವುದಿಲ್ಲ, ನೀವು ವ್ಯವಹಾರಸ್ಥರು, ನಿಮಗೆ ವ್ಯವಹಾರ ಚೆನ್ನಾಗಿ ಗೊತ್ತು, ಅದಕ್ಕೆ ಐವತ್ತು ಕೋಟಿ ಲಾಭ ಮಾಡುವ ಕಡೆ ಒಂದೋ ಎರಡೋ ಕೋಟಿ ನಷ್ಟವಾಗುವುದು ಸಾಮಾನ್ಯ ಎಂದು ಹೇಳಿದಿರಿ ಆದರೆ ಏನು ವ್ಯವಹಾರ ಮಾಡದವರಿಗೆ ಟೀಕೆ ಮಾಡುವುದು ಸುಲಭ ಎಂದು ಹೇಳಿದರು, ನಂತರ ಶ್ರೀ ಜಿ ಎಸ್ ಬಸವರಾಜುರವರು ಅದೇ ಪ್ರಶ್ನೆ ಕೇಳುವಾಗ ಉಪಾಧ್ಯಕ್ಷರು ನೀವು ಸಹ ಅದೇ ವಿಷಯದ ಬಗ್ಗೆ ಪ್ರಶ್ನೆ ಕೇಳುತ್ತಿದ್ದೀರ ಎಂದು ಹೇಳಿದಾಗ ಅವರು ಇಲ್ಲ ಎಂದು ಮತ್ತೆ ಅದರ ಬಗ್ಗೆಯೇ ಮಾತನಾಡಿದರು. ನೀವು ಆರ್.ಬಿ.ಐ ಸುತ್ತೋಲೆ ಉಲ್ಲೇಖ ಮಾಡಿದ್ದು ನೀವು ಆ ಪ್ರಕಾರವೇ ARCIL ನಲ್ಲಿ ವ್ಯವಹಾರ ಮಾಡಿದ್ದೀರ, ಈ ಆರ್.ಬಿ.ಐ ಸುತ್ತೋಲೆಯನ್ನು ನಿಮ್ಮ ಆಡಳಿತ ಮಂಡಳಿಯವರು ಎಷ್ಟು ಜನ ಓದಿದ್ದೀರ ಎಂದು ಕೇಳಿದಾಗ ಅಧ್ಯಕ್ಷರು ಆ ಬಗ್ಗೆ ನೀವು ಕೇಳುವ ಹಾಗಿಲ್ಲ, ನಾವು ಸುತ್ತೋಲೆಯ ಪ್ರಕಾರವೇ ಕೆಲಸ ಮಾಡಿರುವುದು ಎಂದಾಗ ಜಿ ಎಸ್ ಬಸವರಾಜುರವರು ನನ್ನ ಬಳಿ ಆರ್.ಬಿ.ಐ ಸುತ್ತೋಲೆ ಇದೆ, ಅದರಂತೆ ನೀವು ಅನೇಕ ಷರತ್ತುಗಳು ಉಲ್ಲಂಘನೆಯಾಗಿದೆ ಎಂದಾಗ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜುರವರು ನೀವು ನಾವು ಹೇಳುವ ವಿವರ ಕೇಳುವುದಿಲ್ಲವಾದರೆ Higher Authorities ಹತ್ತಿರ ಚರ್ಚೆ ಮಾಡಿ ವಿವರಣೆ ಪಡೆಯಿರಿ ಎಂದರು. ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ನಿಮ್ಮ ಅನುಮಾನ ಏನು ಹೇಳಿ ಬಗೆಹರಿಸೋಣ ಎಂದರೂ ಸಹ ಅವರು ಮತ್ತೆ ಅದನ್ನೇ ಹೇಳಿದರು. ಈ ಆರ್.ಬಿ.ಐ ಸುತ್ತೋಲೆಯನ್ನು ಸರಿಯಾಗಿ ಓದಿ ಅರ್ಥಮಾಡಿಕೊಳ್ಳದಿದ್ದರೆ ನೂರಕ್ಕೆ ನೂರು ಪ್ರತಿಶತ ರೂ. 32.60 ಕೋಟಿ ಬ್ಯಾಂಕಿಗೆ ನಷ್ಟವಾಗುತ್ತದೆ. ಈ ವಿಷಯವನ್ನು ನಾನು ಸ್ಟಾಂಪ್ ಪೇಪರ್ ಮೇಲೆ ಬರೆದುಕೊಡುತ್ತೇನೆ, ನಾವು ಮಾಡಿರುವುದು ಸರಿಯಾಗಿದೆ, ಯಾವುದೇ ನಷ್ಟ ಆಗುವುದಿಲ್ಲ ಎನ್ನುವುದಾದರೆ ನೀವು ಒಂದು ರೆಸಲ್ಯೂಷನ್ ಬರೆಸಿ ಎಂದು ಹೇಳಿದರು. ನಂತರ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ನಮ್ಮ ಧಾನ್ಯ ವರ್ತಕರ ಸಮೂಹ ಶ್ರೀ ಎ.ಕೆ.ಎ ಪಾರ್ಶನಾಥ್ ರವರ ಹಾಗೂ ಬ್ಯಾಂಕಿನ ಸಂಸ್ಥಾಪಕ ನಿರ್ದೇಶಕರಾದ ನನ್ನ ರಾಜಕೀಯ ಗುರುಗಳು ಮತ್ತು ಸಹಕಾರಿ ಗುರುಗಳು ಆದಂತಹ ಶ್ರೀ ಎನ್ ಆರ್ ಜಗದೀಶ್‌ರವರಂತಹ ನಿರ್ದೇಶಕರ ನೇತೃತ್ವದೊಂದಿಗೆ ನಮ್ಮ ಬ್ಯಾಂಕಿಗೆ ಆರ್ ಜೆ ಅನಂತರಾಜಯ್ಯ ರವರು, ಪಿ ಜೆ ಗೋವಿಂದ ಶೆಟ್ಟರು, ಚಿದಾನಂದಪ್ಪರವರು, ರಾಜ್‌ಕುಮಾರ್ ರವರು, ಕೆ ವೈ ಶಿವಣ್ಣರವರು, ಕೆ ಜಿ ಮುನಿಗಂಗಪ್ಪರವರು, ಎಂ ಪಿ ಸನ್ಮತಿ ಕುಮಾರ್, ಟಿ ಎಸ್ ಕಾಂತರಾಜುರವರು ಇಂಥವರೆಲ್ಲರೂ ಕಟ್ಟಿ ಬೆಳಸಿದಂತಹ ನಮ್ಮ ಬ್ಯಾಂಕು ಈಗಲೂ ಸರಿಯಾದ ದಾರಿಯಲ್ಲಿಯೇ ಇದೆ ಎಂದು ಹೇಳುವಾಗ ಸದಸ್ಯರಾದ

ಶ್ರೀ ಜಿ ಎಸ್ ಬಸವರಾಜು ರವರು ಮಾತನಾಡಿ ನಾವು ಈಗ ಚರ್ಚಿಸುತ್ತಿರುವ ವಿಷಯದ ಬಗ್ಗೆ ಮಾತನಾಡಿ ಎಂದು ಹೇಳಿದರು, ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ನಾನೂ ಸಹ ವಿಷಯದ ಬಗ್ಗೆಯೇ ಚರ್ಚಿಸುತ್ತಿದ್ದೇನೆ, ನಾನು ಮೇಲೆ ಹೇಳಿರುವಂತಹ ಹಿರಿಯರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದು, ಬ್ಯಾಂಕಿಗೆ ನಷ್ಟ ಮಾಡುವುದಿಲ್ಲ ಎಂದರು, ಮಾಜಿ ನಿರ್ದೇಶಕರಾದ ಶ್ರೀ ಟಿ ಸಿ ವಿಜಯ್‌ಕುಮಾರ್ ರವರು ಮಾತನಾಡಿ 1963 ರಲ್ಲಿ ನಮ್ಮ ತಾತ ಬ್ಯಾಂಕಿನ ನಿರ್ದೇಶಕರಾಗಿದ್ದರು, ಬ್ಯಾಂಕಿನ ಸಿಲ್ವರ್ ಜ್ಯೂಬಿಲಿ ವರ್ಷದಲ್ಲಿ ನಾನು ನಿರ್ದೇಶಕನಾಗಿದ್ದೆ, ಈ ತರಹ ಗಲಾಟೆ ಯಾವ ಮೀಟಿಂಗ್‌ನಲ್ಲಿಯೂ ಆಗಿರುವುದಿಲ್ಲ, ನಿಧಾನವಾಗಿ ಚರ್ಚೆ ಮಾಡಿ ಎಂದರೂ ಸಹ ಆಗ ಶ್ರೀ ಜಿ ಎಸ್ ಬಸವರಾಜುರವರು ಮತ್ತೆ ಇದರಿಂದ ಬ್ಯಾಂಕಿಗೆ ರೂ. 32.60 ಕೋಟಿ ನಷ್ಟವಾಗುತ್ತದೆ ಎಂದರು.

ನಂತರ ಸದಸ್ಯರಾದ ಶ್ರೀ ಶ್ರೀಕೃಷ್ಣ ಕೆ ಆರ್ ರವರು ಮಾತನಾಡಿ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರನ್ನು ಉದ್ದೇಶಿಸಿ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜುರವರು ಹೇಳುತ್ತಿರುವಂತೆ ಆರ್.ಬಿ.ಐ ಸುತ್ತೋಲೆ ಉಲ್ಲಂಘನೆ ಆಗಿದೆಯೇ ಇಲ್ಲವೇ? ನಾನು ಇಲ್ಲಿ ಯಾರ ಪರವಾಗಿಯೂ ಮಾತನಾಡುತ್ತಿಲ್ಲ. ನಮಗೆ ಸಭೆಯಲ್ಲಿ ಸದಸ್ಯರಿಗೆ confusion ಇದೆ, ಸಭೆಯಲ್ಲಿ ಜಿ ಎಸ್ ಬಸವರಾಜು ರವರು ಹೇಳಿದಂತೆ ಆರ್.ಬಿ.ಐ ಸುತ್ತೋಲೆಯಲ್ಲಿ ಏನಿದೆ, ಏನಾದರೂ ತಪ್ಪಾಗಿದೆಯೇ? ಯಾರೂ 100% ಪರಿಪೂರ್ಣರಲ್ಲ, ಏನಾದರೂ ತಪ್ಪಾಗಿದ್ದರೆ ಸರಿಮಾಡಿಕೊಳ್ಳೋಣ, ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ಆರ್.ಬಿ.ಐ ಸುತ್ತೋಲೆಯಲ್ಲಿ ಯಾವುದೇ ಕಾರಣಕ್ಕೂ ಉಲ್ಲಂಘನೆಯಾಗಿರುವುದಿಲ್ಲ. ಹಾಗೇನಾದರೂ ಬ್ಯಾಂಕಿಗೆ ರೂ. 32.60 ಕೋಟಿ ನಷ್ಟವಾದರೆ ನಾನು ಆ ದಿನವೇ ರಾಜೀನಾಮೆ ಕೊಟ್ಟು ಸದಸ್ಯತ್ವದಿಂದ ಹೊರಹೋಗುತ್ತೇನೆ ಆದರೆ ಬಸವರಾಜುರವರು ಹೇಳುತ್ತಿರುವುದು ಸುಳ್ಳಾದರೆ ಅವರು ಸದಸ್ಯತ್ವದಿಂದ ಹೊರಗೆ ಹೋಗುತ್ತಾರಾ ಕೇಳಿ ಎಂದು ಸಭೆಯಲ್ಲಿ ಅವರಿಗೆ ಸವಾಲು ಹಾಕಿದರು. ನಂತರ ಸದಸ್ಯರಾದ ಶ್ರೀ ಶ್ರೀಕೃಷ್ಣ ಕೆ ಆರ್ ರವರು ಮಾತನಾಡಿ ನನಗೆ ನಿರ್ದೇಶಕರ ಮೇಲೆ ನಂಬಿಕೆ ಇದೆ, ಇಲ್ಲದಿದ್ದರೆ ನಿಮ್ಮ ಮೇಲೆಯೇ ಅವಿಶ್ವಾಸ ಮಂಡಿಸುತ್ತಿದ್ದೆವು, ನಮಗೂ ಆ ಅಧಿಕಾರ ಇದೆ, ನೀವು ಸದಸ್ಯರನ್ನು ಆಚೆಗೆ ಹಾಕಿ ಎಂದು ಹೇಳಿತ್ತಿದ್ದೀರಲ್ಲ. ಒಬ್ಬ ಸದಸ್ಯರ ಪ್ರಶ್ನಿಸುವ ಅಧಿಕಾರವನ್ನು ಪ್ರಶ್ನಿಸುವ ಅಧಿಕಾರ ಇನ್ನೊಬ್ಬ ಸದಸ್ಯನಿಗೆ ಇಲ್ಲ. ನೀವು ಅವರನ್ನು ಆಚೆ ಹಾಕಿ ಎಂದು ಹೇಳಿರುವುದು ತಪ್ಪು, ನಾನು ಇದನ್ನು ಖಂಡಿಸುತ್ತೇನೆ, ನಿರ್ದೇಶಕರನ್ನು ಈಚೆಗೆ ಹಾಕುವ ಅಧಿಕಾರ ನಮಗೂ ಇದೆ, ನಾಳೆ ನನ್ನನ್ನೂ ಆಚೆ ಹಾಕುತ್ತೀರ ಎಂದು ಪ್ರಶ್ನಿಸಿದಾಗ ಶ್ರೀ ಎಂ ಪಿ ಮಹೇಶ್ ರವರು ಸಭೆಯಿಂದ ಅವರನ್ನು ಆಚೆ ಹಾಕುವ ಬಗ್ಗೆ ನಾವು ಮಾತಾಡಿಲ್ಲ, ಜಿ ಎಸ್ ಬಸವರಾಜುರವರೇ ಸಭೆಯ ದಾರಿ ತಪ್ಪಿಸುತ್ತಿದ್ದಾರೆ ಎಂದಾಗ, ಸದಸ್ಯರಾದ ಶ್ರೀ ಶ್ರೀಕೃಷ್ಣ ಕೆ ಆರ್ ರವರು ಮಾತನಾಡಿ ಈ ದುಡ್ಡು ನಮ್ಮ ಬ್ಯಾಂಕಿಗೆ ಬಹಳ ದೊಡ್ಡ ಮೊತ್ತ, ಇದು ಸದಸ್ಯರಿಗೆ ಆತಂಕ ತಂದಿರುವುದು ನಿಜ, ಸದಸ್ಯರಿಗೆ ನೀವು ಸ್ಪಷ್ಟೀಕರಣ ನೀಡಿ, ಆರ್.ಬಿ.ಐ ಸುತ್ತೋಲೆಯಲ್ಲಿ ಉಲ್ಲಂಘನೇ ಆಗಿದೆಯೇ ಅಥವಾ ಇಲ್ಲವೇ? ಎಂದಾಗ ಶ್ರೀ ಎಂ ಪಿ ಮಹೇಶ್‌ರವರು ಯಾವುದೇ ಕಾರಣಕ್ಕೂ ಸುತ್ತೋಲೆಯಲ್ಲಿ ಉಲ್ಲಂಘನೆಯಾಗಿರುವುದಿಲ್ಲ ಎಂದಾಗ ಸದಸ್ಯರಾದ ಶ್ರೀ ಶ್ರೀಕೃಷ್ಣ ಕೆ ಆರ್ ರವರು ಜಿ ಎಸ್ ಬಸವರಾಜುರವರನ್ನುದ್ದೇಶಿಸಿ ನೀವು ಆರ್.ಬಿ.ಐ ಸುತ್ತೋಲೆಯಲ್ಲಿ ಉಲ್ಲಂಘನೇ ಆಗಿದೆ ಎಂದು ಹೇಳುತ್ತಿದ್ದು, ಯಾವ ರೀತಿ ಉಲ್ಲಂಘನೆ ಆಗಿದೆ ಎಂಬುದನ್ನು ನೀವೇ ಸಭೆಗೆ ಸ್ಪಷ್ಟಪಡಿಸಿ ಎಂದು ಹೇಳಿದರು. ಶ್ರೀ ಎಂ ಪಿ ಮಹೇಶ್‌ರವರು ಜಿ ಎಸ್ ಬಸವರಾಜುರವರು ಮೊದಲು ARCIL ಬಗ್ಗೆ ಸರಿಯಾಗಿ ಮಾಹಿತಿ ತಿಳಿದುಕೊಳ್ಳಲಿ, ಇಲ್ಲ ತಿಳಿದುಕೊಂಡರೂ ಸಭೆಗೆ ದಾರಿ ತಪ್ಪಿಸುತ್ತಿದ್ದಾರ ಗೊತ್ತಾಗುತ್ತಿಲ್ಲ ಎಂದಾಗ ಶ್ರೀ ಜಿ ಎಸ್ ಬಸವರಾಜುರವರು ಮತ್ತೆ ಆರ್.ಬಿ.ಐ ಸುತ್ತೋಲೆ ಶೇ.100 ರಷ್ಟು ಉಲ್ಲಂಘನೆಯಾಗಿದೆ ಎಂದು ಮತ್ತೆ ಮತ್ತೆ ಹೇಳಿದರು, ಆಗಿಲ್ಲವಾದರೆ ಚರ್ಚೆಗೆ ಅವಕಾಶ ಕೊಡಿ ಎಂದರು ಮತ್ತೆ ಮುಂದುವರೆಸಿ ರೂ.32.60 ಕೋಟಿ ಯಾವುದೇ ಕಾರಣಕ್ಕೂ ಬ್ಯಾಂಕಿಗೆ ನಷ್ಟ ಆಗುವುದಿಲ್ಲ, ಹಾಗೇನಾದರೂ ಆದರೆ ನಾನು ಸದಸ್ಯತ್ವದಿಂದ ಹೊರಹೋಗುತ್ತೇನೆ ಇಲ್ಲವಾದರೆ ಬಸವರಾಜುರವರು ಹೊರಗೆ ಹೋಗುತ್ತಾರಾ ಎಂದು ಚಾಲೆಂಜ್ ಹಾಕಿದ್ದು, ನಾನು ಈ ಚಾಲೆಂಜ್ ಸ್ವೀಕರಿಸುತ್ತಿದ್ದೇನೆ, ಎಂದು ಸಭೆಯಲ್ಲಿ ಹೇಳಿದರು, ಶ್ರೀ ಎಂ ಪಿ ಮಹೇಶ್‌ರವರು ಮಾತನಾಡಿ ನೀವು ಆತ್ಮಸಾಕ್ಷಿಯಾಗಿ ಮಾತನಾಡಿ, ಸದಸ್ಯರ ಮತ್ತು ಸಭೆಯ ದಾರಿ ತಪ್ಪಿಸಬೇಡಿ, ನಾವು ಇಲ್ಲಿ ಯಾವುದೇ ಭತ್ಯೆಗಳನ್ನು ಪಡೆಯದೇ, ವರ್ತಕರ ಬ್ಯಾಂಕು ನಮ್ಮ ಬ್ಯಾಂಕು ಎಂದುಕೊಂಡು ಕೆಲಸ ಮಾಡುತ್ತಿದ್ದೇವೆ ಎಂದಾಗ, ಬಸವರಾಜು ರವರು ಚಾಲೆಂಜ್ ಸ್ವೀಕರಿಸಿರುವುದಾಗಿ ಮತ್ತೆ ಹೇಳಿದರು.

ಶ್ರೀ ಜಿ ಎಸ್ ಬಸವರಾಜುರವರು ಮತ್ತೆ ಮುಂದುವರೆಸಿ ನೀವು ARCIL ನಲ್ಲಿ ವ್ಯವಹಾರ ಮಾಡಿರುತ್ತೀರ. ಅದರಲ್ಲಿ Swiss Challenge method ಅಂತ ಇದೆ, 31 ಪುಟಗಳ circular ಇದೆ, ನೀವು ಯಾರಾದರೂ ನಿರ್ದೇಶಕರು ಅದನ್ನು ಓದಿರುತ್ತೀರಾ ಎಂದು ಕೇಳಿದರು. ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ನಾವು ಎಲ್ಲಾ ನಿಯಮಗಳನ್ನು ಪಾಲಿಸಿದ್ದೇವೆ. ನೀವು Swiss Challenge method ಹೇಳಿದ್ದರ ಬಗ್ಗೆ ನೀವೇ ಸಭೆಗೆ ವಿವರಿಸಿ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ನಾವು ಎಲ್ಲಾ ನಿಯಮಗಳನ್ನು ಪಾಲಿಸಿಯೇ ವ್ಯವಹಾರ ಮಾಡಿರುತ್ತೇವೆ, ಬೇಕಾದರೆ ನಿಮಗೆ ದಾಖಲೆ ಕೊಡುತ್ತೇವೆ, ಯಾವುದೂ ನಿಯಮ ಮೀರಿ ಮಾಡಿರುವುದಿಲ್ಲ. 2 ಸಾಲದ ಸ್ಥಿರಾಸ್ತಿಗಳು ಮಾರಾಟ ಆಗುವ ಹಂತದಲ್ಲಿದ್ದು, ದುಡ್ಡು ಖಂಡಿತ ಬರುತ್ತದೆ. ನೀವು ಮತ್ತು ಎಂ ಪಿ ಮಹೇಶ್ ರವರು ಹಾಕಿರುವ ಚಾಲೆಂಜ್‌ಅನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ ಎಂದು ವಿನಂತಿಸಿದಾಗ ಶ್ರೀ ಜಿ ಎಸ್ ಬಸವರಾಜುರವರು ನಾನು ಸಭೆಗೆ ಗೌರವ ಕೊಟ್ಟು ಗೌರವಯುತವಾಗಿ ಚಾಲೆಂಜ್ ಸ್ವೀಕರಿಸಿದ್ದೇನೆ, ಯಾವುದೇ ಕಾರಣಕ್ಕೂ ವಾಪಸ್ಸು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದಾಗ ಶ್ರೀ ಎಂ ಪಿ ಮಹೇಶ್‌ರವರು ವೃತ್ತಿಪರ ನಿರ್ದೇಶಕರಾದ ಶ್ರೀ ಎಂ ಆರ್ ಆನಂದರಾಮು ರವರು ARCIL ಬಗ್ಗೆ ಸಭೆಗೆ ವಿವರ ನೀಡಬೇಕೆಂದು ಕೋರಿದಾಗ, ಶ್ರೀ ಜಿ ಎಸ್ ಬಸವರಾಜುರವರು ಈ ವಿಷಯದ ಬಗ್ಗೆ ವಿವರಿಸಲು ಅವರು ಸೂಕ್ತ ವ್ಯಕ್ತಿ ಅವರೇ ಹೇಳಲಿ ಎಂದರು, ಮತ್ತೆ ಜಿ ಎಸ್ ಬಸವರಾಜುರವರೇ ಮಾತನಾಡಲು ಮುಂದುವರೆಸಿದಾಗ ಸಭೆಯಲ್ಲಿ ಎಲ್ಲರೂ ನಿರ್ದೇಶಕರಾದ ಶ್ರೀ ಎಂ ಆರ್ ಆನಂದರಾಮುರವರು ಮಾತನಾಡಲು ಅವಕಾಶ ಕೊಡಿ ಎಂದರು. ವೃತ್ತಿಪರ ನಿರ್ದೇಶಕರಾದ ಶ್ರೀ ಎಂ ಆರ್ ಆನಂದರಾಮುರವರು ಸಭೆಯಲ್ಲಿರುವ ಸದಸ್ಯರೆಲ್ಲರಿಗೂ ನಮಸ್ಕರಿಸುತ್ತಾ ARCIL

ಬಗ್ಗೆ ಈಗ ತುಂಬಾ ಚರ್ಚೆಯಾಗುತ್ತಿದೆ ಎಂದು ಅವರ ಜೊತೆ ಮಾಡಿರುವ ವ್ಯವಹಾರದ ಬಗ್ಗೆ ವಿವರವಾಗಿ ಈ ಕೆಳಕಂಡಂತೆ ವಿವರಿಸಿದರು.

ARCIL ಎಂದರೆ Asset Restructure Company India Limited, ನಾವು ಟಿ.ಜಿ.ಎಂ.ಸಿ ಬ್ಯಾಂಕ್ ಆಗಿ Assigner ಆಗುತ್ತೇವೆ, ವಸೂಲಾತಿಯಾಗದೇ ಇರುವ ಆಸ್ತಿಯನ್ನು ನಾವು ಅವರಿಗೆ ವರ್ಗಾವಣೆ ಮಾಡಿದಾಗಿನಿಂದ ಅವರು ಯಾವತ್ತು ಆಸ್ತಿಯನ್ನು ಮಾರುತ್ತಾರೆ ಅಲ್ಲಿಯವರೆಗೂ ಬಡ್ಡಿಯನ್ನು ಲೆಕ್ಕ ಹಾಕಿ ನಮಗೆ ಸಂದಾಯ ಆಗಬೇಕಾಗಿರುವ ಸಾಲದ ಮೊತ್ತವನ್ನು ವಾಪಸ್ಸು ಕೊಡಬೇಕಾಗಿರುತ್ತದೆ. ಇವರು ಆರ್.ಬಿ.ಐ ಅಡಿಯಲ್ಲಿ ಬರುವ Restructure Company, ಇವರು ಈಡೀ ದೇಶದಿಂದ ಒಳ್ಳೊಳ್ಳೆ ಖರೀದಿದಾರರನ್ನು ಹುಡುಕಿ ಆಸ್ತಿಯನ್ನು ಮಾರುವ ಅಧಿಕಾರ ಇರುತ್ತದೆ. ಅವರು ಆಸ್ತಿ ಮಾರಾಟ ಮಾಡಿ ನಮಗೆ ಸಂದಾಯ ಮಾಡಬೇಕು ಇಲ್ಲವಾದರೆ ಸಾಲಗಾರರಿಗೆ Restructure ಮಾಡಿ 5 ವರ್ಷದಲ್ಲಿ ಸಾಲವನ್ನು ಬಡ್ಡಿ ಸಮೇತ ನಮಗೆ ಸಂದಾಯ ಮಾಡುವುದು ಆಗಿರುವ ಒಪ್ಪಂದ. ಈಗ ನಾವು ನಿಮಗೆ ತಿಳಿದಿರುವಂತೆ ಬೆಂಗಳೂರಿನ ಸಾಲದ ಖಾತೆ ದಿನಾಂಕ 31-07-2022 ಕ್ಕೆ ರೂ. 45,14,03,440/- ಮತ್ತು ಮಂಡ್ಯ ಸಾಲದ ಖಾತೆ ದಿನಾಂಕ 31-07-2022 ಕ್ಕೆ ರೂ. 70,27,22,729/- ಒಟ್ಟು ಮೊತ್ತ ರೂ. 114.94 ಕೋಟಿ ಇದ್ದು, ಇದನ್ನು ನಾವು ARCIL ನವರಿಗೆ ಕೊಟ್ಟಾಗ 20% ಮೌಲ್ಯ ಕಡಿಮೆ ಮಾಡಿಕೊಂಡು ರೂ. 91.95 ಕೋಟಿಗಳಿಗೆ ಮೌಲ್ಯ ನಿಗಧಿಪಡಿಸಿ ಅದೇ ಪ್ರಕಾರ Assignment agreement ನಲ್ಲೂ ಸಹ ನಮೂದಿಸುತ್ತಾರೆ. ಅದಕ್ಕೆ ಅನುಗುಣವಾಗಿ ಅವರು ರೂ.18.39 ಕೋಟಿಯನ್ನು ಬ್ಯಾಂಕು, ARCIL ಮತ್ತು ಸಾಲಗಾರರು ಮೂರು ಜನರಿಗೆ ಸೇರಿ IDBI ಬ್ಯಾಂಕಿನಲ್ಲಿ ESCROW account ಮಾಡಿದ್ದು, ಅಲ್ಲಿಗೆ ಜಮಾ ಮಾಡಿರುತ್ತಾರೆ. ಇನ್ನು ಮಿಕ್ಕ ರೂ.73.56 ಕೋಟಿಗಳಿಗೆ ಬಾಂಡ್ಸ್ ಕೊಟ್ಟಿರುತ್ತಾರೆ. ನೀವು ಹೇಳುವಂತೆ ರೂ.114.94 ಕೋಟಿಯಲ್ಲಿ ರೂ.91.95 ಕೋಟಿ ಕಳೆದರೆ ರೂ.32.60 ಕೋಟಿಗಳು ನಿಜವಾದ ನಷ್ಟವಾಗಿರುವುದಿಲ್ಲ, ಇದು book loss ಆಗಿರುತ್ತದೆ. ಈ ಬಗ್ಗೆ ನಮ್ಮ ಸಿಬ್ಬಂದಿಗಳ ಜೊತೆ, ARCIL ನವರ ಜೊತೆ ಎಲ್ಲಾ ಬಹಳ ಚರ್ಚೆ ಮಾಡಿದ್ದು, ಇದರಂತೆ ARCIL ನವರು 31/08/2022 ಕ್ಕೆ ಬೆಂಗಳೂರಿನ ಸಾಲಗಾರರಿಗೆ total dues summary ಕಳುಹಿಸುತ್ತಾರೆ. ಇದು agreement ಗೆ annexure ಆಗಿದ್ದು, ನೀವು ಇದನ್ನು ಕೇಂದ್ರ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ. ಈ ಮಧ್ಯೆ ನಿಮಗೆ ಅನ್ನಿಸಬಹುದು 20% ಕಡಿಮೆ ಮಾಡಿದರೆ ಬೆಂಗಳೂರು ಆಸ್ತಿಯು ರೂ.45.14 ಕೋಟಿ ಇದ್ದದ್ದು ರೂ. 35.73 ಕೋಟಿ ಗಳಾಗುತ್ತದೆ ಎಂದು, ಇದರ ಪ್ರಕಾರ ಏನಾಗುತ್ತದೆ ಎಂದರೆ ಬೆಂಗಳೂರು ಸಾಲಗಾರರ ರೂ .45.14 ಕೋಟಿಗೆ ಹಿಂದಿನ 31/08/2022 ರಿಂದ 31/08/2023 ರವರೆಗೆ ಬಡ್ಡಿ ಸೇರಿಸಿ ರೂ. 53,68,70,000/- ವಸೂಲಾಗಬೇಕು ಎಂದು ಹೇಳಿದ್ದಾರೆ. ಇದರ ಪ್ರಕಾರ ಸಾಲಗಾರರು ಅವರದೇ Letter head ನಲ್ಲಿ ARCIL ಗೆ NOC ನೀಡಿದ್ದು, ಇವರ ಆಸ್ತಿ 1 ಮನೆ, 2 ಸೈಟು, 2 ಬಿಲ್ಡಿಂಗ್ ಎಲ್ಲಾ ಸೇರಿ ಒಟ್ಟು ರೂ. 105,37,50,380/- ಇದ್ದು, ಇದರಲ್ಲಿ 2 ಆಸ್ತಿಗಳನ್ನು ರೂ.75.00 ಕೋಟಿಗಳಿಗೆ ಮಾರಬಹುದು ಎಂದು ಇರುತ್ತದೆ. ಅದರಲ್ಲಿ ನಾವು ಟಿ.ಜಿ.ಎಂ.ಸಿ ಬ್ಯಾಂಕಿನಿಂದ ನಾವು ಪಡೆದ ಸಾಲಕ್ಕೆ ಬಡ್ಡಿ 11.00% ಮತ್ತು ನಿಮ್ಮ Management fees 3% ಮತ್ತು Recovery fees 3.5% ಸಹ ಆಸ್ತಿ ಮಾರಿದ ದುಡ್ಡಿನಲ್ಲಿ ತೆಗೆದುಕೊಳ್ಳಬಹುದು ಎಂದು NOC ನೀಡಿರುತ್ತಾರೆ. ಅವರು ಆಸ್ತಿ ಮಾರಿದಾಗ ಬಂದ ಹಣದಲ್ಲಿ ಶೇ.11 ರ ಬಡ್ಡಿಯಂತೆ ಬ್ಯಾಂಕಿಗೆ ನೀಡಿ, ಅವರ ಚಾರ್ಜಸ್‌ಗಳನ್ನು ಅವರು ತೆಗೆದುಕೊಂಡು ಮಿಕ್ಕ ಹಣವನ್ನು ಸಾಲಗಾರರಿಗೆ ವಾಪಸ್ಸು ಕೊಡಬೇಕಾಗುತ್ತದೆ. ಇದು ಬ್ಯಾಂಕು ಮತ್ತು ARCIL ನವರಿಗೆ ಆಗಿರುವ Assignment agreement. ಇದು ಒಬ್ಬರು ಸಾಲಗಾರರಿಗೆ ಸಂಬಂಧಪಟ್ಟಿದ್ದು, ಈ ತಿಂಗಳ ಅಂತ್ಯದೊಳಗೆ ಮುಗಿಯಬೇಕಾಗಿರುತ್ತದೆ. ಮತ್ತೊಬ್ಬ ಮಂಡ್ಯ ಸಾಲಗಾರರದ್ದು ಜುಲೈ 2022 ರಲ್ಲಿ ನಾವು ARCIL ನವರಿಗೆ assign ಮಾಡಿದಾಗ ಅವರ ಒಟ್ಟು ಸಾಲ ರೂ. 70,27,22,779/- ಇದ್ದು ಬಡ್ಡಿ ಸೇರಿಸಿ 31/08/2023 ಕ್ಕೆ ರೂ. 88,51,60,478/- ಎಂದು ಅವರಿಗೆ ARCIL ನವರು ಪತ್ರ ನೀಡಿರುತ್ತಾರೆ. ಇದನ್ನು ಅವರು 5 ವರ್ಷಗಳ ಅವಧಿಗೆ restructure ಸಹ ಮಾಡಿಕೊಡುತ್ತಾರೆ. ಇದು ಜೂನ್ 2023 ರಿಂದ ಪ್ರಾರಂಭವಾಗಿರುತ್ತದೆ. ಅದರಲ್ಲಿ ಅರ್ಜಿದಾರರು ಆಗಲೇ ರೂ. 3.40 ಕೋಟಿ ಬಂದಿದ್ದು, ಇದು ESCROW account ಗೆ ಬಂದಿದ್ದು ARCIL ನವರು ಈ ಹಣವನ್ನು ಅವರ ಎಲ್ಲಾ ಸಾಲದ ಖಾತೆಗಳ ಬಡ್ಡಿ ಜಮಾ ಮಾಡಿರುತ್ತಾರೆ. ಜೂನ್ 2023 ಗೆ ಅಕೌಂಟ್ ಪ್ರಾರಂಭವಾದರೆ ಅವರು ರೂ. 3.39 ಕೋಟಿ ಸೆಪ್ಟಂಬರ್ 30 ರ ಒಳಗೆ ಕಟ್ಟಬೇಕಾಗುತ್ತದೆ, ಡಿಸೆಂಬರ್ 31 ರೊಳಗೆ ರೂ. 4.39 ಕೋಟಿ ಕಟ್ಟಬೇಕಾಗುತ್ತದೆ, ನಂತರ ಮುಂದಿನ ಮಾರ್ಚ್ 31, ಈ ತರಹ ಅವರಿಗೆ 5 ವರ್ಷಗಳಿಗೆ restructure ಮಾಡಿಕೊಟ್ಟಿದ್ದು, 5 ವರ್ಷದ ಕೊನೆಗೆ ಒಟ್ಟು ಅವರು ರೂ. 116.80 ಕೋಟಿ ಬ್ಯಾಂಕಿಗೆ ಬರುತ್ತದೆ. ಅದಕ್ಕೆ ಮುಂಚೆನೇ ಅವರ ಆಸ್ತಿ ಮಾರಾಟವಾದರೆ, 11% ಬಡ್ಡಿದರದಲ್ಲಿ ಅವತ್ತಿಗೆ ಸಾಲದ ಬಾಕಿ ಏನು ಬರಬೇಕೋ ಅದು ಬ್ಯಾಂಕಿಗೆ ಬಂದು ಸಾಲ ಮುಕ್ತಾಯವಾಗುತ್ತದೆ. ಇವರ ಮಂಡ್ಯದ ಆಸ್ತಿಯ ಒಟ್ಟು ಮೌಲ್ಯ ರೂ. 154 ಕೋಟಿಗಳಿರುತ್ತದೆ. ARCIL ನವರಿಗೆ ಆಗಿರುವ Assignment agreement ಪ್ರಕಾರ ಅದರ ಅವಧಿ ಮುಗಿಯುವ ಹೊತ್ತಿಗೆ ಬ್ಯಾಂಕಿಗೆ ಪೂರ್ತಿ ದುಡ್ಡು ಬಡ್ಡಿ ಸಮೇತ ಬಂದಿರುತ್ತದೆ ಎಂದು ಪೂರ್ಣವಾಗಿ ವಿವರಿಸಿದರು.

ನಂತರ ಸದಸ್ಯರಾದ ಪಿ ಸದಾಶಿವಯ್ಯರವರು ಮಾತನಾಡಿ ಶ್ರೀ ಜಿ ಎಸ್ ಬಸವರಾಜು ರವರು ಕೇಳಿದಂತೆ ಆರ್.ಬಿ.ಐ ಸುತ್ತೋಲೆಯಂತೆ ಸರಿಯಾಗಿ ಮಾಡಿರುತ್ತೀರ ಎಂದು ಕೇಳಿದಾಗ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ ಆರ್ ಆನಂದರಾಮು ರವರು ಮಾತನಾಡಿ ARCIL ನವರು ಆರ್.ಬಿ.ಐ ನಡಿ ರಿಜಿಸ್ಟರ್ ಆಗಿರುತ್ತಾರೆ. ARCIL ಗೆ ಹೋಗಿರುವುದರಲ್ಲಿ ನಮ್ಮದು ಮೊದಲ UCB, ಮಂಡ್ಯ ಆಸ್ತಿಯನ್ನು ಸಾಲಗಾರರೇ ಮಾರುವುದಾಗಿ ಪ್ರಕಟಣೆ ನೀಡಿದರು, ಅದರೂ ಮಾರಾಟವಾಗಲಿಲ್ಲ. ನಮ್ಮ ಬ್ಯಾಂಕಿನಿಂದ ಸಹ SARFEASI ಕಾಯ್ದೆಯಡಿ ಹರಾಜು ಮಾಡಲು ಪ್ರಯತ್ನಿಸಿದರೂ ಸಹ ಅದು ಮಾರಾಟವಾಗಲಿಲ್ಲ. ಇಲ್ಲಿಯವರೆಗೂ ಯಾವುದೇ UCB ಯವರೂ ಸಹ ARCIL ಗೆ ಹೋಗಿರುವುದಿಲ್ಲ. ಅವರೂ ಸಹ UCB ಯವರ ಜೊತೆ ವ್ಯವಹಾರ ಮಾಡಲು ಸಿದ್ಧರಿರಲಿಲ್ಲ. ನಾವು ಅವರ ಹತ್ತಿರ ಕೇಳಿಕೊಂಡು ಆಸ್ತಿ ಮಾರಿಸಿ ನಮಗೆ ಬರಬೇಕಾದ ಸಾಲ ಬಡ್ಡಿ ಸಮೇತ ನೀಡಿ ಮತ್ತು ಅವರಿಗೆ ಬರಬೇಕಾಗಿರುವ ಚಾರ್ಜಸ್‌ಅನ್ನು ತೆಗೆದುಕೊಳ್ಳುವುದಾಗಿ ಕೇಳಿದ್ದು, ಯಾವುದೇ ಲೋಪದೋಷಗಳಿಲ್ಲದೇ Assignment agreement ಮಾಡಿರುತ್ತೇವೆ. ಬ್ಯಾಂಕಿನ ಆಡಳಿತ ಮಂಡಳಿ, ನಿರ್ವಹಣಾ ಮಂಡಳಿಯವರ ಪ್ರಕಾರ ನಾವು ಮಾಡಿರುವ Assignment agreement ಸರಿಯಾಗಿರುತ್ತದೆ ಎಂದಾಗ ಸದಸ್ಯರೊಬ್ಬರು ಅವರು ಮಾರಾಟ ಮಾಡುವವರೆಗೂ ನಮಗೆ ಬರಬೇಕಾದ ಬಡ್ಡಿ ಬರುತ್ತದೆಯೇ ಎಂದು ಕೇಳಿದಾಗ ನಿರ್ದೇಶಕರು ಹೌದು ಅವರು ಆಸ್ತಿ ಮಾರಾಟ ಮಾಡುವವರೆಗೂ 11% ಬಡ್ಡಿಯೊಂದಿಗೆ ಬರುತ್ತದೆ ಎಂದು ಹೇಳಿದರು. ಮತ್ತೆ ಮುಂದುವರಿದು ಆಸ್ತಿಗಳು ಟಿ.ಜಿ.ಎಂ.ಸಿ ಬ್ಯಾಂಕಿನ ಹೆಸರಿನಲ್ಲಿಯೇ ಇರುತ್ತದೆ. ನಾವು ಬರೀ ಅವರಿಗೆ ದಾಖಲೆಗಳನ್ನು ನೋಡಲು ಕೊಟ್ಟಿದ್ದು, Title ಮಾತ್ರ ಕೊಟ್ಟಿರುತ್ತೇವೆ ಎಂದಾಗ ಸದಸ್ಯರಾದ ಪಿ ಸದಾಶಿವಯ್ಯರವರು ಒಪ್ಪಿದೆ ಮುಂದಿನ ವಿಷಯಕ್ಕೆ ಹೋಗಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ರೇಣುಕಾರಾಧ್ಯ ರವರು ಮಾತನಾಡಿ ARCIL ನವರಿಗೆ ಇದರಿಂದ ಏನು ಉಪಯೋಗ ಎಂದು ಕೇಳಿದಾಗ ಶ್ರೀ ಎಂ ಆರ್ ಆನಂದರಾಮು ರವರು ARCIL ನವರು Management fees 3% p.a ಮತ್ತು Recovery fees 3.5% ಇದ್ದು, ಇದನ್ನು ಅವರು ಆಸ್ತಿ ಮಾರಾಟ ಮಾಡಿದ ಹಣದಿಂದ ಸಾಲಗಾರರ ಕಡೆಯಿಂದಲೇ ತೆಗೆದುಕೊಳ್ಳುತ್ತಾರೆ. ಇದರಿಂದ ಬ್ಯಾಂಕಿಗೆ ಯಾವುದೇ ಹೊರೆ ಇರುವುದಿಲ್ಲ ಎಂದು ಹೇಳಿದರು. ನಂತರ ಇದನ್ನು ನಾವು ARCIL ನವರಿಗೆ ಕೊಡುವ ಮುಂಚೆಯೇ ಇಬ್ಬರು ಸಾಲಗಾರರ ಹತ್ತಿರ, ARCIL ನವರ ಹತ್ತಿರ ಬ್ಯಾಂಕಿನವರು ಮಾತನಾಡಿ ಅವರು ಒಪ್ಪಿಗೆ ಕೊಟ್ಟ ನಂತರ ಇದನ್ನು ಮಾಡಬಹುದಾಗಿರುತ್ತದೆ. ಇಲ್ಲವಾದರೆ ಬ್ಯಾಂಕು ಯಾವುದೇ ಕಾರಣಕ್ಕೂ ARCIL ಗೆ ನೀಡಲು ಸಾಧ್ಯವಿರುವುದಿಲ್ಲ ಎಂದು ಹೇಳಿದರು. ನಂತರ ಶ್ರೀ ಜಿ ಎಸ್ ಬಸವರಾಜುರವರು ಸುತ್ತೋಲೆಯ 17 ನೇ ಪುಟದಲ್ಲಿ ಇರುವ ಒಂದು ಪಾಯಿಂಟ್ ಓದಿ ಇದಕ್ಕೆ ಸಂಬಂಧ ಪಟ್ಟಂತೆ ನೀವು ಬ್ಯಾಂಕಿನಲ್ಲಿ ಪಾಲಿಸಿ ಮಾಡಿಕೊಂಡಿದ್ದೀರ, ಎಂದು ಕೇಳಿದ್ದಕ್ಕೆ ಶ್ರೀ ಎಂ ಆರ್ ಆನಂದರಾಮುರವರು ನಾವು ಕಾರ್ಯಕಾರಿ ಮಂಡಳಿಯಲ್ಲಿ ರೆಸಲ್ಯೂಷನ್ ಮಾಡಿಕೊಂಡಿದ್ದೇವೆ ಎಂದು ಹೇಳಿದರು. ಮತ್ತೆ ಜಿ ಎಸ್ ಬಸವರಾಜುರವರು ಆರ್.ಬಿ.ಐ ಸುತ್ತೋಲೆಯ ಮತ್ತೊಂದು ಪಾಯಿಂಟ್ ಎಂದು ಹೇಳಿದಾಗ ಶ್ರೀ ಎಂ ಆರ್ ಆನಂದರಾಮುರವರು ಇಲ್ಲಿ ಈಗ ನಾನು ರೂ. 32.60 ಕೋಟಿ ನಷ್ಟವಾಗದೇ ಪೂರ್ಣ ಮೊತ್ತ ಬರುತ್ತದೆ ಎಂದು ನಾನು ನಿಮಗೆ ಮತ್ತು ಸಭೆಗೆ ತಿಳಿಸಿದ್ದೇನೆ, ಇದರ ಬಗ್ಗೆ ಇನ್ನೂ ಏನಾದರೂ ಅನುಮಾನ ಇದ್ದರೆ ಕೇಳಿ ಎಂದರು, ಆದರೆ ಶ್ರೀ ಜಿ ಎಸ್ ಬಸವರಾಜುರವರು ಮತ್ತೆ ಸುತ್ತೋಲೆ violation ಆಗಿದೆ ಎಂದು ಮತ್ತೆ ಅದನ್ನೇ ಹೇಳಿದರು. ನಂತರ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ಇಷ್ಟೆಲ್ಲ ವಿವರಣೆ ಕೇಳಿದ ಮೇಲೆ ನಮ್ಮ ದುಡ್ಡು ಸೇಫ್ ಆಗಿದೆ ಎಂದು ಗೊತ್ತಾಗಿದೆ. ಏಕೆಂದರೆ ಆರ್.ಬಿ.ಐ ನ ಅಡಿ ಇದೆಲ್ಲಾ ಆಗಿರುವುದರಿಂದ ಇದು ಭದ್ರವಾಗಿದೆ ಎಂದು ನಂಬುತ್ತೇವೆ, ಬ್ಯಾಂಕಿನವರೂ ಸಹ ಇದನ್ನೆಲ್ಲ ತಿಳಿದುಕೊಂಡು ಇದನ್ನೆಲ್ಲ ಮಾಡಿರುತ್ತಾರೆ. ಇದನ್ನು ಒಪ್ಪಿಕ್ಕೊಳ್ಳಬಹುದು, ಮುಂದಿನ ವಿಷಯಕ್ಕೆ ಹೋಗಿ ಎಂದು ಹೇಳಿ, ಶ್ರೀ ಜಿ ಎಸ್ ಬಸವರಾಜುರವರಿಗೆ, ಇದರ ಬಗ್ಗೆ ತಿಳುವಳಿಕೆ ಬಂದ ಮೇಲೆ ಅನಾವಶ್ಯಕವಾಗಿ ಮತ್ತೆ ಚರ್ಚೆ ಬೇಡ ಎಂದರು ಇತರೆ ಸದಸ್ಯರೂ ಸಹ ಒಪ್ಪಿದರು, ಆದರೆ ಮತ್ತೆ ಶ್ರೀ ಜಿ ಎಸ್ ಬಸವರಾಜುರವರು, ಮುನಿಗಂಗಪ್ಪರವರು ಹೇಳಿದ ಮೇಲೆ ಒಪ್ಪಿಕೊಳ್ಳುತ್ತೇನೆ, ಆದರೆ ಒಂದು ವೇಳೆ ಬ್ಯಾಂಕಿಗೆ ರೂ. 32.60 ಕೋಟಿ ನಷ್ಟವಾದರೇ ಆಡಳಿತ ಮಂಡಳಿಯವರೇ ಹೊಣೆ ಎಂದು ರೆಸಲ್ಯೂಷನ್ ಬರೆಸಿ ಎಂದು ಹೇಳಿದರು, ಇದಕ್ಕೆ ಶ್ರೀ ಎಂ ಪಿ ಮಹೇಶ್ ರವರು ನೀವು ಪದೇ ಪದೇ ಒಂದೇ ಸುಳ್ಳನ್ನು ಹೇಳಿ ಅದನ್ನು ಸತ್ಯ ಎಂದು ಸಾಬೀತು ಪಡಿಸಲು ಹೊರಟಿದ್ದೀರ, ಸಭೆಗೆ ಇಷ್ಟು ವಿವರವಾಗಿ ವಿವರಿಸಿದ ನಂತರ ಸಭೆಯಲ್ಲಿರುವ ಎಲ್ಲರೂ ಒಪ್ಪಿದ ನಂತರವೂ ನೀವು ಮತ್ತೆ ಅದನ್ನೇ ಹೇಳುತ್ತಿದ್ದೀರ ಎಂದು ಹೇಳಿದಾಗ, ಸದಸ್ಯರಾದ ಶ್ರೀ ಕೆ ವಿ ಬೆಟ್ಟಯ್ಯರವರು ಶ್ರೀ ಮುನಿಗಂಗಪ್ಪರವರು ಸರಿಯಾಗಿ ವಿವರಣೆ ಕೇಳಿ ಪಡೆದಿದ್ದು, ಸರಿಯಾಗಿದೆ ಎಂದು ಹೇಳಿದ್ದಾರೆ ಮತ್ತೆ ಚರ್ಚೆ ಮಾಡುವ ಅಗತ್ಯ ಇಲ್ಲ ಎಂದಾಗ ಉಳಿದ ಸದಸ್ಯರು ನಾವೆಲ್ಲರೂ ಒಪ್ಪಿರುವುದಾಗಿ ಮುಂದಿನ ಪ್ರಶ್ನೆಗೆ ಹೋಗಿ ಎಂದು ಹೇಳಿದರು. (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜುರವರು ಲೆಕ್ಕಪರಿಶೋಧನಾ ವರದಿಯ ಮುಂದಿನ ಪುಟ ಸಂಖ್ಯೆ ಹೇಳಿದಾಗ ಲೆಕ್ಕಪರಿಶೋಧನೆಗೆ ಒಪ್ಪಿಗೆ ಕೇಳಿದಾಗ ಶ್ರೀ ಜಿ ಎಸ್ ಬಸವರಾಜುರವರು ಮಾತ್ರ ನನಗೆ ಒಪ್ಪಿಗೆ ಇಲ್ಲ ಎಂದು ಹೇಳಿದರು. ನೀವು ಕೊಟ್ಟಿರುವ ವರದಿಯಲ್ಲಿ ದುಡ್ಡು ವಾಪಸ್ಸು ಬರುತ್ತದೆ ಎಂದು ಎಲ್ಲೂ ಹೇಳಿಲ್ಲ, ಇದು ನನಗೆ ಒಪ್ಪಿಗೆ ಇಲ್ಲ ಎಂದರು. ನಾನು ಬ್ಯಾಂಕಿನ ಹಿತಾಸಕ್ತಿಯಿಂದ ಕೇಳುತ್ತಿದ್ದೇನೆ, ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ಬ್ಯಾಂಕಿನ ಹಿತಾಸಕ್ತಿ ಎಂದು ಹೇಳುತ್ತೀರ ದಿನಾ ಬೆಳಗ್ಗೆ ಬ್ಯಾಂಕಿನ ಬಗ್ಗೆ ಅಪಪ್ರಚಾರ ಮಾಡುತ್ತೀರ ಬಾಯಿಯಲ್ಲಿ ಮಾತ್ರ ಹಿತಾಸಕ್ತಿ ಎಂದು ಹೇಳುತ್ತೀರ ಆದರೆ

ಯಾವತ್ತಾದರೂ ಬ್ಯಾಂಕಿನ ಬಗ್ಗೆ ಒಳ್ಳೆಯ ವಿಷಯವನ್ನು ಮೆಸೇಜ್ ಕಳುಹಿಸಿರುತ್ತೀರ, ಸಭೆಯಲ್ಲಿ ಇಷ್ಟು ವಿವರವಾಗಿ ವಿವರಣೆ ನೀಡಿರುತ್ತೇವೆ. ಆದರೂ ಮತ್ತೆ ಅದನ್ನೇ ಪ್ರಶ್ನೆ ಮಾಡುತ್ತಿದ್ದೀರ, ಹಿರಿಯ ಸದಸ್ಯರಾದ ಮಾಜಿ ಉಪಾಧ್ಯಕ್ಷರಾಗಿದ್ದ ಶ್ರೀ ಕೆ ಜಿ ಮುನಿಗಂಗಪ್ಪರವರಿಗೆ ಬ್ಯಾಂಕಿಂಗ್‌ನಲ್ಲಿ ಅನುಭವಿದೆ ಅದಕ್ಕೆ ಅವರು ಒಪ್ಪಿಗೆ ನೀಡಿದರು ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ನೀವು ನಷ್ಟ ನಷ್ಟ ಎಂದು ಹೇಳುತ್ತಿದ್ದು, ಈ ವರ್ಷ ಲಾಭ ಮಾಡಿದ್ದು, ನೀವು ಅದನ್ನು ಎಲ್ಲಾದರೂ ಹೇಳಿರುತ್ತೀರ, ತುಮಕೂರಿನ ಒಂದು ಸಂಸ್ಥೆಗೆ ವಸೂಲಾತಿಗೆ ಹೋಗಿ 2.00 ಗಂಟೆಗೆ ಬೀಗ ಹಾಕಿಸಿದ್ದು, ನಂತರ ಅವರು 4.00 ಗಂಟೆಗೆ ದುಡ್ಡು ಕಟ್ಟಿ ಬೀಗ ತೆಗೆಯಲಾಗಿದೆ, ವಸೂಲಾತಿಗೆ ಕಷ್ಟ ಪಡುತ್ತಿದ್ದೇವೆ ಎಂದು ನೀವು ಹೇಳುತ್ತೀರ ಇಂಥಹ ಯಾವುದಾದರೂ ಒಳ್ಳೆಯ ವಿಷಯವನ್ನು ನೀವು ಮೆಸೇಜ್‌ನಲ್ಲಿ ಹಾಕಿರುತ್ತೀರ ಎಂದು ಕೇಳಿದರು. ನಂತರ ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ಬ್ಯಾಂಕಿಗೆ ನಷ್ಟ ಆಗಿರುವ ಬಗ್ಗೆ ಮಾತನಾಡಿ, 4 ವರ್ಷಗಳಿಂದ ಸದಸ್ಯರಿಗೆ ಡಿವಿಡೆಂಡ್ ನೀಡಿರುವುದಿಲ್ಲ ಎಂದಾಗ ಅಧ್ಯಕ್ಷರು ಅದು ನಮಗೂ ಗೊತ್ತಿದೆ. ವಸೂಲಾತಿ ಮಾಡುತ್ತಿದ್ದೇವೆ, ನಾವು ಬೀಗ ಹಾಕಿಸಿ ವಸೂಲಾತಿ ಮಾಡಿದರೂ ಸಹ ನೀವು ಸಂಸ್ಥೆಗೆ ಬೀಗವೇ ಹಾಕಿರುವುದಿಲ್ಲ ಎಂದು ಹೇಳಿದಿರಿ. ಬರೀ ಮೈನಸ್ ಪಾಯಿಂಟ್‌ಗಳನ್ನೇ ಹೇಳುತ್ತೀರ, ಪ್ಲಸ್ ಪಾಯಿಂಟ್‌ಗಳನ್ನೂ ಹೇಳಿ ಎಂದಾಗ ಜಿ ಎಸ್ ಬಸವರಾಜುರವರು ನೀವು ಸಭೆಯನ್ನು ದಾರಿತಪ್ಪಿಸುತ್ತಿದ್ದೀರಿ, ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಸಭೆಯ ದಾರಿ ತಪ್ಪಿಸುತ್ತಿರುವುದು ನೀವು ನಾವಲ್ಲ, ಇಲ್ಲಸಲ್ಲದ ಮೆಸೇಜ್‌ಗಳನ್ನು ಕಳುಹಿಸಿ ಸದಸ್ಯರ ದಾರಿ ತಪ್ಪಿಸುತ್ತಿದ್ದೀರ, ಹೆಚ್ಚು ಬಡ್ಡಿ ಎಂದು ನಮ್ಮ ಬಳಿ ಠೇವಣಿ ಇಟ್ಟಿದ್ದ ಎಷ್ಟೋ ಹಿರಿಯ ನಾಗರೀಕರು ನಿಮ್ಮ ಮೆಸೇಜ್‌ನಿಂದ ಠೇವಣಿ ವಾಪಸ್ಸು ತೆಗೆದುಕೊಂಡಿದ್ದಾರೆ ನೀವು ಸದಸ್ಯರ ದಾರಿ ತಪ್ಪಿಸುತ್ತಿರುವುದು ಎಂದು ಹೇಳಿದಾಗ ಇತರೆ ಸದಸ್ಯರೆಲ್ಲರೂ ನೀವು ಸಭೆಯನ್ನು ಮುಂದುವರೆಸಿ ಎಂದು ಹೇಳಿದರು.

ಸದಸ್ಯರಾದ ಶ್ರೀ ನಾಗೇಶ್ ಟಿ ಎಸ್ ರವರು ಮಾತನಾಡಿ ಸಾಕಷ್ಟು ಚರ್ಚೆಯಾಗಿದೆ. ನೀವು ಏನು ವಸೂಲಾತಿಗೆ ಆಕ್ಷನ್ ತೆಗೆದುಕೊಂಡಿರುತ್ತೀರ ಅದರ ಬಗ್ಗೆ ಮಾತನಾಡಿ ಎಂದಾಗ ಸದಸ್ಯರಾದ ಶ್ರೀ ಕೆ ಎಸ್ ದಯಾನಂದ್‌ರವರು ಅವರು ಮಾಡಿರುವುದಕ್ಕೆ ನೀವು ತಿಪ್ಪೆ ಸಾರಿಸಬೇಡಿ ಎಂದು ಅಸಭ್ಯವಾಗಿ ಮಾತನಾಡಿದರು. ಶ್ರೀ ನಾಗೇಶ್ ಕೆ ಎಸ್ ರವರು ತಿಪ್ಪೆನೂ ಸಾರಿಸುತ್ತಿಲ್ಲ, ಕಸವೂ ಗುಡಿಸುತ್ತಿಲ್ಲ, ಶ್ರೀ ಮುನಿಗಂಗಪ್ಪರವರು ಎಲ್ಲಾ ವಿವರಣೆ ಕೇಳಿ ಮುಂದುವರೆಸಬಹುದು ಎಂದು ಹೇಳಿದ್ದು, ಆ ವಿಷಯವನ್ನು ಬಿಟ್ಟು ಮುಂದುವರೆಯಿರಿ, ಬ್ಯಾಂಕಿಗೆ ಒಳ್ಳೆಯ ಸಲಹೆ ಕೊಡುತ್ತಿದ್ದೇನೆ ಎಂದು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೇಗೆ ಕೆಲಸ ನಿರ್ವಹಿಸುತ್ತಿದ್ದೀರ, ಶಾಖೆಗಳನ್ನು ವಿಲೀನಗೊಳಿಸುವ ಬಗ್ಗೆ, ಬ್ಯಾಂಕನ್ನು ಹೇಗೆ ಮುಂದುವರೆಸಬೇಕೆಂದು ಮಾತನಾಡಿ ಎಂದು ಹೇಳಿದರು. ನಂತರ ಶ್ರೀ ಕೆ ಜಿ ಮುನಿಗಂಗಪ್ಪ ರವರು ಮಾತನಾಡಿ ವೇದಿಕೆ ಮೇಲಿರುವ ಆಡಳಿತ ಮಂಡಳಿ ಸದಸ್ಯರನ್ನುದ್ದೇಶಿಸಿ ಯಾವುದ್ಯಾವುದೋ ಅನಾವಶ್ಯಕ ಪಾಯಿಂಟ್‌ಗಳನ್ನಿಟ್ಟುಕೊಂಡು ನೀವು ಅದಕ್ಕೆ ಕೌಂಟರ್ ಕೊಡುವುದು ಸಮಯ ವ್ಯರ್ಥ ಮಾಡಿದಂತೆ, ಅವರು ಕೇಳುವುದು ಸಹ ತಪ್ಪು, ಎಂದು ಈ ವರ್ಷದ ಆರ್ಥಿಕ ವಿಷಯಗಳ ಬಗ್ಗೆ ಮಾತ್ರ ಮಾತನಾಡಿ, ರೆಸಲ್ಯೂಷನ್ ಬರೆಸಿ, ಅದು ಮಾಡಿ ಇದು ಮಾಡಿ ಎಂದು ಹೇಳುವುದು ಸರಿಯಲ್ಲ. ಇಷ್ಟು ವಿವರಣೆ ನೀಡಿದ ಮೇಲೆ ಅದರ ಅವಶ್ಯಕತೆಯಿಲ್ಲ, ಸಭೆಯ ಸಮಯ ವ್ಯರ್ಥ ಮಾಡಬೇಡಿ ಎಂದು ಜಿ ಎಸ್ ಬಸವರಾಜುರವರಿಗೆ ಮನವಿ ಮಾಡಿದರು ಮತ್ತು ಸಭೆಯನ್ನು ಮುಂದುವರೆಸಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಡಿ ಜೆ ಶಶಿಧರ್‌ರವರು ಮಾತನಾಡಿ ಬ್ಯಾಂಕಿನ ಎನ್.ಪಿ.ಎ ಬಗ್ಗೆ ಕೇಳಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ದಿನಾಂಕ 31-03-2023 ಕ್ಕೆ ನಿವ್ವಳ ಎನ್.ಪಿ.ಎ ಶೇ. 23.08 ಇತ್ತು, ಆದರೆ ದಿನಾಂಕ 07-09-2023 ಕ್ಕೆ ನಿವ್ವಳ ಎನ್.ಪಿ.ಎ 13% ಆಗಿದೆ. ಡಿಸೆಂಬರ್ ಒಳಗಾಗಿ ನಿವ್ವಳ ಎನ್.ಪಿ.ಎ ಶೇ. 10 ರೊಳಗೆ ಮಾಡುವುದಾಗಿ ಆಶ್ವಾಸನೆ ನೀಡಿದರು. ಇತ್ತೀಚೆಗೆ ವಸೂಲಾತಿ ತುಂಬಾ ಚೆನ್ನಾಗಿ ಆಗುತ್ತದೆ. Recovery ಟೀಮ್ ಮತ್ತು ಶಾಖಾ ವ್ಯವಸ್ಥಾಪಕರು ಹಗಲು ರಾತ್ರಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಯಾರೂ ಗಾಬರಿಯಾಗಬೇಕಾಗಿಲ್ಲ. 13% ಗೆ ಬಂದಿದೆ ಇನ್ನು 3% ಕಡಿಮೆ ಮಾಡುವುದು ಕಷ್ಟವಲ್ಲ. ಡಿಸೆಂಬರ್ ಅಂತ್ಯದೊಳಗೆ 10% ಒಳಗೆ ತರುತ್ತೇವೆ ಎಂದು ಆಶ್ವಾಸನೆ ಕೊಡುತ್ತೇವೆ. ನೀವೆಲ್ಲರೂ ನಮ್ಮನ್ನು ಅನುಮಾನಿಸಬೇಡಿ ಪ್ರೋತ್ಸಾಹಿಸಬೇಕು ಎಂದು ಕೇಳಿದರು. ನಮ್ಮ ಬಗ್ಗೆ ಮಂಡಿಪೇಟೆಯಲ್ಲಿ ಕಮಿಷನ್ ತೆಗೆದುಕೊಂಡಿರುವುದಾಗಿ ಮಾತನಾಡುತ್ತಾರಂತೆ, ನಾವು ಏನನ್ನೂ ಪಡೆಯದೇ ಇಂತಹ ಮಾತುಗಳನ್ನು ಕೇಳಬೇಕಾ? ನನಗೆ ರಾತ್ರಿ ನಿದ್ದೆಯೇ ಬರುವುದಿಲ್ಲ ಎಂದು ಹೇಳಿದರು. ಅದಕ್ಕೆ ಸದಸ್ಯರಾದ ಶ್ರೀ ಡಿ ಜೆ ಶಶಿಧರ್‌ರವರು ಇದು ತಪ್ಪು ನಾವು ನಿಮ್ಮನ್ನು ನಂಬುತ್ತೇವೆ ಎಂದು ಹೇಳಿ ಪುಟ ಸಂಖ್ಯೆ 92 ರ ಬಗ್ಗೆ ಒಂದು ಪ್ರಶ್ನೆಗೆ ಉತ್ತರಿಸಿದರೆ ನಮ್ಮ ಪ್ರಶ್ನೆ ಮುಗಿಯುತ್ತದೆ ಎಂದರು. ಪುಟ ಸಂಖ್ಯೆ 92-93 ರಲ್ಲಿ ಮಂಜೂರಾದ ಹುದ್ದೆಗಳು 418 ಇದ್ದು, ಭರ್ತಿಯಾಗಿರುವ ಹುದ್ದೆಗಳು 194 ಮಾತ್ರ ಇದ್ದು, ಇನ್ನೂ ಖಾಲಿ ಹುದ್ದೆಗಳು 224 ಇದ್ದು ಇದನ್ನು ನೇಮಕಾತಿ ಮಾಡಿಕೊಳ್ಳಲು 2014 ರಲ್ಲೇ ನಿಮಗೆ ಅನುಮತಿ ದೊರೆತಿದ್ದು, ನೀವು ಏಕೆ ನೇಮಕಾತಿ ಮಾಡಿಕೊಂಡಿರುವುದಿಲ್ಲ ಎಂದು ಕೇಳಿದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ನಮಗೆ ಅಧಿಕಾರ ಇರುವುದಿಲ್ಲ, ನಾವು ಯಾವುದೇ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಆರ್.ಸಿ.ಎಸ್ ಗೆ ಅನುಮತಿಗೆ ಕಳುಹಿಸಬೇಕು. ನಾವು 6 ತಿಂಗಳ ಹಿಂದೆಯೇ ಅನುಮತಿಗಾಗಿ ಆರ್.ಸಿ.ಎಸ್ ಗೆ ಕಳುಹಿಸಿದ್ದೇವೆ ಆದರೆ ಇನ್ನೂ ಅವರಿಂದ ಅನುಮತಿ ಬಂದಿರುವುದಿಲ್ಲ ಎಂದು

ಹೇಳಿದರು, ಸದಸ್ಯರಾದ ಶ್ರೀ ಡಿ ಜೆ ಶಶಿಧರ್ ರವರು ನಿಮ್ಮ ವರದಿಯಲ್ಲಿ ನೀವೇ ನೀಡಿರುವಂತೆ 2003 ರಲ್ಲಿ 123, 2004 ರಲ್ಲಿ 41, 2011 ರಲ್ಲಿ 56, 2014ರಲ್ಲಿ 90 ಮತ್ತು 2014 ರಲ್ಲಿ 108 ಹುದ್ದೆಗಳನ್ನು ನೀವೇ ಮಂಜೂರು ಮಾಡಿಕೊಂಡಿದ್ದು, ಇನ್ನೂ ಏಕೆ ನೇಮಕಾತಿ ಮಾಡಿಕೊಂಡಿರುವುದಿಲ್ಲ ಎಂದರು ಇದಕ್ಕೆ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ಮಾತನಾಡಿ ಆಗ ಅವಶ್ಯಕತೆ ಇದ್ದಷ್ಟು ಹುದ್ದೆಗಳನ್ನು ಆಗ ಅನುಮತಿ ತೆಗೆದುಕೊಂಡು ನೇಮಕಾತಿ ಮಾಡಿಕೊಂಡಿದ್ದೆವು ಆದರೆ ಈಗ ಕೆಲವು ಸಿಬ್ಬಂದಿಗಳು ಕೆಲಸ ಬಿಟ್ಟುಹೋಗಿದ್ದು ಹಾಲಿ 194 ಜನ ಸಿಬ್ಬಂದಿಗಳು ಇರುತ್ತಾರೆ. ಈಗ ನಮಗೆ ಸಿಬ್ಬಂದಿಗಳ ಅವಶ್ಯಕತೆ ಇದ್ದು, ನೇಮಕಾತಿಗಾಗಿ 6 ತಿಂಗಳ ಹಿಂದೆಯೇ ಅನುಮತಿಗೆ ಕಳುಹಿಸಿರುತ್ತೇವೆ. ಆದರೆ ಇಲ್ಲಿಯವರೆಗೂ ಆರ್ ಸಿ ಎಸ್ ನಿಂದ ಅನುಮತಿ ಬಂದಿರುವುದಿಲ್ಲ, ಆ ಪತ್ರವನ್ನು ನೀವು ಕೇಂದ್ರ ಕಚೇರಿಯಲ್ಲಿ ನೋಡಬಹುದು ಎಂದು ಹೇಳಿದರು. ಮತ್ತೆ ಸದಸ್ಯರಾದ ಶ್ರೀ ಡಿ ಜೆ ಶಶಿಧರ್‌ರವರು ಪುಟ ಸಂಖ್ಯೆ 94 ರಲ್ಲಿ ಸಿಬ್ಬಂದಿ ಬೋನಸ್ ಬಗ್ಗೆ ಮಾತನಾಡಿ ಈ ವರ್ಷ ಬ್ಯಾಂಕು ಲಾಭದಲ್ಲಿದ್ದು ನೀವು ಏಕೆ ಅವರಿಗೆ ಬೋನಸ್ಸು ಕೊಟ್ಟಿರುವುದಿಲ್ಲ, ಇಷ್ಟು ವರ್ಷದಿಂದ ಅವರು ಕಷ್ಟ ಪಟ್ಟು ಕೆಲಸ ಮಾಡಿರುತ್ತಾರೆ ಅವರಿಂದಲೇ ಲಾಭ ಮಾಡಿರುವುದು ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ತಮ್ಮ ಸಲಹೆ ತುಂಬಾ ಒಳ್ಳೆಯದು, ಆದರೆ ನಮ್ಮ ಉದ್ದೇಶ ಈ ಬಾರಿ ಸದಸ್ಯರಿಗೆ ಡಿವಿಡೆಂಡ್ ನೀಡಿ ನಂತರ ಅವರಿಗೆ ಬೋನಸ್ಸು ಕೊಡುತ್ತೇವೆ ಎಂದಾಗ ಸದಸ್ಯರು ಮುಂದೆ ಅವರಿಂದ ಒಳ್ಳೆಯ ರೀತಿಯಲ್ಲಿ ಕೆಲಸ ಆಗಬೇಕು ಎಂದರೆ ನೀವು ಬೋನಸ್ಸು ಕೊಡಬೇಕು ಎಂದಾಗ ನಿರ್ದೇಶಕರಾದ ಎಂ ಪಿ ಮಹೇಶ್ ಮತ್ತು (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ನಿಮ್ಮ ಸಲಹೆ ಸೂಕ್ತವಾಗಿದೆ ನಾವು ಈ ವರ್ಷವೂ ಲಾಭ ಮಾಡಿ ಸಿಬ್ಬಂದಿಯವರಿಗೆ ಬೋನಸ್ಸು ಕೊಡುತ್ತೇವೆ ಎಂದು ಹೇಳಿದರು.

ಸದಸ್ಯರಾದ ಶ್ರೀ ನಾಗೇಶ್ ಟಿ ಎಸ್ ರವರು ಮಾತನಾಡಿ ಈಗ ಚರ್ಚೆಯಾಗುತ್ತಿರುವ ಎಲ್ಲ ಸಾಲದ ವಿಚಾರಗಳು ಹಳೆಯದು, ಇಂತಹ ವಿಷಯಗಳನ್ನು ನಿಮ್ಮ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಅವಕಾಶವಿದ್ದರೆ ಪ್ರತಿ ತಿಂಗಳು ನೋಟೀಸ್ ಬೋರ್ಡ್ ನಲ್ಲಿ ಹಾಕಿ ಎಂದಾಗ ಅಧ್ಯಕ್ಷರು ಅದಕ್ಕೆ ವಿವರಣೆ ಕೇಳಿದಾಗ ಈಗ ಚರ್ಚೆಯಾದ ARCIL ಬಗ್ಗೆ, ಇಂತಹ ವಿಷಯಗಳು ಏನಾದರೂ ಇದ್ದರೆ ಈಗ ತಾನೇ ಒಬ್ಬ ಸದಸ್ಯರು ಹೇಳಿದಂತೆ ವರ್ಷಕ್ಕೆ ಒಂದು ಬಾರಿ ಮಾತ್ರ ಅವರು ಮಾತನಾಡುವುದಾಗಿ ಹೇಳಿದರು ಆದ್ದರಿಂದ ನೀವು ಪ್ರತಿ ಕ್ವಾರ್ಟರ್ ನಂತರ ನೋಟೀಸ್ ಬೋರ್ಡಿನಲ್ಲಿ ಹಾಕಿ ಎಂದರು ಮತ್ತು ಸಿಬ್ಬಂದಿಗಳನ್ನುದ್ದೇಶಿಸಿ ನಿರ್ದೇಶಕ ಮಂಡಳಿಯವರು ಅವರವರ ಕೆಲಸಗಳ ಮಧ್ಯೆ ಅವರು ಹೆಚ್ಚು ನಿಗಾವಹಿಸಲು ಸಾಧ್ಯವಿಲ್ಲ, ನೀವು ಹೇಗೆ ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸ್ಮಾರ್ಟ್ ಆಗಿ ಯೋಚಿಸಿ ಅವರಿಗೆ ಸಲಹೆ ನೀಡಬೇಕು ಎಂದು ಹೇಳಿದರು.

ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರಿಗೆ ಮಾರ್ಚ್ ಅಂತ್ಯಕ್ಕೆ 176 ಕೇಸ್ SARFEASI ಅಡಿ ಕೇಸ್ ಹಾಕಿದ್ದು, ಅದರಲ್ಲಿ ದಿನಾಂಕ 31-03-2023ಕ್ಕೆ 32 ಕೇಸ್ ಡಿಮಾಂಡ್ ನೋಟೀಸ್, ಸಿಂಬಾಲಿಕ್ ಪೊಸೆಷನ್–42, ಕೇಸ್ ಫೈಲಿಂಗ್–21, ಫಿಸಿಕಲ್ ಟೇಕನ್–11, ಆರ್ಡರ್ಸ್ ರಿಸೀವ್–46, ಕೇಸ್ ಇದ್ದು 152 ಕೇಸ್ SARFEASIಗೆ ಹೋದ ಮೇಲೆ ಈ ರೀತಿ ಮುಂದುವರೆದಿರುತ್ತದೆ ಎಂದು ವಿವರ ನೀಡಿದರು. ಶ್ರೀ ಕೆ ಜಿ ಮುನಿಗಂಗಪ್ಪರವರು ನೀವು ಮಾಡುತ್ತಿರುವ ಕೆಲಸ ಬಹಳ ಸಂತೋಷವಾಗಿದೆ ಆದರೆ, ಕೆಲವೊಂದು ಕೇಸ್‌ಗಳಲ್ಲಿ ನೀವು ಈ ಕೆಲಸವನ್ನು ಬಹಳ ವರ್ಷಗಳ ಹಿಂದೆಯೇ ಮಾಡಬೇಕಿತ್ತು, ಆಗಲಿ ಈಗಲಾದರೂ ಒಳ್ಳೆಯ ಕ್ರಮ ತೆಗೆದುಕೊಂಡು ಕೆಲಸ ಮಾಡುತ್ತಿದ್ದೀರ, ನಿಮಗಿಂತಲೂ ಹೆಚ್ಚಿಗೆ ಶ್ರಮವಹಿಸಿ ನಮ್ಮ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ, ನಾವು ಅವರಿಗೆ ಧನ್ಯವಾದ ಹೇಳಬೇಕು, ನೀವು ಸಾಲ ಕೊಟ್ಟು ನಿಮ್ಮ ನಿಮ್ಮ ವ್ಯವಹಾರಗಳಿಗೆ ಹೊರಟು ಹೋಗುತ್ತೀರ, ಆದರೆ ಪ್ರತಿದಿನ ಬೆಳಗ್ಗೆ ಅವರಿಗೆ ಪ್ರಷರ್ ಹಾಕುತ್ತೀರ. ನೀವೇ ಹೇಳಿದ ಹಾಗೆ ಅವರು ಹಗಲು ರಾತ್ರಿ ಕೆಲಸ ಮಾಡುತ್ತಿದ್ದು, ನಿಮ್ಮ ಟೆನ್ಷನ್ ಅನ್ನು ಅವರಿಗೆ ಪ್ರಷರ್ ಮಾಡಬೇಡಿ, ತಪ್ಪು ಮಾಡಿದವರಿಗೆ ನಿಮ್ಮ ನಿಯಮಗಳಂತೆ ಶಿಕ್ಷಿಸಿ ಆದರೆ ಬ್ಯಾಂಕಿಗಾಗಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ನಿಮ್ಮ ಕೈಯಲ್ಲಿ ಆಗುತ್ತದೆ ನೀವು ಮಾಡಿ ಎಂದು ಉತ್ತೇಜನ ನೀಡಿ, ಒಳ್ಳೆ ರೀತಿಯಾಗಿ ಅವರಿಗೆ ಹುರಿದುಂಬಿಸಿ ಅವರಿಂದ ಕೆಲಸ ಮಾಡಿಸಿ, ಇನ್ನೂ ಹೆಚ್ಚಿನ ಕೆಲಸ ಅವರಿಂದ ಮಾಡಿಸಿ ಎಂದು ವಿನಂತಿಸಿದರು.

ಸದಸ್ಯರಾದ ಶ್ರೀ ವಿಜಯ್ ಕುಮಾರ್‌ರವರು ಮಾತನಾಡಿ 2 ತಿಂಗಳ ಮುಂಚೆ ಬೆಂಗಳೂರಿನಲ್ಲಿ customer meet ಮಾಡಿದಾಗ ನಾನು ಹೇಳಿದ್ದೆ, ATM ನಲ್ಲಿ ಸೆಕ್ಯೂರಿಟಿ ಇರುವುದಿಲ್ಲ, ಶಾಖೆಯಲ್ಲಿ 3-4 ಜನ ಸಿಬ್ಬಂದಿಗಳಿರುತ್ತಾರೆ. ಅದರಲ್ಲಿ ಒಬ್ಬರು ವಸೂಲಾತಿ ಅಥವಾ ಮಾರ್ಕೆಟಿಂಗ್ ಎಂದು ಹೋದರೆ ಶಾಖೆಯಲ್ಲಿ ಇಬ್ಬರು ಸಿಬ್ಬಂದಿಗಳು ಉಳಿದಿರುತ್ತಾರೆ. ಆಗ ಯಾರಾದರೂ ಬಂದು ಬ್ಯಾಂಕಿನಲ್ಲಿ ದರೋಡೆ ಮಾಡಿದರೆ ಏನು ಮಾಡುತ್ತೀರಿ, ATM ಬೇರೆ ಇರುತ್ತದೆ. ನೀವು ಏಕೆ Security ತೆಗೆದುಕೊಂಡಿಲ್ಲ, ಆರ್ ಆರ್ ನಗರ ಶಾಖೆಯಲ್ಲಿ ರಸ್ತೆ ದುರಸ್ತಿ ಮಾಡುತ್ತಿದ್ದು, ಶಾಖೆಯಲ್ಲಿ ಇಬ್ಬರು ಹೆಣ್ಣು ಮಕ್ಕಳು ಕೆಲಸ ಮಾಡುತ್ತಿರುತ್ತಾರೆ, ಯಾರಾದರೂ ನುಗ್ಗಿದರೆ ಏನು ಮಾಡುತ್ತೀರ ಎಂದಿದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಈಗ 10 ನಿಮಿಷ ಮುಂಚೆ ಅದೇ ಚರ್ಚೆಯಾಗಿದೆ, ನಮಗೆ ಈಗ ಸಿಬ್ಬಂದಿ ಅವಶ್ಯಕತೆ ಇದ್ದು, ಆರ್.ಸಿ.ಎಸ್ ಗೆ 6 ತಿಂಗಳ ಹಿಂದೆಯೇ ಅನುಮತಿಗೆ ಕಳುಹಿಸಿರುತ್ತೇವೆ. ಅಲ್ಲಿ ಖುದ್ದಾಗಿ ಹೋದರೂ ಸಹ ಕೆಲಸ ಆಗುತ್ತಿಲ್ಲ. ಮತ್ತೊಂದು ವಿಷಯ ATM ಗಳು ನಮ್ಮ ಕಾಲದ್ದು, ಈಗ ಹೊಸ ಹೊಸ ತಂತ್ರಜ್ಞಾನ ಇರುವ ಹೊಸ ತರಹದ ATM ಗಳು ಬಂದಿರುತ್ತದೆ. ಈಗ ATM ಕಾರ್ಡ್ ಇಲ್ಲದೇ ಮೊಬೈಲ್‌ನಿಂದಲೇ ದುಡ್ಡು ಹಿಂಪಡೆಯುವ ಮೆಷಿನ್‌ಗಳು ಬಂದಿರುತ್ತದೆ. ಆದರೆ ಸದಸ್ಯರು ನಾವು ಹಳೇ ಕಾಲದವರು ಎಂದಾಗ ಅಧ್ಯಕ್ಷರು ನಾವು

ಮುಂದುವರೆಯುವ ಹೊಸ ತಂತ್ರಜ್ಞಾನದೊಂದಿಗೆ ಮುಂದುವರೆಯಬೇಕು, ಇಲ್ಲವಾದರೆ ನಮ್ಮನ್ನು ಜನ ಹಿಂದೆ ತಳ್ಳಿಬಿಡುತ್ತಾರೆ. ಈಗ ಹೊಸದಾಗಿ UPI ಸೇವೆ ಸಹಾ ಪ್ರಾರಂಭಿಸಿದ್ದು, ಬಹಳ ವ್ಯವಹಾರಗಳು ನಡೆಯುತ್ತಿವೆ. ಬ್ಯಾಂಕಿಗೆ ಲಾಭವೂ ಆಗುತ್ತಿದೆ. ಈಗ ನಾವು ಹಾಲಿ ಇರುವ ATM ಅನ್ನು ಏಕೆ ನಿಲ್ಲಿಸುತ್ತಿದ್ದೇವೆ ಎಂದರೆ ಇದರಿಂದ ತಿಂಗಳಿಗೆ 10,000 ಬಾಡಿಗೆ, 24 ಗಂಟೆಗಳ ಸೆಕ್ಯುರಿಟಿ, 24 ಗಂಟೆ AC ಇದ್ದು, ದಿನಕ್ಕೆ 3-4 ವ್ಯವಹಾರ ಆದರೆ ಇದರಿಂದ ಬ್ಯಾಂಕಿಗೆ ಬರುವ ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತಿದ್ದು, ಅದಕ್ಕೆ ATM ಸೇವೆಯನ್ನು ನಿಲ್ಲಿಸಿದ್ದೇವೆ ಎಂದು ಹೇಳಿದರು. ನಂತರ ಸದಸ್ಯರು ಬೆಂಗಳೂರಿನಲ್ಲಿರುವ ಸದಸ್ಯರಿಗೆ ಮೆಡಿಕಲ್ ಟ್ರಸ್ಟ್ ಸೌಲಭ್ಯ ನೀಡುವಂತೆ ಕೋರಿದ್ದು, ಈ ವಿಷಯವಾಗಿ ನಿಮ್ಮ ಪತ್ರ ಇದ್ದು ಅದನ್ನು ಚರ್ಚೆ ಮಾಡೋಣ ಎಂದು ಅಧ್ಯಕ್ಷರು ತಿಳಿಸಿದರು ಮತ್ತು ಬೈಲಾ ತಿದ್ದುಪಡಿ ಮಾಡಿ ಸೀನಿಯರ್ ಸಿಟಿಜನ್‌ಗೆ ಡಿವಿಡೆಂಡ್ ಕೊಡಿ ಎಂದು ಕೇಳಿದರು.

ಸದಸ್ಯರೊಬ್ಬರು ಮಾತನಾಡಿ ಬ್ಯಾಂಕಿನ ಸಿಬ್ಬಂದಿಗಳು ವ್ಯವಸ್ಥಿತವಾಗಿ ಅವರ ಕೆಲಸ ಮಾಡುತ್ತಿದ್ದು, ಅವರಿಗೆ ಬೋನಸ್ಸು ಕೊಡುವುದಕ್ಕೆ ವ್ಯವಸ್ಥೆ ಮಾಡಿ, ನೀವೇ ಹೇಳಿದ ಹಾಗೆ ಬೆಳಗ್ಗೆ 4.00 ಗಂಟೆಗೇ ಎದ್ದು ಹೋಗುತ್ತಾರೆ. ಕೆಲವೊಮ್ಮೆ ತಡರಾತ್ರಿಗೆ ಮನೆಗೆ ಬರುತ್ತಾರೆ ಎಂದು, ಆದ್ದರಿಂದ ಬೋನಸ್ಸು ಪ್ರಾವಿಷನ್ ಮಾಡಿ ಕೊಡಿ ಮತ್ತು ಸಿಬ್ಬಂದಿ ವರ್ಗದವರಿಗೆ ಒಂದು ಟ್ರಸ್ಟ್ ಮಾಡಿ, ನೂರಾರು ಕೋಟಿ ಲಾಭ ಮಾಡುವ ಸಂಸ್ಥೆ ಇದು, ಇದರ ಏಳಿಗೆಗಾಗಿ ಅವರು ದುಡಿಯುತ್ತಿದ್ದಾರೆ. ಅವರಿಗೂ ಸಹ ಮುಂದಿನ ದಿನಗಳಲ್ಲಿ ಅನುಕೂಲವಾಗುತ್ತದೆ ಆದ್ದರಿಂದ ಬೋನಸ್ಸು ವ್ಯವಸ್ಥೆ ಮಾಡಿ ಕೊಡಿ ಮತ್ತು ಡಿವಿಡೆಂಡಿಗೂ ಆದ್ಯತೆ ನೀಡಿ, ಈಗ ಎನ್.ಪಿ.ಎ 13% ಇದೆ ಎಂದು ಹೇಳಿದಿರಿ ಮುಂದಿನ ದಿನಗಳಲ್ಲಿ ಅದನ್ನೂ ಸಹ ಕಡಿಮೆ ಮಾಡಿ, ಈಗ ಅಧ್ಯಕ್ಷರು ಹೇಳಿದಂತೆ ಅದು 10% ಒಳಗಡೆ ಬಂದರೆ ಮಾತ್ರ ಡಿವಿಡೆಂಡ್ ಕೊಡಬಹುದಾಗಿ ಹೇಳಿದ್ದು, ಆದಷ್ಟು ಪ್ರಯತ್ನ ಮಾಡಿ ವಸೂಲಾತಿ ಮಾಡಿ ಡಿವಿಡೆಂಡ್ ನೀಡಿ ಎಂದು ಮಾನ್ಯ ಕಾರ್ಯಕಾರಿ ಮಂಡಳಿ ಸದಸ್ಯರನ್ನೆಲ್ಲ ನಾನು ಕೇಳಿಕೊಳ್ಳುತ್ತಿದ್ದೇನೆ ಎಂದರು.

ಇದರೊಂದಿಗೆ ಲೆಕ್ಕಪರಿಶೋಧನಾ ವರದಿಯ ದೀರ್ಘವಾದ ಚರ್ಚೆ ಮುಗಿಸಿ ಸಭೆಯು 2022-23 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಸಭೆಯ ಸದಸ್ಯರೆಲ್ಲರೂ ಬಹುಮತದಿಂದ ಒಪ್ಪಿಗೆ ನೀಡಿದರು.

**8. <u>2022-23 ನೇ ಸಾಲಿನ ಆಯ–ವ್ಯಯದಲ್ಲಿ ಮಂಜೂರಾಗಿರುವ ಮೊಬಲಗಿಗಿಂತಲೂ ಹೆಚ್ಚುವರಿಯಾಗಿ ಖರ್ಚಾಗಿರುವ ವಿವರಗಳನ್ನು ಸಭೆಗೆ ಮಂಡಿಸುವ ವಿಚಾರ:</u>**

ಬ್ಯಾಂಕಿನ ನಿರ್ದೇಶಕರಾದ ಶ್ರೀ ವಿ ಕೆ ರಾಜಶೇಖರಯ್ಯರವರು ಸಭೆಯ ಸದಸ್ಯರಿಗೆ ನಮಸ್ಕರಿಸಿ ಬ್ಯಾಂಕಿನ 2022-23 ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಖರ್ಚಿನ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

1. 2022-23 ನೇ ಸಾಲಿನ ಶಾಖೆಗಳ ಕಟ್ಟಡದ ಬಾಡಿಗೆಗೆ ರೂ. 3,70,00,000.00ಗಳು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಜೂರಾಗಿದ್ದು, ಅದರಲ್ಲಿ ರೂ. 3,39,613.00 ಗಳು ಹೆಚ್ಚಿಗೆ ಖರ್ಚಾಗಿರುತ್ತದೆ. ಕರೋನ ಸಂಬಂಧ ಕೆಲವೊಂದು ಶಾಖೆಗಳ ಕಟ್ಟಡದ ಮಾಲೀಕರು ನಮ್ಮ ಮನವಿಯ ಮೇರೆಗೆ ಬಾಡಿಗೆ ಕರಾರು ನವೀಕರಣವನ್ನು ಮುಂದೂಡಿದ್ದು, ಆ ಕರಾರುಗಳನ್ನು ವರದಿ ಸಾಲಿನಲ್ಲಿ ನವೀಕರಿಸಿದ್ದರಿಂದ ಹೆಚ್ಚುವರಿ ಖರ್ಚಾಗಿರುತ್ತದೆ.

2. 2022-23ನೇ ಸಾಲಿನಲ್ಲಿ ಸಭೆ, ಸೆಮಿನಾರ್, ತರಬೇತಿ ಮತ್ತು ಇತರೆ ವೆಚ್ಚಕ್ಕೆ ರೂ. 1,00,00,000.00 ಗಳು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಜೂರಾಗಿದ್ದು, ಅದರಲ್ಲಿ ರೂ. 32,83,25,953.70 ಗಳು ಹೆಚ್ಚಿಗೆ ಖರ್ಚಾಗಿರುತ್ತದೆ. ಆರ್ ಬಿ ಐ ಸುತ್ತೋಲೆ ಸಂಖ್ಯೆ RBI/DOR/2021-22/86 DOR .STR. REC.51/21.04.048/2021-22 ದಿನಾಂಕ 24-09-2021ರಲ್ಲಿ ಅವಕಾಶವಿರುವಂತೆ ವರದಿ ವರ್ಷದಲ್ಲಿ ಬ್ಯಾಂಕ್ ರೂ. 114.94 ಕೋಟಿ ಮೊತ್ತದ ಸಾಲಗಳನ್ನು ಆರ್ ಬಿ ಐ ಅನುಮೋದಿಸಿದ ಆಸ್ತಿ ಪುನರ್ರಚನಾ ಕಂಪನಿಯಾದ ಎ.ಆರ್.ಸಿ.ಐ.ಎಲ್ ಗೆ ವರ್ಗಾಯಿಸಿದ್ದು, ಮಾರಾಟದ ಒಪ್ಪಂದದ ಪ್ರಕಾರ, ಮಾರಾಟದ ಮೊತ್ತವು ಒಟ್ಟು ನಿಯೋಜಿಸಿದ (Assigned) ಸಾಲದ ಮೊತ್ತವಾದ ರೂ. 114.94 ಕೋಟಿಗಳ ಮೇಲೆ ಶೇ. 80% ರಷ್ಟು ಅಂದರೆ ರೂ. 91.95 ಕೋಟಿಗಳಾಗಿರುತ್ತದೆ, ಇದರಲ್ಲಿ ಬ್ಯಾಂಕ್ ರೂ. 18.39 ಕೋಟಿಗಳನ್ನು ಸ್ವೀಕರಿಸಿದ್ದು ಉಳಿದ ಮೊತ್ತ ರೂ. 73.56 ಕೋಟಿಗಳಿಗೆ ಭದ್ರತಾ ರಶೀದಿ (Security receipt) ಪಡೆದಿರುತ್ತೇವೆ ಮತ್ತು ಇದನ್ನು ತನ್ನ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ Non SLR ಹೂಡಿಕೆ ಅಡಿಯಲ್ಲಿ ತೋರಿಸಿ ಸಾಲದ ಖಾತೆಗಳನ್ನು ಚುಕ್ತ ಮಾಡಿಕೊಂಡಿರುತ್ತೇವೆ.

   ಮೇಲ್ಕಂಡಂತೆ ನಿಯೋಜಿಸಿದ ಮೂಲ ಮೊತ್ತ ರೂ. 114.94 ಕೋಟಿಗಳಿದ್ದು ಮತ್ತು ಸ್ವೀಕರಿಸಿದ ಮೊತ್ತ ರೂ. 91.95 ಕೋಟಿಗಳಾಗಿದ್ದು, ವ್ಯತ್ಯಾಸದ ಮೌಲ್ಯ ಅಂದರೆ, ರೂ. 23.00 ಕೋಟಿಗಳಷ್ಟು ಬ್ಯಾಂಕಿಗೆ ನಷ್ಟವಾಗಿರುತ್ತದೆ. ಸಾಲದ ಮೇಲಿನ ಆಕರಣೆ ಬಡ್ಡಿ ರೂ. 9.60 ಕೋಟಿಗಳು ಬಂಡವಾಳೀಕರಿಸಿದ್ದರಿಂದ ಸದರಿ ಮೊತ್ತವನ್ನು ಸಾಲದ ಮೇಲಿನ ಬಡ್ಡಿಗೆ ಜಮಾ ಪಡೆದು ನಂತರ ಒಟ್ಟಾರೆ ರೂ. 32.60 ಕೋಟಿಗಳ ನಷ್ಟವನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಖರ್ಚೆಂದು ತೋರಿಸಿಕೊಂಡಿದ್ದರಿಂದ ಹೆಚ್ಚಿಗೆ ಖರ್ಚಾಗಿರುತ್ತದೆ. ವರದಿ ಸಾಲಿನಲ್ಲಿ ಉಂಟಾಗಿರುವ ನಷ್ಟವು ತಾತ್ಕಾಲಿಕವಾಗಿದ್ದು, ವರ್ಗಾವಣೆಗೊಂಡಿರುವ ಆಸ್ತಿಗಳು ಮಾರಾಟವಾದಂತೆ ಪ್ರಸಕ್ತ ಸಾಲಿನಲ್ಲಿ ಬಡ್ಡಿಯೊಂದಿಗೆ ವಸೂಲಾಗುವುದು.

3. 2022-23 ನೇ ಸಾಲಿನಲ್ಲಿ ಜಾಹೀರಾತು ವೆಚ್ಚಕ್ಕೆ ರೂ. 15,00,000.00 ಗಳು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಜೂರಾಗಿದ್ದು, ಅದರಲ್ಲಿ ರೂ. 1,36,930.00 ಗಳು ಹೆಚ್ಚಿಗೆ ಖರ್ಚಾಗಿರುತ್ತದೆ. ಪತ್ರಿಕಾ ಮಾಧ್ಯಮಗಳಲ್ಲಿ ಸಹಕಾರ ಬ್ಯಾಂಕುಗಳ ಬಗ್ಗೆ ಪ್ರತೀಕೂಲವಾದ ವರದಿ ಪ್ರಕಟವಾದ ಪರಿಣಾಮ ಬ್ಯಾಂಕಿನ ವ್ಯವಹಾರವು ಕುಂಠಿತಗೊಂಡಿದ್ದರಿಂದ ಜಾಹೀರಾತಿಗಾಗಿ ಹೆಚ್ಚಿನ ವೆಚ್ಚವನ್ನು ಭರಿಸಲಾಗಿರುತ್ತದೆ.

ಸದಸ್ಯರಾದ ಶ್ರೀ ಡಿ ಜೆ ಶಶಿಧರ್‌ರವರು ಮಾತನಾಡಿ ಹೆಚ್ಚುವರಿ ವೆಚ್ಚದ ಬಗ್ಗೆ ರೂ. 23.00 ಕೋಟಿ ನಷ್ಟ ಎಂದು ತೋರಿಸಿದ್ದು ಮತ್ತೆ ರೂ. 9.60 ಕೋಟಿ ಲಾಭ ಎಂದು ತೋರಿಸಿದ್ದು ಮತ್ತೆ 32.60 ಕೊಟಿಯನ್ನು ಲಾಭ ನಷ್ಟದ ಖಾತೆಗೆ ತೋರಿಸಿದ್ದೀರ. ರೂ. 23.00 ಕೋಟಿಗಳನ್ನೇ ಲಾಭ ನಷ್ಟದ ಖಾತೆಗೆ ಹಾಕಬೇಕಿತ್ತು ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಲಾಭ ನಷ್ಟ ಎರಡನ್ನೂ ತೋರಿಸಬೇಕಾಗಿರುವುದರಿಂದ ವಿವರವಾಗಿ ಹಾಕಿರುತ್ತೇವೆ ಎಂದರು. ಮತ್ತೆ ಪುಟ ಸಂಖ್ಯೆ 13 ರಲ್ಲಿ Schedule 16 ರಲ್ಲಿ ಇತರೆ ವೆಚ್ಚಗಳಲ್ಲಿ ರೂ. 34,60,59,866.70 ಇದ್ದು ಸಭೆಯ ಒಪ್ಪಿಗೆಗಾಗಿ ರೂ. 33,83,25,953.70 ಇದ್ದು ಈ ವ್ಯತ್ಯಾಸದ ಬಗ್ಗೆ ಕೇಳಿದರು. ಅಷ್ಟರಲ್ಲಿಯೇ ಮತ್ತೆ ಶ್ರೀ ಜಿ ಎಸ್ ಬಸವರಾಜುರವರು ಮಾತನಾಡಿ ಪುಟ ಸಂಖ್ಯೆ 29 ರಲ್ಲಿ ARCIL ನ ಹೆಚ್ಚುವರಿ ವೆಚ್ಚದ ಬಗ್ಗೆ ಕೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಮಾತನಾಡಿ ನಾವು ಬೆಳಗ್ಗೆಯಿಂದಲೂ ಇದರ ಬಗ್ಗೆಯೇ ಮಾತನಾಡಿದ್ದು, ಮತ್ತೆ ಅದನ್ನೇ ಕೇಳುತ್ತಿದ್ದೀರಿ ಎಂದಾಗ ಶ್ರೀ ಜಿ ಎಸ್ ಬಸವರಾಜುರವರು ನೀವು ಪುಟ ಸಂಖ್ಯೆ 29 ರಲ್ಲಿ ಲಾಸ್ ಎಂದು ತೋರಿಸಿದ್ದು, ಅದನ್ನು Income and Expenditure account ನಲ್ಲಿ ಏಕೆ ತೋರಿಸಿದ್ದೀರಿ ಖರ್ಚಿಗೂ ಲಾಸ್‌ಗೂ ವ್ಯತ್ಯಾಸ ಇಲ್ಲವೇ ಎಂದು ಕೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ನಾವು ನಿಯಮಗಳಂತೆ ಇರುವ 13 ಹೆಡ್‌ಗಳಲ್ಲಿಯೇ ಖರ್ಚು ವೆಚ್ಚಗಳನ್ನು ತೋರಿಸಿದ್ದು, ಇತರೆ ಎಂದು ಇರುವುದರಿಂದ ಅದರಲ್ಲಿ ತೋರಿಸಿದ್ದೇವೆ ಎಂದು ಹೇಳಿದರು. ಪುಟ ಸಂಖ್ಯೆ 20 ರಲ್ಲಿ ನೀವೇ ಮುದ್ರಣ ಮಾಡಿದ್ದೀರ Loss on Sale of Loan Assets ಎಂದು ಮತ್ತೆ ಅದನ್ನು ಯಾಕೆ ಖರ್ಚೆಂದು ತೋರಿಸಿದ್ದೀರ ಎಂದಿದ್ದಕ್ಕೆ ನಿರ್ದೇಶಕರಾದ ಶ್ರೀಮತಿ ರಶ್ಮಿ ಕಿರಣ್‌ರವರು ಮಾತನಾಡಿ ಅದು ರಿಕವರಿ ಆಗಲಿದ್ದು, ಅದಕ್ಕೆ ಅದನ್ನು ಖರ್ಚೆಂದು ತೋರಿಸಲಾಗಿದೆ ಎಂದು ಹೇಳಿದರು, ನೀವು ಈ ವರ್ಷ ಖರ್ಚೆಂದು ಸಭೆಯಲ್ಲಿ ಒಪ್ಪಿಗೆ ಪಡೆದರೆ ಖರ್ಚಾಗಿರುವ ರೂ.36.60 ಕೋಟಿ ದುಡ್ಡು ಬ್ಯಾಂಕಿಗೆ ಬರಲು ಹೇಗೆ ಸಾಧ್ಯ, ಎಂದು ಕೇಳಿದರು. ಅದಕ್ಕೆ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮಾತನಾಡಿ ಅದನ್ನು Profit & Loss account ನಲ್ಲಿಯೂ ತೋರಿಸಲಾಗಿದೆ ಸರಿಯಾಗಿ ನೋಡಿ ಎಂದು ಹೇಳಿದರು. ಆದರೂ ಶ್ರೀ ಜಿ ಎಸ್ ಬಸವರಾಜುರವರು ಅಲ್ಲಿ ತೋರಿಸಿರುವುದಿಲ್ಲ. ಈ ದುಡ್ಡು ಈ ದಿನ ಸಭೆಯಲ್ಲಿ ಒಪ್ಪಿಗೆ ಪಡೆದರೆ ಅದು ಬ್ಯಾಂಕಿಗೆ ನಷ್ಟವಾದಂತೆ, ಆ ದುಡ್ಡು ಬ್ಯಾಂಕಿಗೆ ಯಾವತ್ತೂ ಬರುವುದಿಲ್ಲ ಎಂದರು, ಇದು ಖರ್ಚು ಎಂದು ತೋರಿಸಿದರೆ ರೂ.33.83 ಕೋಟಿಯ voucher ಕೊಡಿ, ಏನು ಖರ್ಚಾಗಿದೆ ಎಂದು ತೋರಿಸಿ ಸಭೆಯ ಒಪ್ಪಿಗೆ ಪಡೆಯಿರಿ, ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಅದು ನಿಮ್ಮ ತಪ್ಪು ತಿಳುವಳಿಕೆ ಆ ದುಡ್ಡು ಖಂಡಿತ ಬ್ಯಾಂಕಿಗೆ ಬರುತ್ತದೆ, ಇದರ ಬಗ್ಗೆ 29 ನೇ ಪುಟದಲ್ಲಿ ವಿವರಗಳನ್ನು ನೀಡಿದ್ದು, ಬೆಳಗ್ಗೆಯಿಂದಲೂ ಅದೇ ವಿಷಯದ ಬಗ್ಗೆ ಚರ್ಚೆಯಾಗಿದೆ ಎಂದು ತಿಳಿಸಿದರು.

ಇತರೆ ಸದಸ್ಯರು ಬೆಳಗ್ಗೆಯಿಂದ ಇದೇ ವಿಷಯದ ಬಗ್ಗೆ ವಿವರಣೆ ನೀಡಿದ್ದು, ನಾವೆಲ್ಲರೂ ಒಪ್ಪಿರುತ್ತೇವೆ, ಸಭೆಯನ್ನು ಮುಂದುವರೆಸಿ ಎಂದು ಹೇಳಿದರು. ಈ ಎಲ್ಲಾ ಚರ್ಚೆಯ ನಂತರ 2022-23 ನೇ ಸಾಲಿನ ಖರ್ಚು ವೆಚ್ಚವನ್ನು ಸಭೆಯಲ್ಲಿ ಅನುಮೋದಿಸಿದರು.

**9. 2023-24 ನೇ ಸಾಲಿನ ಮುಂಗಡ ಪತ್ರವನ್ನು /ಆಯ ವ್ಯಯದ ಅಂದಾಜು ಪಟ್ಟಿಯನ್ನು ಮಂಜೂರಾತಿಗಾಗಿ ಸಭೆಗೆ ಮಂಡಿಸುವ ವಿಚಾರ:**

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ ಆರ್ ಆನಂದರಾಮುರವರು ಎಲ್ಲಾ ಸದಸ್ಯರಿಗೂ ನಮಸ್ಕರಿಸುತ್ತಾ ಬ್ಯಾಂಕಿನ 2022-23 ನೇ ಸಾಲಿನ ಖರ್ಚು ವೆಚ್ಚಗಳನ್ನು ಅನುಮೋದಿಸಿ 2023-24 ನೇ ಸಾಲಿನ ಬ್ಯಾಂಕಿನ ಮುಂಗಡ ಪತ್ರವನ್ನು ಅಂಗೀಕರಿಸಲು ಸಭೆಯ ಒಪ್ಪಿಗೆಗಾಗಿ ಮಂಡಿಸಿದರು.

**ಅ) ಬ್ಯಾಂಕಿನ 2022-23 ನೇ ಸಾಲಿನ ಖರ್ಚು ವೆಚ್ಚಗಳನ್ನು ಅನುಮೋದಿಸಿ 2023-24 ನೇ ಸಾಲಿನ ಬ್ಯಾಂಕಿನ ಮುಂಗಡ ಪತ್ರ:**
**(ರೂ. ಗಳಲ್ಲಿ)**

| ಕ್ರ ಸಂ | ವಿವರಗಳು | **2022-23**ನೇ ಸಾಲಿನ ಮುಂಗಡ ಪತ್ರ ಹಾಗೂ ಖರ್ಚಿನ ವಿವರಗಳು | | **2023-24**ನೇ ಸಾಲಿಗೆ ಮಂಜೂರಾತಿಗಾಗಿ |
|---|---|---|---|---|
| | | ಮಂಜೂರಾಗಿದ್ದು | ಖರ್ಚಾಗಿದ್ದು | |

| | | | | |
|---|---|---|---|---|
| 1 | ಸಿಬ್ಬಂದಿ ವೆಚ್ಚ | 19,00,00,000.00 | 17,69,33,450.50 | 22,00,00,000.00 |
| 2 | ಅ) ಅಂಚೆ<br>ಆ) ದೂರವಾಣಿ<br>ಇ) ವಿಮೆ | 3,01,00,000.00 | 3,66,539.33<br>6,84,593.33<br>2,68,76,801.06<br>**2,79,27,933.72** | 2,80,00,000.00 |
| 3 | ಶಾಖೆಗಳ ಕಟ್ಟಡದ ಬಾಡಿಗೆ | 3,70,00,000.00 | 3,73,39,613.00 | 4,00,00,000.00 |
| 4 | ಮುದ್ರಣ ಮತ್ತು ಸಲಕರಣೆ | 12,00,000.00 | 10,29,760.48 | 15,00,000.00 |
| 5 | ಅ) ಸಾದಿಲ್ವಾರು<br>ಆ) ಸೇವೆ ಮತ್ತು ನಿರ್ವಹಣೆ | 16,00,000,00<br>3,00,00,000.00 | 14,51,341.00<br>2,43,96,002.03 | 20,00,000.00<br>3,50,00,000.00 |
| 6 | ಸಭೆ, ಸೆಮಿನಾರ್, ತರಬೇತಿ ಮತ್ತು ಇತರೆ | 1,00,00,000.00 | 33,83,25,953.70 | 1,50,00,000.00 |
| 7 | ವಿದ್ಯುಚ್ಛಕ್ತಿ | 30,00,000.00 | 27,23,492.00 | 30,00,000.00 |
| 8 | ಲೆಕ್ಕ ಪರಿಶೋಧನಾ ವೆಚ್ಚ | 35,00,000.00 | 25,12,558.00 | 35,00,000.00 |
| 9 | ವಾರ್ಷಿಕ ಸಾಮಾನ್ಯ ಸಭೆಯ ವೆಚ್ಚ | 10,00,000.00 | 5,15,764.00 | 30,00,000.00 |
| 10 | ಜಾಹೀರಾತು | 15,00,000.00 | 16,36,930.00 | 25,00,000.00 |
| 11 | ಧಾರ್ಮಿಕ ಹಾಗೂ ಸಾಮಾಜಿಕ ಕಲ್ಯಾಣ ವೆಚ್ಚಗಳು | - | - | - |
| 12 | ಕಾನೂನು ವೆಚ್ಚ | 5,00,000.00 | 0.00 | 5,00,000.00 |
| 13 | ಪ್ರಸ್ತುತವಿರುವ ಕೆಲವು ಶಾಖೆಗಳಿಗೆ ಗಣಕಯಂತ್ರ ಮತ್ತು ಇತರೆ ಪರಿಕರಗಳು, ತಂತ್ರಾಂಶ, ಯಂತ್ರಾಂಶ ಮತ್ತು ಎ.ಟಿ.ಎಂಗಳ ಉನ್ನತೀಕರಣ ಮತ್ತು ಸೈಬರ್ ಸೆಕ್ಯುರಿಟಿ ಆಳವಡಿಕೆಗೆ ಅಂದಾಜು ವೆಚ್ಚ | 1,20,00,000.00 | - | 1,00,00,000.00 |
| | **ಒಟ್ಟು** | **30,94,00,000.00** | **61,47,92,798.43** | **35,40,00,000.00** |

## ಆ) 2023-24 ನೇ ಸಾಲಿನ ಮುಂಗಡ ಪತ್ರವನ್ನು ಅಂಗೀಕರಿಸುವ ಬಗ್ಗೆ :- (ರೂ. ಗಳಲ್ಲಿ)

| ಕ್ರ ಸಂ | ವಿವರಗಳು | 2022-23 ನೇ ಸಾಲಿಗೆ ಸೂಚಿಸಿದ್ದು | 2022-2023ನೇ ಸಾಲಿಗೆ ಜಮಾ ಬಂದಿರುವುದು / ಖರ್ಚಾಗಿರುವುದು | 2023-24ನೇ ಸಾಲಿಗೆ ಸೂಚಿಸಿರುವುದು |
|---|---|---|---|---|
| **I** | **ಅಂದಾಜು ಆದಾಯ :** | | | |
| 1 | ಸಾಲಗಳು ಮತ್ತು ಮುಂಗಡಗಳ ಮೇಲೆ ಬಡ್ಡಿ | 182,00,00,000.00 | 148,36,62,904.67 | 164,00,00,000.00 |
| 2 | ಹೂಡಿಕೆ ಮತ್ತು ಠೇವಣಿಗಳ ಬಡ್ಡಿ | 55,00,00,000.00 | 57,96,11,433.54 | 46,00,00,000.00 |
| 3 | ದಲ್ಲಾಳಿ ಮತ್ತು ಇತರೆ | 6,00,00,000.00 | 6,48,87,683.05 | 8,00,00,000.00 |
| | **ಒಟ್ಟು** | **243,00,00,000.00** | **212,81,62,021.26** | **218,00,00,000.00** |
| **II** | **ಅಂದಾಜು ಖರ್ಚು :** | | | |
| 1 | ಅ) ನಲ್ಲಿ ವಿವರಿಸಿರುವಂತೆ | 30,94,00,000.00 | 61,47,92,798.43 | 35,40,00,000.00 |
| 2 | ಠೇವಣಿಗಳ ಮೇಲಿನ ಬಡ್ಡಿ | 128,00,00,000.00 | 116,90,81,283.42 | 100,00,00,000.00 |
| 3 | ಸದಸ್ಯರ ಕ್ಷೇಮಾಭಿವೃದ್ಧಿ ವೆಚ್ಚ | 70,00,000.00 | 58,97,808.00 | 85,00,000.00 |
| | **ಒಟ್ಟು** | **159,64,00,000.00** | **178,97,71,889.85** | **136,25,00,000.00** |
| **III** | **ಉಳಿತಾಯ (I-II)** | **83,36,00,000.00** | **33,83,90,131.41** | **81,75,00,000.00** |
| **IV** | **ಸವಕಳಿ** | 1,30,00,000.00 | 94,55,752.00 | 90,00,000.00 |
| **V** | **ಒಟ್ಟು ಲಾಭ (III-IV)** | **82,06,00,000.00** | **32,89,34,379.41** | **80,85,00,000.00** |
| **VI** | **ತೆರಿಗೆ ಮತ್ತು ಅವಕಾಶಗಳು** | 25,00,00,000.00 | 23,35,16,800.00 | 25,00,00,000.00 |
| **VII** | **ನಿವ್ವಳ ಲಾಭ ( V- VI)** | **57,06,00,000.00** | **9,54,17,579.41** | **55,85,00,000.00** |
| **VIII** | **ಕಳೆದ ಸಾಲಿನ ನಷ್ಟ** | -54,92,60,080.73 | **-54,92,60,080.73** | -45,38,42,501.32 |
| **IX** | **ನಿವ್ವಳ ಲಾಭ (VII- VIII)** | **2,13,39,919.27** | **-45,38,42,501.32** | **10,46,57,498.68** |

ಸದಸ್ಯರಾದ ಶ್ರೀ ಮಹದೇವಯ್ಯ ರವರು ಮಾತನಾಡಿ ನಾನು ಜಂಟಿ ಸಾಲದ ಬಗ್ಗೆ ಕೇಳಬೇಕಾಗಿದ್ದು, ನೀವು ಕೇಳು ಎಂದರೆ ಕೇಳುತ್ತೇನೆ ಎಂದಾಗ ಸಭೆಯಲ್ಲಿ ಅವರನ್ನು ಮಾತನಾಡಲು ಹೇಳಿದರು, ಶ್ರೀ ಮಹದೇವಯ್ಯ ರವರು ಮಾತನಾಡಿ ಸದಸ್ಯರಿಗೆ ಜಂಟಿ ಸಾಲ ಹೆಚ್ಚಿಗೆ ಕೊಡಿ ಎಂದು ಕೇಳುತ್ತಿದ್ದೇನೆ. ಬ್ಯಾಂಕಿಗೆ ನಷ್ಟವಾಗಲಿ ಎಂದು ಹೇಳುತ್ತಿಲ್ಲ. ನಿಮ್ಮ ಹಣಕ್ಕೆ ಭದ್ರತೆ ಏನು ಬೇಕಾದರೂ ತೆಗೆದುಕೊಳ್ಳಿ ರೂ. 25000/- ಸಾಲ ಕೊಡುವಾಗ ರೂ. 5000/- ಷೇರು ತೆಗೆದುಕೊಳ್ಳಿ, ರೂ. 50000/- ಸಾಲ ಕೊಡುವಾಗ ರೂ. 10000/-

ಷೇರು ತೆಗೆದುಕೊಳ್ಳಿ, ಇಬ್ಬರ ಜಾಮೀನು ಹಾಕಿಸಿ, ಜಾಮೀನು ಹಾಕಿದಾಗ ನಿಮ್ಮ ಹಣಕ್ಕೆ ನಿಮಗೆ ಭದ್ರತೆ ಇರುತ್ತದೆ. ಆದ್ದರಿಂದ ಜಂಟಿ ಸಾಲ ಕೊಡಲು ನೀವು ಉದಾಸೀನ ಮಾಡಬೇಡಿ, ಈಗ 16000, 17000 ಸದಸ್ಯರಲ್ಲಿ ಎಲ್ಲರೂ ಸ್ಥಿರಾಸ್ತಿ ಇರುವವರೇ ಇರುವುದಿಲ್ಲ. ನೀವು ಹಿಂದೆ ಹೇಳಿದಂತೆ ಕುಟುಂಬದಲ್ಲಿ ಅವರವರೇ ಜಾಮೀನು ಹಾಕುತ್ತಾರೆ ಎಂದು ಹೇಳುತ್ತಿದ್ದಿರಿ, ಎಲ್ಲರೂ ಊರು ಬಿಟ್ಟು ಹೋಗುವವರೇ ಇರುವುದಿಲ್ಲ. ಒಬ್ಬ ಸದಸ್ಯರಿಗೆ ರೂ.50000/- ಗಳಿಗೆ ಹೆಚ್ಚಿಸಿ, ಇವತ್ತು ಒಂದು ಟನ್ ಬಾಳೇಕಾಯಿ ಖರೀದಿಸಬೇಕಾದರೆ ರೂ.1,00,000/- ಬೇಕು ಆದ್ದರಿಂದ ನಿಮ್ಮ ಹಣಕ್ಕೆ ಭದ್ರತೆ ಹೇಗೆ ತೆಗೆದುಕೊಳ್ಳಬೇಕೆಂದು ಯೋಚಿಸಿ, ನಮಗೆ ಜಂಟಿ ಸಾಲವನ್ನು ಹೆಚ್ಚಿಸಿ ಕೊಡಿ, ಇದನ್ನು ಈ ಬಾರಿಯ ಸಭೆಯಲ್ಲಾದರೂ ಮಂಜೂರು ಮಾಡಬೇಕಾಗಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಎಂದರು. ಅದಕ್ಕೆ ಸದಸ್ಯರಾದ ಶ್ರೀ ಎಂ ಪಿ ಮಹೇಶ್ ರವರು ನೀವು ವರ್ತಕರಿಗೆ ಅನುಕೂಲ ಆಗಲಿ ಎಂದು ಕೇಳುತ್ತಿದ್ದೀರ ಆದರೆ ನಮ್ಮ ಅಧ್ಯಕ್ಷರಾಗಿದ್ದ ಶ್ರೀಯುತ ಎನ್ ಆರ್ ಜಗದೀಶ್ ರವರು 2016 ರಲ್ಲೇ ವರ್ತಕರ ಅನುಕೂಲಕ್ಕಾಗಿ ರೂ.1,00,000/- ದ Small Business Loan ಎಂದು ಮಾಡಿದ್ದು ವರ್ತಕರು ಅದರ ಅನುಕೂಲ ಪಡೆದುಕೊಳ್ಳಬಹುದು ಎಂದು ಹೇಳಿದರು ಅದಕ್ಕೆ ಸದಸ್ಯರು ಜಂಟಿ ಸಾಲಕ್ಕೆ ಕೊಡುವ ಬಡ್ಡಿ ದರ ಕಡಿಮೆ ಇದೆ ಸಣ್ಣವ್ಯಾಪಾರಿಗಳಿಗೆ 18% ಬಡ್ಡಿ ದರ ಕೊಟ್ಟರೆ ಯಾರೂ ಮೇಲೆ ಬರಲು ಸಾಧ್ಯವಿಲ್ಲ, ಮೊದಲು 24% ಇದ್ದದ್ದು ಈಗ 18% ಆಗಿದೆ. ಆದರೂ ಜಂಟಿ ಸಾಲಕ್ಕಿಂತ ಜಾಸ್ತಿ ಇದೆ. ಅದಕ್ಕೆ ಜಂಟಿ ಸಾಲವನ್ನೇ ಹೆಚ್ಚಿಸಿ ಕೊಟ್ಟು ನಮ್ಮ ವರ್ತಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಎಂದರು. ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪರವರು ಮಾತನಾಡಿ ನೂರರಲ್ಲಿ ಯಾರೋ ಇಬ್ಬರು ಅಥವಾ ಮೂವರು ತಪ್ಪು ಮಾಡುತ್ತಾರೆಂದರೆ ತೊಂಬತ್ತೇಳು ಜನ ತಪ್ಪು ಮಾಡುತ್ತಾರೆಂದು ಹೇಳಬೇಡಿ, ಈಗ ಸದಸ್ಯರು ಕೇಳುತ್ತಿರುವುದು ಸೂಕ್ತವಾಗಿದೆ. 25 ವರ್ಷಗಳ ಹಿಂದೆ ಕೊಡುತ್ತಿದ್ದ ರೂ. 25000/- ಜಂಟಿ ಸಾಲ ಈಗ ರೂ. 1,00,000/- ಆಗಿದೆ. ನೀವು ಬ್ಯಾಂಕಿನವರು ರೂ.25000/- ಯಿಂದ ರೂ. 50000/- ಗಳಿಗೆ ಹೆಚ್ಚಿಸಿ, ನೀವು ಯಾರಿಗೆ ಕೊಡಬೇಕು ಅವರಿಗೆ ಕೊಡಿ, ಯಾರಿಗೆ ಎಷ್ಟು ಕೊಡಬಹುದು ನೀವೇ ನಿರ್ಧರಿಸಿ ಕೊಡಿ, ಸಣ್ಣ ವ್ಯಾಪಾರಿಗಳ ಸಾಲವನ್ನು ಜಂಟಿ ಸಾಲಕ್ಕೆ ಹೋಲಿಸಬೇಡಿ, ಅದೇ ಬೇರೆ ಸಾಲ ಇದೇ ಬೇರೆ ಸಾಲ ಎಂದರು, ಮುಂದುವರೆಸಿ, ವಂಚನೆ ಪ್ರಕರಣ ಎಂದು 4-5 ಸಾಲಗಳ ಬಗ್ಗೆ ವರದಿ ಮಾಡಿರುತ್ತೀರ, ಈ ಪುಷ್ಪಕ್ ಮೋಟಾರ್ಸ್‌ದು ವಂಚನೆ ಪ್ರಕರಣ ಅಲ್ಲವೇ, ಸಾಲಗಾರರು ಬೀಗ ಒಡೆದು ವಾಹನಗಳನ್ನು ಮಾರಿಕೊಂಡ ಮೇಲೆ ಅದು ಕೂಡ ವಂಚನೆ ಪ್ರಕರಣ, ಈ ತರಹ ಬೇರೆ ಯಾವುದಾದರೂ ಕೇಸ್ ಇದ್ದರೆ ದಯವಿಟ್ಟು ಪಟ್ಟಿ ಮಾಡಿ ಎಂದರು, ಬ್ಯಾಂಕಿನ ಕೇಂದ್ರ ಕಚೇರಿ ಕಟ್ಟಡ ಮತ್ತು ಎ.ಪಿ.ಎಂ.ಸಿ ಯಾರ್ಡ್ ಕಟ್ಟಡ ಸ್ವಲ್ಪ ಶಿಥಿಲಾವಸ್ಥೆಯಲ್ಲಿದೆ ಅದನ್ನು ರಿಪೇರಿ ಮಾಡಿಸುವ ಕಡೆ ಗಮನ ಕೊಡಿ ಎಂದು ನಮ್ಮ ಸ್ನೇಹಿತರೊಬ್ಬರು ಹೇಳಿದರು, ಈ ನಿವೇಶನಗಳನ್ನು ಖರೀದಿ ಮಾಡುವಾಗ ಮತ್ತು ಕಟ್ಟಡ ಕಟ್ಟುವಾಗ ನಾನು ಸಲ್ಪ ಕಷ್ಟಪಟ್ಟಿದ್ದು, ಕಟ್ಟಡವನ್ನು ಸರಿಪಡಿಸುವ ಕಡೆ ಗಮನಕೊಡಿ ಎಂದು ಹೇಳಿದರು. ಕೆಲವು ಸದಸ್ಯರು ಸಿಬ್ಬಂದಿಗಳಿಗೆ ಬೋನಸ್ಸು ಕೊಡಿ ಎಂದು ಹೇಳಿದರು, ಸಿಬ್ಬಂದಿಗಳಿಗೆ ಕೊಡಿ ನಾನು ಬೇಡ ಎಂದು ಹೇಳುವುದಿಲ್ಲ ಆದರೆ ಸದಸ್ಯರಿಗೆ ಕಳೆದ 4 ವರ್ಷಗಳಿಂದ ಡಿವಿಡೆಂಡ್ ಕೊಟ್ಟಿರುವುದಿಲ್ಲ. ಇದು ಸದಸ್ಯರಿಗೆ ತುಂಬಾನೆ ನಷ್ಟವಾಗಿದೆ, ನೀವು ಮುಂದಿನ ವರ್ಷ ಡಿವಿಡೆಂಡ್ ಕೊಡುವಂತಹ ಪರಿಸ್ಥಿತಿಗೆ ಬರಲೇಬೇಕು, ಇದು ನಿಮ್ಮೆಲ್ಲರ ಜವಾಬ್ದಾರಿ, ಕಳೆದ 4 ವರ್ಷಗಳಿಂದ ಡಿವಿಡೆಂಡ್ ಕೊಡದಿರುವುದಕ್ಕೆ ಕಾರಣ ನೀವೇ. ನೀವು ಹೇಗೆ ಬ್ಯಾಂಕು ನಡೆಸಿದ್ದೀರಿ, ಏನು ತಪ್ಪು ಮಾಡಿದ್ದೀರಿ ಎಂದು ಸಭೆಯಲ್ಲಿ ಎಚ್ಚರಿಸುವುದು ಸದಸ್ಯನ ಕರ್ತವ್ಯ, ಆದ್ದರಿಂದ ನಾನೂ ಸಹ ಸ್ವಲ್ಪ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ. ನಾನು ಸ್ವಲ್ಪ ನಿಷ್ಠೂರವಾಗಿ ಮಾತನಾಡಿದರೂ ಬ್ಯಾಂಕಿನ ಒಳಿತಿಗಾಗಿ ಹೇಳುತ್ತಿದ್ದೇನೆ, ನಾನು ಸಭೆಗೆ ಬಂದು ನಿಮ್ಮ ಅನಿಸಿಕೆಗಳು, ನೀವು ಬ್ಯಾಂಕು ನಡೆಸಿದ ರೀತಿ ಇದೆಲ್ಲ ಗಮನದಲ್ಲಿಟ್ಟುಕೊಂಡು ನಮಗೆ ಏನು ಅನುಮಾನಗಳಿವೆಯೋ ಅದನ್ನು ಕೇಳಿದ್ದೇನೆ, ನೀವು ಎಲ್ಲಿ ತಪ್ಪಾಗಿದ್ದೀರ ಎಂದು ಎಚ್ಚರಿಸಬೇಕಾಗಿರುವುದು ಸದಸ್ಯನ ಕರ್ತವ್ಯವಾಗಿದ್ದು, ಇದರಿಂದ ನಾನೂ ಸಹ ನಿಮಗೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ, ಇದರಿಂದ ನಿಮಗೆ ಏನಾದರೂ ನೋವಾಗಿದ್ದರೆ ಕ್ಷಮಿಸಿ ಎಂದು ಹೇಳಿ, ಆಡಳಿತ ಮಂಡಳಿಯವರಿಗೆ, ಸದಸ್ಯರಿಗೆ, ಸಿಬ್ಬಂದಿಗಳಿಗೆ ವಂದಿಸಿ ತಮ್ಮ ಮಾತು ಮುಗಿಸಿದರು.

ಸದಸ್ಯರೊಬ್ಬರು ಮಾತನಾಡಿ Nationalised ಬ್ಯಾಂಕಿಗೆ ಹೋದರೆ ಸಿಬ್ಬಂದಿಗಳು ಒಂದು ಲಕ್ಷ ಹಣ ಹಿಂಪಡೆಯಲು ಗಂಟೆಗಟ್ಟಲೆ ಕಾಯಿಸುತ್ತಾರೆ. ಆದರೆ ನಮ್ಮ ಬ್ಯಾಂಕಿನ ಸಿಬ್ಬಂದಿಗಳು ಹಣ ಹಿಂಪಡೆಯುವುದಾಗಲೀ, ವರ್ಗಾವಣೆಯೇ ಆಗಲಿ ಐದು ಹತ್ತು ನಿಮಿಷಗಳಲ್ಲಿ ಮಾಡಿಕೊಡುತ್ತಾರೆ. ಅವರಿಗೆ ಬರೀ ಬೋನಸ್ಸು ಅಲ್ಲ ಬೇರೆ ಸವಲತ್ತುಗಳನ್ನು ಕೊಡಿ, ಬೇರೆ ಕಡೆ ಕೆಲಸದ ಅವಧಿಯಲ್ಲಿ ಮಾತ್ರ ಕೆಲಸ ಮಾಡುತ್ತಾರೆ. Nationalised ಬ್ಯಾಂಕಿನಲ್ಲಿ 2.30 ಕ್ಕೆ ಮುಕ್ತಾಯವಾದರೆ ಮುಗೀತು ಏನೇ ಎಮರ್ಜೆನ್ಸಿ ಎಂದರೂ ಕೊಡುವುದಿಲ್ಲ. 5-10 ಲಕ್ಷ ಕೇಳಿದರೆ ಆರ್.ಬಿ.ಐ ನಿಯಮ ಇನ್ನು ಮುಂತಾದ ಕಾರಣಗಳನ್ನು ಹೇಳುತ್ತಾರೆ. ಆದರೆ ನಮ್ಮ ಬ್ಯಾಂಕಿನಲ್ಲಿ ಕೊಡುತ್ತಾರೆ ಮತ್ತು ಸಿಬ್ಬಂದಿಗಳು ಅಷ್ಟೇ ಚೆನ್ನಾಗಿ ಕೆಲಸ ಮಾಡುತ್ತಾರೆ. ನಿಮ್ಮ ಕಾರ್ಯಕಾರಿ ಮಂಡಳಿಯವರ ಶ್ರಮ ಶಿಸ್ತು ಕ್ರಮ ತುಂಬಾ ಚೆನ್ನಾಗಿದೆ. ಯಾವುದೇ ಶಾಖೆಯಲ್ಲೂ ಕಾಯಿಸುವುದಿಲ್ಲ. ಕೇವಲ 5-10 ನಿಮಿಷಗಳಲ್ಲಿ 5 ರಿಂದ 10 ಲಕ್ಷ ಹಣವನ್ನೂ ನಾವು ತೆಗೆದುಕೊಂಡಿದ್ದೇವೆ. ಜಂಟಿ ಸಾಲದ ಬಗ್ಗೆ ಬೇರೆ ಕೋ ಆಪರೇಟಿವ್ ಬ್ಯಾಂಕುಗಳಲ್ಲಿ 6 ತಿಂಗಳು ಕೊಡುತ್ತಾರೆ, ನೀವು ಸಾಲ ಎಷ್ಟೇ ಕೊಡಿ ಅದು ವಸೂಲಾತಿ ಕಷ್ಟ, ಆದರೆ ವರ್ತಕರಿಗೆ ಉಪಯೋಗವಾಗುವಂತೆ ಜಂಟಿ ಸಾಲ 6 ತಿಂಗಳು ಕೊಡಿ, ಏಕೆಂದರೆ ಹುಣಸೇಹಣ್ಣು ಸೀಸನ್‌ನಲ್ಲಿ ಮಾರ್ಚ್ ಗೆ ವಾಪಸ್ಸು ಕೊಡಿ ಎಂದು ಕೇಳುತ್ತಾರೆ, ದಯವಿಟ್ಟು 3 ತಿಂಗಳಿಂದ 6 ತಿಂಗಳಿಗೆ ಹೆಚ್ಚಿಸಿ

ಕೊಟ್ಟರೆ ಅನುಕೂಲವಾಗುತ್ತದೆ ಎಂದು ಕೇಳಿದರು, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಮಾತನಾಡಿ ಸದಸ್ಯರಾದ ಮುನಿಗಂಗಪ್ಪ ರವರು ಕೆಲವು ಪ್ರಶ್ನೆಗಳನ್ನು ಕೇಳಿದರು ಆದರೆ ಅವರ ಪ್ರಶ್ನೆಗಳಿಗೆ ಉತ್ತರ ಹೇಳಬೇಕೆಂದುಕೊಂಡೆ ಆದರೆ ಅವರು ಕಾಣುತ್ತಿಲ್ಲ, ಹಾಗಾಗಿ ಅವರು ಇನ್ನೊಮ್ಮೆ ಸಿಕ್ಕಾಗ ಮಾತನಾಡುತ್ತೇನೆ ಎಂದರು.

ಸದಸ್ಯರಾದ ಶ್ರೀ ಸಂತೋಷ್ ರವರು ಮಾತನಾಡಿ ನಮ್ಮ ಬ್ಯಾಂಕಿಗೆ ಸುದೀರ್ಘ ಅವಧಿಯಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಎನ್ ಆರ್ ಜಗದೀಶ್ ರವರ ಗೌರವಾರ್ಥ ಅವರ ಹೆಸರನ್ನು ಬ್ಯಾಂಕಿನ ಯಾವುದಾದರೊಂದು ನಿಧಿಗೆ ಇಡಬೇಕೆಂದು ಸದಸ್ಯರ ಪರವಾಗಿ ಕೋರಿದರು.

ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಮಾತನಾಡಿ ಹಿಂದಿನ ವಾರ ಎಲ್ಲಾ ಆರ್.ಬಿ.ಐ ತಪಾಸಣೆ ನಡೆದು ನೆನ್ನೆ ತಾನೇ ಮುಗಿದಿದೆ. ಅವರು ಒಂದು ಸಲಹೆ ಕೊಟ್ಟಿರುತ್ತಾರೆ, ಯಾವುದೇ ಕಾರಣಕ್ಕೂ unsecured Loan ಕೊಡಬೇಡಿ ಎಂದು. ಇದಕ್ಕೆ ನಾವು ಆರ್.ಬಿ.ಐ ನವರಿಗೆ ಉತ್ತರ ಕೊಡುವುದಾ ಅಥವಾ ಹೆಚ್ಚಿಸಿಕೊಡಿ ಎಂದು ಕೇಳುತ್ತಿರುವ ನಿಮ್ಮ ಪ್ರಶ್ನೆಗೆ ಏನು ಉತ್ತರ ಕೊಡುವುದು ಗೊತ್ತಾಗುತ್ತಿಲ್ಲ. ಆದರೂ ನಾವು ನಮ್ಮ ಸದಸ್ಯರು ನಂಬಿಕಸ್ಥ ಗ್ರಾಹಕರಾಗಿದ್ದು, ಅವರ ಅವಶ್ಯಕತೆಗೆ ನಾವು ಕೊಡಬೇಕಾಗುತ್ತದೆ ಎಂದು ಹೇಳಿದ್ದೇವೆ, ಆದರೆ ಇದನ್ನು ಹೆಚ್ಚಿಸುವ ವಿಚಾರವಾಗಿ ಅವರು ಮುಂದಿನ ವಾರ ಮತ್ತೆ ಬರುತ್ತಾರೆ, ಆಗ ಮಾತನಾಡುತ್ತೇವೆ ಅವರು ಕೊಡಬಹುದು ಎಂದರೆ ನಮ್ಮದೇನು ಅಭ್ಯಂತರವಿಲ್ಲ ಎಂದು ಹೇಳಿದರು. ಅದಕ್ಕೆ ಸದಸ್ಯರಾದ ಶ್ರೀ ಮಹದೇವಯ್ಯ ರವರು ಮಾತನಾಡಿ ಜಂಟಿ ಸಾಲವನ್ನು unsecured loan ಎಂದು ಹೇಳಿದಿರಿ ಆದರೆ, ನೀವು ಇಬ್ಬರ ಜಾಮೀನು ತೆಗೆದುಕೊಂಡಿರುತ್ತೀರ, ಸದಸ್ಯರಿಗೆ ಜವಾಬ್ದಾರಿ ಇರುತ್ತದೆ, ಷೇರಿನ ಹಣ ಇರುತ್ತದೆ. ಜಾಮೀನುದಾರರಿಗೂ ಜವಾಬ್ದಾರಿ ಇರುತ್ತದೆ, ನಾನು ಸಾಲಕಟ್ಟದೇ ಇದ್ದರೆ ನೀವು ಜಾಮೀನುದಾರರನ್ನು ಕೇಳುತ್ತೀರ, ಅವರ ಸಾಲ ತೆಗೆದುಕೊಂಡವರನ್ನು ಕೇಳುತ್ತಾರೆ. ಆದ್ದರಿಂದ ಇದು ಸಹ unsecured loan ಅಲ್ಲ secured loan ಸಾಲವೇ. ದಯವಿಟ್ಟು ಎಲ್ಲವನ್ನು ವಿಮರ್ಶೆ ಮಾಡಿ ಜಂಟಿ ಸಾಲ ಹೆಚ್ಚಿಸಿ ಕೊಡಬೇಕೆಂದು ಕೋರಿದರು, ಅದಕ್ಕೆ (ಪ್ರ) ಉಪಾಧ್ಯಕ್ಷರಾದ ಶ್ರೀ ಸಿ ಆರ್ ನಟರಾಜ್‌ರವರು ನಿಮ್ಮ ಸಲಹೆಯನ್ನು ಆರ್.ಬಿ.ಐ ನವರ ಮುಂದೆ ಇಟ್ಟು ಅವರು ಒಪ್ಪಿದರೆ ನಿಮ್ಮ ಸಲಹೆಯನ್ನು ಪರಿಗಣಿಸುತ್ತೇವೆ ಎಂದು ಹೇಳಿದರು.

ಈ ಎಲ್ಲಾ ಮೇಲ್ಕಂಡ ಚರ್ಚೆಯೊಂದಿಗೆ ಸದಸ್ಯರು 2022-23 ನೇ ಸಾಲಿನ ಆಯವ್ಯಯ ಮತ್ತು 2023-24 ರ ಮುಂಗಡ ಪತ್ರವನ್ನು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿದರು.

### 10. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ:

ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ನಯನ ಎಂ ರವರು, ಬ್ಯಾಂಕಿನಲ್ಲಿ 2022-23 ನೇ ಸಾಲಿನಲ್ಲಿ ಹೊಸದಾಗಿ 1909 ಜನರನ್ನು ಬ್ಯಾಂಕಿನ ಸದಸ್ಯರನ್ನಾಗಿ ಸೇರಿಸಿಕೊಂಡಿದ್ದು ಹಾಗೂ 288 ಜನ ಸದಸ್ಯರನ್ನು ಸದಸ್ಯತ್ವದಿಂದ ಸಮಾಪನೆಗೊಳಿಸಿರುವುದನ್ನು ಸಭೆಯ ಅನುಮೋದನೆಗೆ ಮಂಡಿಸಿದರು.

ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿದರು.

### 11. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳನ್ನು ಸಭೆಗೆ ಮಂಡಿಸುವ ವಿಚಾರ.

ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳನ್ನು ನಿರ್ದೇಶಕರಾದ ಶ್ರೀ ಎಂ ದೀಪಕ್‌ರವರು ಈ ಕೆಳಕಂಡಂತೆ ಸಭೆಗೆ ಮಂಡಿಸಿದರು.

(ಅ) ದಿನಾಂಕ 14-07-2023 ರ ಕಾರ್ಯಕಾರಿ ಮಂಡಳಿ ಆದೇಶದಂತೆ 2023-24 ನೇ ಸಾಲಿನ ಸನ್ನದು ಲೆಕ್ಕಪರಿಶೋಧಕರಾಗಿ ಮೆ॥ ವೈ. ಸಿ. ಆರ್. ಜೆ & ಅಸೋಸಿಯೇಟ್ಸ್, ಬೆಂಗಳೂರು (Registration No.006927S) ಇವರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನಿಸಿರುವುದನ್ನು ಆರ್ ಬಿ ಐ ನ ಅನುಮತಿಗಾಗಿ ಕಳುಹಿಸಿದ್ದು ಇದನ್ನು ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಿದೆ.

**ಸನ್ನದ್ದು ಲೆಕ್ಕಪರಿಶೋಧಕರಾಗಿ ಮೆ॥ ವೈಸಿಆರ್‌ಜೆ & ಅಸೋಸಿಯೇಟ್ಸ್, ಬೆಂಗಳೂರು ಇವರನ್ನು 2023-24 ನೇ ಸಾಲಿಗೆ ನೇಮಕ ಮಾಡಿಕೊಳ್ಳಲು ತೀರ್ಮಾನಿಸಿರುವುದನ್ನು ಸದಸ್ಯರು ಸರ್ವಾನುಮತದಿಂದ ತಮ್ಮ ಒಪ್ಪಿಗೆ ಸೂಚಿಸಿದರು.**

**(ಆ) ಈ ದಿನದ ಸಭೆಯಲ್ಲಿ ಚರ್ಚಿಸಲು, ಬ್ಯಾಂಕಿನ ಸದಸ್ಯರುಗಳು ಸಲ್ಲಿಸಿರುವ ಪತ್ರದ ವಿಚಾರ:-**

ಸಭೆಯಲ್ಲಿ ಚರ್ಚಿಸಲು ಬಂದಿರುವ ಪತ್ರಗಳನ್ನು ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ಸಭೆಗೆ ಮಂಡಿಸಿದರು.

ಪ್ರಥಮವಾಗಿ ನಮ್ಮ ದೀರ್ಘಕಾಲದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್ ಆರ್ ಜಗದೀಶ್ ರವರನ್ನು ಸ್ಮರಿಸುತ್ತಾ ಹಾಲಿ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬ್ಯಾಂಕಿನ ಸದಸ್ಯರಾದ ಶ್ರೀ ಎಂ ಪಿ ಹರಿದಾಸ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರವನ್ನು ಓದುವಾಗ ಎಂ ಪಿ ಹರಿದಾಸ್ ರವರು ಸಭೆಯಲ್ಲಿ ಇದ್ದಾರಾ ಎಂದು ಕೇಳಿದಾಗ ಇದ್ದೇನೆ ಎಂದರು.

1. ಬ್ಯಾಂಕಿನ ಸದಸ್ಯರಾದ ಶ್ರೀ ಎಂ ಪಿ ಹರಿದಾಸ್ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ.

ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆಲವು ಹೆಸರು ವಾಸಿಯಾದ ಬ್ಯಾಂಕ್‌ಗಳು ಅತೀ ನಷ್ಟಕ್ಕೆ ತುತ್ತಾಗಿ ಸರ್ಕಾರದ ಸುಪರ್ದಿಗೆ ಸೇರಿ ಮುಳುಗಿ ಹೋಗುವ ಸ್ಥಿತಿ ತಲುಪಿದೆ. ಹೀಗಿರುವಾಗಲು ನೀವು ಕಳೆದ ವರ್ಷ 22-23 ರಲ್ಲಿ 2866.83 ಕೋಟಿ ವ್ಯವಹಾರ ಮಾಡಿ ನಿವ್ವಳ ಲಾಭ ರೂ.9.54 ಕೋಟಿ ಮಾಡಿರುವುದೇ ಶ್ಲಾಘನೀಯ, ಎಷ್ಟೋ ಬ್ಯಾಂಕುಗಳು ಲಾಭವೇ ಇಲ್ಲದೇ ಆರ್ಥಿಕ ತೊಂದರೆಯನ್ನು ಅನುಭವಿಸುತ್ತಿವೆ. ಇದಕ್ಕೆ ಅಧ್ಯಕ್ಷರು ಎಲ್ಲ ನಿರ್ದೇಶಕರು ಎಲ್ಲ ಸಿಬ್ಬಂದಿ ವರ್ಗದ ಕಠಿಣ ಶ್ರಮ ಕಾರಣ, ನಿಮ್ಮೆಲ್ಲರಿಗೂ ಧನ್ಯವಾದಗಳು. ಹೀಗೆಯೇ ಈ ಬ್ಯಾಂಕನ್ನು ಮುನ್ನೆಡೆಸಿಕೊಂಡು ಹೋಗಿ ಯಶಸ್ವಿಯಾಗಿರೆಂದು ಹಾರೈಸುವೆ.

ತಮ್ಮ ಪತ್ರದಲ್ಲಿನ ವಿಷಯದ ಸಂಬಂಧವಾಗಿ ತಾವು ಕೋರಿರುವ ಮಾಹಿತಿ ಈ ಕೆಳಕಂಡಂತಿದೆ :

1) ನಿವ್ವಳ ಅನುತ್ಪಾದಕ ಸಾಲ ರೂ. 204.76 ಕೋಟಿ ಆದಷ್ಟು ಶೀಘ್ರ ವಸೂಲಾತಿಗೆ ಕ್ರಮ ಜರುಗಿಸಬೇಕು.

**ಸಮಾಧಾನ:– ದಿನಾಂಕ 31-03-2023 ರ ಅಂತ್ಯಕ್ಕೆ ನಿವ್ವಳ ಎನ್.ಪಿ.ಎ ರೂ. 204.76 ಕೋಟಿಗಳಿದ್ದು, ಪ್ರಸಕ್ತ ವರ್ಷದಲ್ಲಿ ವಸೂಲಾತಿ ಪ್ರಕ್ರಿಯೆಯನ್ನು ಚುರುಕುಗೊಳಿಸಿ ಮಾಡುತ್ತಿರುವುದರಿಂದ ದಿನಾಂಕ 31-08-2023ರ ಅಂತ್ಯಕ್ಕೆ 117.15 ಕೋಟಿಗಳಾಗಿರುತ್ತದೆ.**

2) ಲಾಭವಿಲ್ಲದ ಶಾಖೆಗಳನ್ನು ವಿಳಂಬ ಧೋರಣೆ ಅನುಸರಿಸದೇ ಶೀಘ್ರವಾಗಿ ಮುಚ್ಚುವುದು ಅಥವಾ ವಿಲೀನ ಗೊಳಿಸುವುದು.

**ಸಮಾಧಾನ :– ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದರ ಬಗ್ಗೆ ಪರಿಶೀಲಿಸಲಾಗುವುದು.**

3) ನಿವ್ವಳ NPA 23.08% ಇರುವುದನ್ನು ಕಡಿಮೆ ಮಾಡಲು ಶೀಘ್ರವಾಗಿ ಕ್ರಮ ಜರುಗಿಸುವುದು.

**ಸಮಾಧಾನ:– ದಿನಾಂಕ 31-03-2023ರ ಅಂತ್ಯಕ್ಕೆ ನಿವ್ವಳ ಎನ್.ಪಿ.ಎ 23.08% ಇದ್ದು, ತೀವ್ರ ವಸೂಲಾತಿ ಕ್ರಮಗಳಿಂದಾಗಿ ದಿನಾಂಕ 31-08-2023ರ ಅಂತ್ಯಕ್ಕೆ 15.09% ಆಗಿದ್ದು, ಇನ್ನೂ ತೀವ್ರಗತಿಯಲ್ಲಿ ವಸೂಲಾತಿ ಕ್ರಮ ಮುಂದುವರೆಸಿ ಶೀಘ್ರವಾಗಿ ಎನ್ ಪಿ ಎ ಪ್ರಮಾಣ ಕಡಿಮೆ ಮಾಡಲು ಪ್ರಯತ್ನಿಸುತ್ತೇವೆ.**

**4)** 22ನೇ ವರ್ಷದಲ್ಲಿ 21-22 No. of frauds -2

2022-23 ನೇ ವರ್ಷದಲ್ಲಿ No. of frauds -3

ಒಟ್ಟು 5 frauds ಕೇಸಗಳಲ್ಲಿ 6.41 crore ಆಗಿದೆ. ಇದರ ಪೂರ್ತಿ ವಿಚಾರಣೆ ಆಗಿ ತಪ್ಪಿತಸ್ಥರಿಗೆ ಸರಿಯಾದ ಕ್ರಮದಿಂದ ಶಿಸ್ತಿನ ಕ್ರಮ ಜರುಗಿಸಬೇಕು. ಫ್ರಾಡಿಗೆ 22-23 ರಲ್ಲಿ 100% ಪ್ರಾವಿಶನ್ ಮಾಡುವುದು ಸೂಕ್ತವೆ?

**ಸಮಾಧಾನ:– ಸದರಿ ಪ್ರಕರಣಗಳ ಬಗ್ಗೆ ಲೆಕ್ಕಪರಿಶೋಧನಾ ವರದಿ ಪುಟ ಸಂಖ್ಯೆ 11 ಮತ್ತು 12 ರಲ್ಲಿ ವಿವರವಾಗಿ ನಮೂದಿಸಲಾಗಿದೆ. ಸದರಿ ಸಾಲಗಾರರ ಮೇಲೆ ಸೂಕ್ತ ಸಿವಿಲ್/ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿದ್ದು, ಪೋಲೀಸ್ ಠಾಣೆಯಲ್ಲಿ FIR ದಾಖಲಾಗಿ ತನಿಖೆ ಕಾರ್ಯ ಪ್ರಗತಿಯಲ್ಲಿರುತ್ತದೆ. RBI ನಿರ್ದೇಶನದಂತೆ IRAC ನಿಯಮದಂತೆ ಈ ಹಿಂದೆಯೇ provision ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಯಾವುದೇ provision ಮಾಡಿರುವುದಿಲ್ಲ.**

**5)** ಸಭೆ ಸೆಮಿನಾರ್ ತರಬೇತಿ ಮತ್ತು ಇತರೇ ವೆಚ್ಚಕ್ಕೆ 1 ಕೋಟಿ ರೂ. ಇಟ್ಟಿದರೂ 32,83,25,953.70 ರಷ್ಟು ಹೆಚ್ಚು ಖರ್ಚಾಗಿದೆ ಅಂದರೆ 32.83% ಹೆಚ್ಚಾಗಲು ಕಾರಣಗಳೇನು?

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಶ್ರೀ ಎಂ ಪಿ ಹರಿದಾಸ್‌ರರಿಗೆ ನೀವು ಕೇಳಿರುವ ಈ ವಿಷಯವಾಗಿ ಇಲ್ಲಿವರೆಗೂ ಸಭೆಯಲ್ಲಿ ಚರ್ಚೆಯಾಗಿರುವುದನ್ನು ತಾವು ಗಮನಿಸಿದ್ದೀರಾ, ಮತ್ತೆ ಅದೇ ಉತ್ತರವನ್ನು ಕೊಡಬೇಕಾ ಎಂದಾಗ ಎಂ ಪಿ ಹರಿದಾಸ್‌ರವರು ಬೇಡ ಎಂದು ಹೇಳಿದರು.

**2. ಬ್ಯಾಂಕಿನ ಸದಸ್ಯರಾದ ಶ್ರೀ ಟಿ ಸಿ ವಿಜಯ ಕುಮಾರ್ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ.**

ಬ್ಯಾಂಕಿನ ನಿರ್ದೇಶಕರಾದ ಎಂ ಪಿ ಮಹೇಶ್ ರವರು ಸಭೆಯಲ್ಲಿ ಸದಸ್ಯರಾದ ಟಿ ಸಿ ವಿಜಯ್ ಕುಮಾರ್ ರವರು ಇದ್ದಾರಾ ಎಂದು ಕೇಳಿದಾಗ ಟಿ ಸಿ ವಿಜಯ ಕುಮಾರ್ ರವರು ಮತ್ತು ಇನ್ನೂ ಕೆಲ ಸದಸ್ಯರು ಈಗಾಗಲೇ ಸದರಿ ವಿಷಯಕ್ಕೆ ಈಗಾಗಲೇ ಉತ್ತರಿಸಲಾಗಿದೆ ಮತ್ತೆ ಚರ್ಚಿಸುವುದು ಬೇಡ ಎಂದು ಹೇಳಿದರು.

**3. ಬ್ಯಾಂಕಿನ ಸದಸ್ಯರುಗಳು (ಅಂದಾಜು 280 ಜನ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ.**

ನಮ್ಮ ಬ್ಯಾಂಕಿನ ಸದಸ್ಯರಲ್ಲೊಬ್ಬರಾದ ಶ್ರೀ ಜಿ ಎಸ್ ಬಸವರಾಜುರವರು ಬ್ಯಾಂಕಿನ ವಿರುದ್ಧ Whats app ನಲ್ಲಿ ಅನೇಕ ಸಂದೇಶಗಳನ್ನು ಕಳುಹಿಸುತ್ತಿದ್ದು, ಇದರಿಂದ ಬ್ಯಾಂಕಿನ ಹೆಸರಿಗೆ ಧಕ್ಕೆ ಬರುತ್ತಿರುವುದು ನೋವಿನ ವಿಷಯ. ಇವರನ್ನು ಹಿಂದಿನ ವಾರ್ಷಿಕ ಸಾಮಾನ್ಯ ಸಭೆಯ ತೀರ್ಮಾನದಂತೆ ಸದಸ್ಯತ್ವದಿಂದ ತೆಗೆದು ಹಾಕಿದ್ದು, ಮತ್ತೊಮ್ಮೆ ಸದಸ್ಯತ್ವಕ್ಕೆ ಸೇರಿಸಿಕೊಂಡಿರುವುದು ತಿಳಿದು ಬಂದಿರುತ್ತದೆ.

ನಮ್ಮ ಬ್ಯಾಂಕು ಕರ್ನಾಟಕದಲ್ಲಿ ಸಹಕಾರ ಬ್ಯಾಂಕುಗಳಲ್ಲಿಯೇ ಉನ್ನತ ಸ್ಥಾನದಲ್ಲಿದ್ದು, ಒಳ್ಳೆಯ ಹೆಸರನ್ನು ಮತ್ತು ಲಾಭವನ್ನು ಪಡೆದಿರುತ್ತದೆ. ಆದರೆ ಕೋವಿಡ್ 19 ನಿಂದ ಹಿಂದಿನ ವರ್ಷದಲ್ಲಿ ಬ್ಯಾಂಕು ನಷ್ಟದಲ್ಲಿರುವುದು ನಿಜವಾದರೂ, ಬ್ಯಾಂಕಿನ ವಿರುದ್ಧ ಬಸವರಾಜುರವರು ಇತರ ಸದಸ್ಯರಿಗೆ ಕಳುಹಿಸುತ್ತಿರುವ ಅಸಂಬದ್ಧ ಸಂದೇಶದಿಂದ ಬ್ಯಾಂಕಿನ ಹೆಸರಿಗೆ ಧಕ್ಕೆ ಬಂದಿರುವುದಲ್ಲದೇ ವ್ಯಾವಹಾರಿಕವಾಗಿಯೂ ನಷ್ಟವಾಗಿರುವುದು ಕಂಡುಬಂದಿರುತ್ತದೆ.

ಇವರ ಈ ಸಂದೇಶಗಳಿಂದಾಗಿ ಇತರ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಬ್ಯಾಂಕಿನ ಬಗ್ಗೆ ತಪ್ಪು ಮಾಹಿತಿಗಳು ರವಾನೆಯಾಗುತ್ತಿದ್ದು, ಇವರ ಮೇಲೆ ಕ್ರಮ ತೆಗೆದುಕೊಂಡು ಇವರನ್ನು ಶಾಶ್ವತವಾಗಿ ಸದಸ್ಯತ್ವದಿಂದ ತೆಗೆಯಬೇಕೆಂದು ತಿಳಿಸುತ್ತಿದ್ದು, ಈ ಬಗ್ಗೆ ಮುಂಬರುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗಿ ಕೋರುತ್ತಿದ್ದೇವೆ.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಸಭೆಗೆ ಉತ್ತರಿಸುವಾಗ ಸುಮಾರು 280 ಸದಸ್ಯರುಗಳು ಸಹಿ ಮಾಡಿ ಪತ್ರಕೊಟ್ಟಿದ್ದೀರಾ, ಈ ಸದಸ್ಯರುಗಳ ಪೈಕಿ ಸಭೆಯಲ್ಲಿ ಯಾರಿದ್ದೀರಾ ಎಂದು ಕೇಳಿದಾಗ ಸದಸ್ಯರಾದ ಶ್ರೀ ಪ್ರವೀಣ್ ಕುಮಾರ್ ರವರು ಈಗಾಗಲೇ ನೂರಾರೂ ಜನ ಸದಸ್ಯರುಗಳು ಅಧ್ಯಕ್ಷರಿಗೆ ಮನವಿ ಮಾಡಿದ್ದೇವೆ. ದಯವಿಟ್ಟು ಅವರನ್ನು Suspension ನಲ್ಲಿ ಇಡಿ, ಮುಂದೆ ಅವರು ಏನು ಬೇಕಾದರೂ ಮಾಡಿಕೊಳ್ಳಲಿ, ಈ ಹಿಂದೆ ನೀವು ಯಾವುದಕ್ಕೋಸ್ಕರ ಅವರನ್ನು ಸದಸ್ಯತ್ವಕ್ಕೆ ತೆಗೆದುಕೊಂಡಿದ್ದೀರಾ ಎಂದು ಕಾರಣ ಗೊತ್ತಿಲ್ಲ. ದಿನ ಬೆಳಿಗ್ಗೆ ಆದರೆ ವಾಟ್ಸಪ್‌ನಲ್ಲಿ ಬ್ಯಾಂಕಿನ ನಿರ್ದೇಶಕರನ್ನು, ಅಧ್ಯಕ್ಷರನ್ನು ಬ್ಯಾಂಕನ್ನು ತೇಜೋವಧೆ ಮಾಡುತ್ತಿದ್ದಾರೆ. ಇದರಿಂದ ಸುಮಾರು 300 ರಿಂದ 400 ಕೋಟಿ ಯಷ್ಟು ಡೆಪಾಸಿಟ್ ಹೊರಗಡೆ ಹೋಗಿದೆ. ಇವರಿಂದ ಬ್ಯಾಂಕಿಗೆ ಅಗಿರುವಂತಹ ಅನುಕೂಲವಾದರೂ ಏನು ಎನ್ನುವುದನ್ನು ಈ ಸಭೆಯಲ್ಲಿ ತಿಳಿಸಿ ಇಲ್ಲವಾದರೆ Suspension ನಲ್ಲಿ ಇಡಿ, ಅವರು ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಂಡಿದ್ದರಾ, ಅಥವಾ ಸಾಲವನ್ನು ಯಾರಿಗಾದರೂ ಕೊಡಿಸಿದ್ದರಾ, ಡೆಪಾಸಿಟ್ ತಂದಿದ್ದಾರಾ, Recovery ಮಾಡುವುದಕ್ಕೆ ಯಾರಿಗಾದರು ಸಹಾಯ ಮಾಡಿದ್ದಾರಾ, ಏನು ಮಾಡಿದ್ದಾರೆ ಇವರದ್ದು ಏನೇ ವಾದ ಇದ್ದರೂ DR ಹತ್ತಿರ ಹೋಗಬಹುದಾಗಿತ್ತು, ಅಥವಾ ನಿಮ್ಮನ್ನ ಕೇಳಬಹುದಾಗಿತ್ತು ನೀವು ಉತ್ತರವನ್ನು ಸಮಂಜಸವಾಗಿ ನೀಡಿಲ್ಲ ಅಂದರೆ DR, RBI ಹತ್ತಿರ ಹೋಗಬಹುದಾಗಿತ್ತು ಮುಂದಿನ ಕ್ರಮ ಅವರು ತೆಗೆದುಕೊಳ್ಳಬಹುದಾಗಿತ್ತು ಅದನ್ನ ಬಿಟ್ಟು ವಾಟ್ಸಪ್ ಸಂದೇಶದಿಂದ ಎಲ್ಲರಿಗೂ Bad Opinion ಬರುವ ಹಾಗೇ ಮಾಡಿದ್ದಾರೆ, ಆದ್ದರಿಂದ ದಯವಿಟ್ಟು ಜಿ ಎಸ್ ಬಸವರಾಜುರವರನ್ನು Suspension ನಲ್ಲಿ ಇಡಿ, ಈಗಾಗಲೇ ಸಭೆಯಲ್ಲಿ ನಿಮ್ಮನ್ನು ನೂರಾರು ಜನ ಕೇಳಿಕೊಂಡಿದ್ದೇವೆ. ಇನ್ನೂ ಮುಂದೆ ನಾವು ಕೇಳುವಂತಹುದು ಏನು ಇಲ್ಲ, ನೀವು ದಯವಿಟ್ಟು Suspension ನಲ್ಲಿ ಇಡಿ ಎಂದು ಹೇಳಿದಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ ರವರು ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿರುವುದರಿಂದ ಸದಸ್ಯರೊಬ್ಬರು Suspension ಮಾಡಲ್ಲ ಎಂದರೆ ಬ್ಯಾಂಕಿನ ಆಡಳಿತ ಮಂಡಳಿಯವರು ಅವ್ಯವಹಾರಗಳಲ್ಲಿ ಭಾಗಿಯಾಗಿದ್ದೀರಾ ಎಂದು ತಪ್ಪು ಸಂದೇಶ ಸದಸ್ಯರುಗಳಿಗೆ ಹೋಗುತ್ತದೆ. ಇಲ್ಲವಾದರೆ ತಪ್ಪು ಮಾಡಿದ್ದೀರಾ ಎಂದು ಸಭೆಯಲ್ಲಿ ಒಪ್ಪಿಕೊಳ್ಳಿ, ಇಲ್ಲವಾದರೆ ಕಾನೂನು ಕ್ರಮ ತೆಗೆದುಕೊಳ್ಳಿ ಎಂದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್ ರವರು ಈ ಸಭೆಯಲ್ಲಿ ತಮ್ಮೆಲ್ಲರ ಸಲಹೆಯನ್ನು ಸ್ವೀಕರಿಸೋಣ, ಆದರೆ ಕಾನೂನಾತ್ಮಕವಾಗಿ ಏನು ಕ್ರಮ ತೆಗೆದುಕೊಳ್ಳಬೇಕು ಹಾಗೇ ಮುಂದುವರೆಯುತ್ತೇವೆ ಎಂದು ಸಭೆಗೆ ತಿಳಿಸಿದಾಗ ಸಭೆಯು ಒಪ್ಪಿಗೆಯನ್ನು ನೀಡಿತು.

**4. ಬ್ಯಾಂಕಿನ ಸದಸ್ಯರಾದ ಶ್ರೀ ಕೆ ಜಿ ಮುನಿಗಂಗಪ್ಪ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ :**

ಬ್ಯಾಂಕಿನ ನಿರ್ದೇಶಕರಾದ ಎಂ ಪಿ ಮಹೇಶ್ ರವರು ಸಭೆಗೆ ಮಂಡಿಸುವಾಗ ಮುನಿಗಂಗಪ್ಪರವರು ಕೇಳಿರುವ ಸಾಕಷ್ಟು ಪ್ರಶ್ನೆಗಳಿಗೆ ಈಗಾಗಲೇ ಉತ್ತರ ಸಿಕ್ಕಿದ್ದು ಅವರಿಗೆ ಸಮಾಧಾನವಾಗಿ ಅವರು ಸಭೆಯಿಂದ ನಿರ್ಗಮಿಸಿರಬೇಕು, ಬ್ಯಾಂಕಿನ ಸದಸ್ಯರಾದ ಕೆ ಜಿ ಮುನಿಗಂಗಪ್ಪರವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಅವರಿಗೆ ಧನ್ಯವಾದಗಳು ಎಂದು ತಿಳಿಸಿದರು.

**5. ಬ್ಯಾಂಕಿನ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜು ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ.**

ಬ್ಯಾಂಕಿನ ನಿರ್ದೇಶಕರಾದ ಎಂ ಪಿ ಮಹೇಶ್ ರವರು ಸಭೆಗೆ ಮಂಡಿಸುವಾಗ ಜಿ ಎಸ್ ಬಸವರಾಜು ರವರು ಸಭೆಯಲ್ಲಿ ಇದ್ದಾರಾ, ಎಂದು ಸಭೆಯಲ್ಲಿ ಕೇಳಿದಾಗ ಸದಸ್ಯರಾದ ಶ್ರೀ ಪ್ರವೀಣ್ ಕುಮಾರ್ ರವರು ಅವರು ಕೇಳಿರುವ ಪ್ರಶ್ನೆಗಳನ್ನು ಚರ್ಚಿಸುವುದು ಬೇಡ, ಈ ಸಭೆಯಲ್ಲಿ ಬಿಪಿ, ಶುಗರ್ ಇರುವ ಸದಸ್ಯರು ಇದ್ದಾರೆ, ಅವರಿಗೆ ಅನುವು ಮಾಡಿಕೊಡಿ, ನೀವೆಲ್ಲರೂ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಾ, ನಿಮ್ಮ ಹಿಂದೆ ನಾವು ಇದ್ದೇವೆ. Close ಮಾಡಿ ಮತ್ತೆ ಅದೇ ಚರ್ಚೆಗೆ ಅವಕಾಶ ಕೊಡಬೇಡಿ ಎಂದಾಗ ಸದಸ್ಯರಾದ ಜಿ ಎಸ್ ಬಸವರಾಜು ರವರು ಕೇಳಿರುವ ಪ್ರಶ್ನೆಗೆ ಉತ್ತರ ಇದೆ ಎಂದು ನಿರ್ದೇಶಕರಾದ ಎಂ ಪಿ ಮಹೇಶ್ ರವರು ಸಭೆಗೆ ತಿಳಿಸಿದಾದ ಸದಸ್ಯರಾದ ಶ್ರಿ ಜಿ ಎಸ್ ಬಸವರಾಜು ರವರು ನನ್ನ ಪ್ರಶ್ನೆಗಳನ್ನು ಚರ್ಚಿಸಲು ಅವಕಾಶ ಇಲ್ಲ ಎಂದು ರೆಸಲ್ಯೂಷನ್ ಬರೆಸಿ. ನೀವು ಉತ್ತರ ಕೊಡಿ, ಉತ್ತರ ಕೊಡುವುದಾದರೇ ಮನೆಗೆ ಕಳುಹಿಸಬಹುದಾಗಿತ್ತು, General Body ಏಕೆ ಕರೆಯಬೇಕು ಎಂದು ಕೇಳಿದಾಗ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಈಗ ಉತ್ತರ ಕೊಡದಿದ್ದರೆ ಜಿ ಎಸ್ ಬಸವರಾಜು ರವರು ನಮ್ಮ ಮೇಲೆ ಇನ್ನೊಂದು aligation ಮಾಡುತ್ತಾರೆ, ಅವರ ಪ್ರಶ್ನೆಗಳಿಗೆ ಉತ್ತರ ಬರೆದಿದ್ದೇವೆ. accept ಮಾಡುವುದು ಬಿಡುವುದು ಅವರಿಗೆ ಸೇರಿದ್ದು, ಚರ್ಚೆಗೆ ಅವಕಾಶ ಇದೆ ಎಂದು ಸಭೆಗೆ ತಿಳಿಸಿದರು.

**1.** ಹಿಂದಿನ ಮೂರು ಸರ್ವ ಸದಸ್ಯರ ಸಭೆಗಳು ವರ್ಚುಯೆಲ್ ಮೂಲಕ ನಡೆದಿರುವುದು ಸರಿಯಷ್ಟೆ. ಮೂರು ವರ್ಚುಯೆಲ್ ಸಭೆಗಳು ನಡೆದ ದಿನದ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ವರ್ಷಾವಾರು ದಾಖಲೆ ಸಹಿತ ಚರ್ಚಿಸುವುದು.

**ಸಮಾಧಾನ:– ಕಳೆದ 3 ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಖರ್ಚುವೆಚ್ಚಗಳು ಈ ಕೆಳಕಂಡಂತಿರುತ್ತದೆ.**

| Financial Year | Approval taken in Budget | Expenditure Amount | Total amount Including GST |
|---|---|---|---|
| 2019-20 | 25,00,000/- | 3,33,050/- | 3,46,750/- |
| 2020-21 | 6,00,000/- | 3,52,402/- | 3,66,453/- |
| 2021-22 | 10,00,000/- | 5,15,764/- | 5,37,979/- |
| Total | 41,00,000/- | 12,01,216/- | 12,51,182/- |

**ಸದರಿ ಖರ್ಚುವೆಚ್ಚಗಳನ್ನು ಅದರ ಮುಂದಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.**

**2.** ಬ್ಯಾಂಕಿನ ಸದಸ್ಯರೊಬ್ಬರ ಸುಸ್ತಿಸಾಲಕ್ಕೆ ಸಂಬಂಧಿಸಿದಂತೆ, ಆಡಳಿತ ಮಂಡಳಿಯವರು ಸದಸ್ಯರ ಆಸ್ತಿಯನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡಿ, ಸದಸ್ಯರಿಗೆ ಮಾಡಿರುವ ಅನ್ಯಾಯದ ಕುರಿತು ಚರ್ಚೆಯಾಗಬೇಕು.

**ಸಮಾಧಾನ:– ತಮ್ಮ ಪ್ರಶ್ನೆಯಲ್ಲಿ ಸದಸ್ಯರೊಬ್ಬರ ಎಂದು ನಮೂದಿಸಿದ್ದು, ನಿರ್ದಿಷ್ಟ ವಿವರದೊಂದಿಗೆ ಕೇಂದ್ರ ಕಛೇರಿಗೆ ಲಿಖಿತ ರೂಪದಲ್ಲಿ ಕಳುಹಿಸಿದರೆ ಉತ್ತರ ನೀಡಲಾಗುವುದು.**

**3.** ಕಳೆದ ವರ್ಷ ಏಳು ಕೋಟಿ ರೂಪಾಯಿ ಮೀಸಲು ನಿಧಿಯನ್ನು, ಮಹಾಸಭೆಯ ಅನುಮತಿ ಪಡೆಯದೆ ಸುಸ್ತಿಸಾಲ ಕಡಿಮೆ ತೋರಿಸುವ ದುರದ್ದೇಶದಿಂದ, ಅಕ್ರಮ ಹಾಗೂ ನಿಯಮ ಬಾಹಿರವಾಗಿ ಸುಸ್ತಿಸಾಲದ ನಿಧಿಗೆ ವರ್ಗಾಯಿಸಿರುವುದು ಅಕ್ಷಮ್ಯವಾಗಿದ್ದು, ಕೂಡಲೇ ಮೀಸಲು ನಿಧಿಹಣವನ್ನು ಸುಸ್ತಿಸಾಲ ನಿಧಿಯಿಂದ ಮೀಸಲು ನಿಧಿಗೆ ಮತ್ತೆ ವರ್ಗಾವಣೆಗೆ ಸಂಬಂಧಿಸಿದಂತೆ ಚರ್ಚೆಯಾಗಬೇಕು.

**ಸಮಾಧಾನ:– ಬ್ಯಾಂಕಿನ ಯಾವುದೇ ನಿಧಿಯನ್ನು ನಿಯಮ ಬಾಹಿರವಾಗಿ ವರ್ಗಾಯಿಸಿರುವುದಿಲ್ಲ. 2020-21 ನೇ ಸಾಲಿನಲ್ಲಿ ಕಟ್ಟಡ ನಿಧಿ, ಪ್ರಚಾರ ನಿಧಿ ಮತ್ತು ಧರ್ಮದ ನಿಧಿಯಿಂದ ಒಟ್ಟು ರೂ. 7.00 ಕೋಟಿಗಳನ್ನು ಕರಡು ಸಾಲದ ನಿಧಿಗೆ ವರ್ಗಾಯಿಸಲಾಗಿದ್ದು, ವರದಿ ಸಾಲಿನಲ್ಲಿ ಸಮವರ್ತಿತ ಲೆಕ್ಕಪರಿಶೋಧಕರು, ಸನ್ನದ್ದು ಲೆಕ್ಕಪರಿಶೋಧಕರು ಮತ್ತು ಆರ್ ಬಿ ಐ ತಪಾಸಣೆ ಸಹ ನಡೆಸಿ ವರದಿ ಸಲ್ಲಿಸಿರುತ್ತಾರೆ ಮತ್ತು ಸದರಿ ವಿಷಯದ ಬಗ್ಗೆ 2020-21 ನೇ ಸಾಲಿನ ಸಾಮಾನ್ಯ ಸಭೆಯಲ್ಲಿ ಘಟನೋತ್ತರ ಅನುಮತಿ ಸಹ ಪಡೆಯಲಾಗಿರುತ್ತದೆ.**

ನಂತರ ಸದಸ್ಯರಾದ ಸಿ ಎಸ್ ನೀಲಕಂಠ ರವರು suspension order ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ, ಅಂತಹ ಸಂದರ್ಭದಲ್ಲಿ ಇವರ ಪತ್ರವನ್ನು ಓದುವ ಅವಶ್ಯಕತೆ ಇಲ್ಲ. Close ಮಾಡಿ ಮತ್ತೆ ಚರ್ಚೆನೂ ನಡೆಯುವುದಿಲ್ಲ. ಸುಮ್ಮನೆ unneccesary ಟೈಮ್ ವ್ಯರ್ಥ ಆಗುವುದು ಬೇಡ ಎಂದಾಗ ಅಧ್ಯಕ್ಷರಾದ ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿರವರು ಮತ್ತು ನಿರ್ದೇಶಕರಾದ ಎಂ ಪಿ ಮಹೇಶ್ ರವರು ಸಹ ಸಭೆಯ ಅನುಮೋದನೆ ಕೇಳಿದರು. ನಂತರ ಸಭೆಯಲ್ಲಿ ಅವರವರಲ್ಲಿಯೇ ಚರ್ಚೆ ಮಾಡಲು ಪ್ರಾರಂಭಿಸಿದಾಗ ನಿರ್ದೇಶಕರಾದ ಎಂ ಪಿ ಮಹೇಶ್ ರವರು ಅವರ ಎಲ್ಲಾ ಪ್ರಶ್ನೆಗಳಿಗೂ ಬ್ಯಾಂಕ್‌ನಿಂದ ಉತ್ತರ ಇದೆ ಅದನ್ನು ಬರೆಸುತ್ತೇವೆ ಎಂದಾಗ ಸದಸ್ಯರಾದ ಜಿ ಎಸ್ ಬಸವರಾಜು ರವರು ಸಭೆಯಲ್ಲಿ ಯಾವುದೇ ಚರ್ಚೆಯಿಲ್ಲದೇ ಅನುಮೋದನೆ ಪಡೆಯಲಾಗಿದೆ ಎಂದು ರೆಸಲ್ಯೂಷನ್ ಬರೆಸಿ ಎಂದು ಕೇಳಿದಾಗ ಬ್ಯಾಂಕಿನ ಅಧ್ಯಕ್ಷರಾದ ಹೆಚ್ ಎಂ ದಿವ್ಯಾನಂದ ಮೂರ್ತಿ ರವರು ನೀವು ಹೇಳಿದ್ದನ್ನೆಲ್ಲ ಮಾಡುವುದಕ್ಕೆ ಆಗುವುದಿಲ್ಲ ಎಂದಾಗ ಜಿ ಎಸ್ ಬಸವರಾಜು ರವರು ಚರ್ಚೆಗೆ ಅವಕಾಶ ಕೊಡಿ ಇಲ್ಲವಾದಲ್ಲಿ ಚರ್ಚೆಗೆ ಅವಕಾಶ ಇಲ್ಲ ಎಂದು ರೆಸಲ್ಯೂಷನ್ ಬರೆಸಿ ಎಂದಾಗ ಬ್ಯಾಂಕಿನ (ಪ್ರ) ಉಪಾಧ್ಯಕ್ಷರಾದ ಸಿ ಆರ್ ನಟರಾಜ್ ರವರು ಚರ್ಚೆಗೆ ಅವಕಾಶ ಇಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ, ನಿಮ್ಮನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ suspend ಮಾಡಿ ಎಂದು ಹೇಳುತ್ತಿದ್ದು, ನೀವು ಹೇಳಿದಂತೆಲ್ಲ ರೆಸಲ್ಯೂಷನ್ ಬರೆಯಲು ಸಾಧ್ಯವಿಲ್ಲ. ನೀವು ಕುಳಿತುಕೊಳ್ಳಿ, ಸಾಮಾನ್ಯ ಸಭೆಯಲ್ಲಿ ಸದಸ್ಯರು ನಿಮ್ಮ ಪತ್ರ ಚರ್ಚೆಗೆ ಬೇಡವೆಂದರೂ ಸಹ ನೀವು ಮಾತಾನಾಡುತ್ತೇನೆ ಎಂದರೆ ಮೂರ್ಖತನದ ಪರಮಾವಧಿ. ಎಂದು ಹೇಳಿದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜು ರವರು ಯಾರಿಗೆ ಕಾನೂನು ಗೊತ್ತಿಲ್ಲ, ಯಾರಿಗೆ ಬೈಲಾ ಗೊತ್ತಿಲ್ಲ ಅವರು ಮಾತ್ರ ಸಭೆಯಲ್ಲಿ ಈ ರೀತಿ ಮಾತಾನಾಡುವುದಕ್ಕೆ ಸಾಧ್ಯ, ನೀವು ಹೇಗೆ ಈ ಮಾತುಗಳನ್ನು ಒಪ್ಪುವುದಕ್ಕೆ ಸಾಧ್ಯ, ನೀವು ಆಡಳಿತ ಮಂಡಳಿಯವರಿಗೆ ಕಾನೂನು ಮತ್ತು ಬೈಲಾ ಗೊತ್ತಿರುವವರು ಇದನ್ನು ಹೇಗೆ ಒಪ್ಪಿಕೊಳ್ಳಲು ಸಾಧ್ಯ. ಹಾಗೇಯೇ ರೆಸಲ್ಯೂಷನ್ ಬರೆಸಿ, ನಿಮ್ಮ ಇಷ್ಟ ಬಂದ ಹಾಗೇ General Body ಮಾಡುವುದಾ? ಸದಸ್ಯರು, ಬೈಲಾ, ಕಾನೂನು ಏನು ಇಲ್ಲವೇ? ಎಂದಾಗ ಎಂ ಪಿ ಮಹೇಶ್ ರವರು ನಮ್ಮ ಮಾತೃ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಚಂದ್ರಕೀರ್ತಿ ರವರು ಅವರ ಪತ್ರಕ್ಕೆ ಬರೆದಿರುವ ಉತ್ತರವನ್ನು ಓದಲು ಸಲಹೆಯನ್ನು ಕೊಡುತ್ತಿದ್ದಾರೆ ಎಂದಾಗ ಸದಸ್ಯತ್ವದ ವಿಚಾರವಾಗಿ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿರಬೇಕಾದರೆ ಅದರ ಬಗ್ಗೆ ಸಭೆಯಲ್ಲಿ ಮಾತನಾಡುವುದು contempt of court, ಸಭೆಯಲ್ಲಿ ಸದಸ್ಯತ್ವದ ಬಗ್ಗೆ ಚರ್ಚೆ ಮಾಡಿರುವುದನ್ನು ರೆಸಲ್ಯೂಷನ್ ಬರೆಸಿ ಎಂದು ಹೇಳಿದರು.

**4.** ಬ್ಯಾಂಕಿನ ವ್ಯವಹಾರಗಳಿಗಾಗಿ ಬಳಸುತ್ತಿರುವ ಸಾಫ್ಟ್‌ವೇರ್ ನಿಭಾಯಿಸಲು ಮಾಡಿರುವ ಹಾಗೂ ಮಾಡುತ್ತಿರುವ ಖರ್ಚು, ರಾಜ್ಯದ ಯಾವುದೇ ಸಹಕಾರ ಬ್ಯಾಂಕ್ ಗಳಿಗಿಂತಲೂ ದುಬಾರಿ ಅಂತ ತಿಳಿದುಬಂದಿದ್ದು, ಈ ಖರ್ಚುಗಳಿಗೆ ಸಂಬಂಧಿಸಿದಂತೆ ವಿಸ್ತಾರವಾಗಿ ಸಭೆಯಲ್ಲಿ ಚರ್ಚಿಸಬೇಕು.

<u>ಸಮಾಧಾನ:–</u> ನಮ್ಮ ಬ್ಯಾಂಕಿನಲ್ಲಿ **Core Banking services, ATM facility, RTGS/NEFT Transactions, Clearing Transactions, Mobile Banking, Internet Banking, CKYC, SMS Alert, NACH, Positive Pay System, E-Commerce facility ಇನ್ನೂ ಮುಂತಾದ ಸೇವೆಗಳನ್ನು software provider ಕಡೆಯಿಂದ ತೆಗೆದುಕೊಳ್ಳುತ್ತಿದ್ದು ಅದಕ್ಕೆ ತಕ್ಕಂತೆ ವೆಚ್ಚವಾಗಿರುತ್ತದೆ. ಮಾನ್ಯ ಸದಸ್ಯರು ಬ್ಯಾಂಕಿನ ಗಾತ್ರ (29 ಶಾಖೆಗಳು) ಮತ್ತು ಸೌಲಭ್ಯಗಳನ್ನು ಹೋಲಿಕೆ ಮಾಡಿ ಆನಂತರ ಖರ್ಚಿನ ಬಗ್ಗೆ ಹೋಲಿಕೆ ಮಾಡಬೇಕು.**

**5.** ನಮ್ಮ ಬ್ಯಾಂಕಿನ ಸದಸ್ಯರನ್ನು ಬ್ಯಾಂಕಿನ ಸದಸ್ಯತ್ವದಿಂದ ತೆಗೆದು ಹಾಕಲು ಬ್ಯಾಂಕಿನ ಬೈಲಾ ಹಾಗೂ ಸಹಕಾರ ಕಾಯಿದೆಯನ್ನು ಆಡಳಿತ ಮಂಡಳಿಯವರು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಚರ್ಚೆಯಾಗಬೇಕು.

**ಸಮಾಧಾನ :– ಬ್ಯಾಂಕಿನ ಸದಸ್ಯರೊಬ್ಬರು ಸದರಿ ವಿಷಯವಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರು/ಉಪ ನಿಬಂಧಕರು ಮತ್ತು ಇತರ ಕಡೆ ಪ್ರಕರಣವನ್ನು ನಡೆಸುತ್ತಿದ್ದು, ಸದರಿ ಪ್ರಕರಣವು ಇನ್ನೂ ತೀರ್ಮಾನವಾಗಬೇಕಿರುವುದು ಬಾಕಿ ಇರುವುದರಿಂದ ನಾವು ಈ ಸಭೆಯಲ್ಲಿ ಸದರಿ ಪ್ರಕರಣ ಚರ್ಚಿಸಲು ಸಾಧ್ಯವಿರುವುದಿಲ್ಲ. ಆದಾಗ್ಯೂ ಇನ್ನು ಮುಂದೆ ನಾವು ಈ ನಿಟ್ಟಿನಲ್ಲಿ ನಿಗಧಿತ ಕಾರ್ಯವಿಧಾನವನ್ನು ಅನುಸರಿಸುತ್ತೇವೆ ಎಂದು ಈ ಮೂಲಕ ತಿಳಿಸುತ್ತಿದ್ದೇವೆ ಎಂದಾಗ ಸದಸ್ಯರಾದ ಜಿ ಎಸ್ ಬಸವರಾಜು ರವರು ಹಾಗದರೇ ಇಲ್ಲಿಯವರೆಗೂ ಚರ್ಚೆಗೆ ಏಕೆ ಅವಕಾಶ ಕೊಟ್ಟಿದ್ದಿರಾ ಎಂದು ಕೇಳಿದರು.**

**6.** ನಮ್ಮ ಬ್ಯಾಂಕಿನಿಂದ ಒಂದು ಕೋಟಿ ಹಾಗೂ ಅದಕ್ಕಿಂತಲೂ ಹೆಚ್ಚು ಸಾಲ ಪಡೆದು ದಿನಾಂಕ 31-03-2023 ಕ್ಕೆ ಒಟ್ಟು ಸುಸ್ತಿಯಾಗಿರುವ ಖಾತೆಗಳ ಸಂಖ್ಯೆ, ಸಾಲ ನೀಡಿರುವ ಶಾಖೆಯ ಹೆಸರು, ಸಾಲ ನೀಡಿದ ಉದ್ದೇಶ, ಸುಸ್ತಿ ಸಾಲಕ್ಕೆ ಪಡೆದಿರುವ ಭದ್ರತೆ, ಈ ಸುಸ್ತಿ ಸಾಲಗಳಿಗೆ ಸಂಬಂಧಿಸಿದಂತೆ, ಆಡಳಿತ ಮಂಡಳಿ ತೀರ್ಮಾನ, ಕಳೆದ ಐದು ವರ್ಷಗಳಲ್ಲಿ ಸುಸ್ತಿ ಸಾಲಗಳ ಅಸಲು ಅಥವಾ ಬಡ್ಡಿ ಮನ್ನಾ ಮಾಡಿರುವ ಬಗ್ಗೆ, ಈ ಸುಸ್ತಿ ಸಾಲಗಳನ್ನು ಸಹಕಾರ ಇಲಾಖೆ ಹಾಗೂ ಆರ್ ಬಿ ಐ ಮಾರ್ಗಸೂಚಿ ಅನ್ವಯ ನೀಡಲಾಗಿತ್ತೆ? ಹಾಗೂ ಸಾಲ ವಸೂಲಿಯ ಬಗ್ಗೆ ಚರ್ಚಿಸುವುದು.

**ಸಮಾಧಾನ :– ರೂ ಒಂದು ಕೋಟಿ ಮತ್ತು ಅದಕ್ಕಿಂತ ಹೆಚ್ಚು ಸಾಲ ಪಡೆದವರ ಶಾಖಾವಾರು ವಿವರ ಈ ಕೆಳಕಂಡಂತಿರುತ್ತದೆ.**

| SL NO | BRANCH NAME | NO OF A/C'S | OUT STANDING BALANCE | SECURITY VALUE |
|---|---|---|---|---|
| 1 | S S PURAM | 12 | 9.23 | 22.23 |
| 2 | BASAVESHWARA NAGAR | 3 | 4.90 | 14.02 |

**ಹೀಗೆ ನಮ್ಮ ಎಲ್ಲಾ 21 ಶಾಖೆಗಳಿಂದ ಒಟ್ಟು 162 ಅಕೌಂಟ್‌ಗಳಿದ್ದು, ರೂ.420 ಕೋಟಿ outstanding balance ಇದ್ದು, ಇದರ ಒಟ್ಟು security value ಇರುವುದು ರೂ.1002 ಕೋಟಿ, ಬ್ಯಾಂಕಿನಿಂದ ನೀಡುವ ಎಲ್ಲಾ ಸಾಲಗಳು, ಬಡ್ಡಿ ಮನ್ನಾ ಮತ್ತು ವಸೂಲಾತಿ ಎಲ್ಲಾ ಪ್ರಕ್ರಿಯೆಗಳು ಸಹಕಾರ ಇಲಾಖೆ ಹಾಗೂ ಆರ್.ಬಿ.ಐ ಮಾರ್ಗಸೂಚಿ ಅನ್ವಯ ರಚಿಸಿಕೊಂಡಿರುವ ಬ್ಯಾಂಕಿನ policy ಗಳಂತೆ ಕರ್ತವ್ಯ ನಿರ್ವಹಿಸುತ್ತಿದ್ದು, ವೈಯಕ್ತಿಕ ಖಾತೆಯ ವಿವರಗಳನ್ನು ನೀಡಲು ಸಾಧ್ಯವಿರುವುದಿಲ್ಲ. ಸಾಲಗಳ ಬಾಕಿಗೆ ತಕ್ಕಂತೆ ಆಸ್ತಿಗಳ ಭದ್ರತಾ ಮೌಲ್ಯ ಸಹ ಇದ್ದು ವಸೂಲಾತಿ ಮಾಡಲು ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಕಷ್ಟ ಪಟ್ಟು ಕೆಲಸ ಮಾಡುತ್ತಿದ್ದೇವೆ ಮತ್ತು ಸಾಲದ ಕಂತು ಮತ್ತು ಬಡ್ಡಿ ಎರಡನ್ನೂ ವಸೂಲಿ ಮಾಡುವ ಪ್ರಯತ್ನದಲ್ಲಿದ್ದೇವೆ.**

**7.** ದಿನಾಂಕ: 30-06-2023 ರಂದು ದಿನಪತ್ರಿಕೆಯಲ್ಲಿ ಪ್ರಕಟಿಸಿರುವ ಬ್ಯಾಂಕಿನ ಲೆಕ್ಕಪರಿಶೋಧಕರ ವರದಿ ಬಗ್ಗೆ ಚರ್ಚಿಸಿ.

**ಸಮಾಧಾನ :– ದಿನಾಂಕ 30-06-2023 ರಂದು ದಿನಪತ್ರಿಕೆಯಲ್ಲಿ ಬ್ಯಾಲೆನ್ಸ್ ಶೀಟ್ ಮತ್ತು ಅದರ ಎಲ್ಲಾ ವಿವರಗಳನ್ನು ನೀಡಿದ್ದು, ತಮಗೆ ನಿರ್ದಿಷ್ಟವಾಗಿ ಯಾವ ವಿಷಯದ ಬಗ್ಗೆ ವಿವರ ಬೇಕು ಎಂದು ತಿಳಿಸಿದರೆ ಅದಕ್ಕೆ ಉತ್ತರವನ್ನು ನೀಡಬಹುದು.**

**8.** ಬ್ಯಾಂಕಿನಲ್ಲಿ ಸುಸ್ತಿ ಸಾಲ ಜಾಸ್ತಿಯಾಗಿರುವುದು, ಸುಸ್ತಿ ಸಾಲದ ಕಾರಣದಿಂದ ಮಾನ್ಯ ಸದಸ್ಯರಿಗೆ ಡಿವಿಡೆಂಡ್ ನೀಡದಿರುವುದು ಹಾಗೂ ದಿನಪತ್ರಿಕೆಯ ಮುಖಪುಟದಲ್ಲಿ ಬ್ಯಾಂಕ್ ದಿವಾಳಿ ಅಂತ ಸುದ್ದಿಯಾಗಲು ಹಾಗೂ ಬ್ಯಾಂಕ್ ಆರ್ಥಿಕವಾಗಿ ಹಿನ್ನಡೆ ಅನುಭವಿಸಲು ಮುಖ್ಯ ಕಾರಣ ಆಡಳಿತ ಮಂಡಳಿಯವರು ಮಧ್ಯವರ್ತಿಗಳ ಮೂಲಕ ನೀಡಿರುವ ಸಾಲಗಳೇ ನೇರ ಕಾರಣ ಅನ್ನುವುದು ಬಲ್ಲ ಮೂಲಗಳಿಂದ ತಿಳಿದು ಬಂದಿದ್ದು, ಈ ವಿಷಯ ಸಭೆಯಲ್ಲಿ ಚರ್ಚಿಸಿ, ಈ ಅವ್ಯವಹಾರದ ಬಗ್ಗೆ ಸೂಕ್ತವಾದ ತನಿಖೆಯಾಗಬೇಕು.

**ಸಮಾಧಾನ :– ಮಾನ್ಯ ಷೇರುದಾರರು ವೃಥಾ ಆರೋಪಗಳನ್ನು ಮಾಡುವ ಬದಲು ಅದಕ್ಕೆ ಪೂರಕವಾದ ಪುರಾವೆಗಳನ್ನು ಒದಗಿಸಲು ಕೋರಿದೆ.**

**9.** ಘನ ನ್ಯಾಯಲಯದ ನಿರ್ದೇಶನದಂತೆ ಸದರಿ ಆಡಳಿತ ಮಂಡಳಿಯವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ಆಡಳಿತ ಮಂಡಳಿಯವರು ತನಿಖೆಗೆ ತಡೆಯಾಜ್ಞೆ ತಂದಿರುವ ಬಗ್ಗೆ ಚರ್ಚೆಯಾಗಬೇಕು.

**ಸಮಾಧಾನ:– ನ್ಯಾಯಾಲಯದಲ್ಲಿ ಇನ್ನೂ ತೀರ್ಮಾನವಾಗದೆ ನಡೆಯುತ್ತಿರುವ ಪ್ರಕರಣದ ಬಗ್ಗೆ ಸಭೆಯಲ್ಲಿ ಚರ್ಚಿಸಲು ಸಾಧ್ಯವಿರುವುದಿಲ್ಲ.**

**10.** ಮಾನ್ಯ ಸಹಕಾರ ಸಂಘಗಳ ನಿಬಂಧಕರು ಸದರಿ ಆಡಳಿತ ಮಂಡಳಿಯವರ ವಿರುದ್ಧ ಸಹಕಾರ ಕಾಯಿದೆ **1959** ಅಧಿನಿಯಮ **64** ರ ಅಡಿಯಲ್ಲಿ ತನಿಖೆಗೆ ಆದೇಶಿಸಿರುವುದರ ಕುರಿತು ವಿಸ್ತಾರವಾಗಿ ಚರ್ಚಿಸುವುದು.

**ಸಮಾಧಾನ :– ಇನ್ನೂ ತೀರ್ಮಾನವಾಗದೆ ನಡೆಯುತ್ತಿರುವ ತನಿಖೆಯ ಬಗ್ಗೆ ಸಭೆಯಲ್ಲಿ ಚರ್ಚಿಸಲು ಸಾಧ್ಯವಿರುವುದಿಲ್ಲ.**

**11.** ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿರುವ ಅಧಿಕಾರಿಗಳನ್ನು ಬ್ಯಾಂಕಿನ ಸಲಹೆಗಾರರನ್ನಾಗಿ ನೇಮಿಸಿರುವುದು ಸರಿಯಷ್ಟೆ. ಇವರ ನೇಮಕದ ನಂತರ ಬ್ಯಾಂಕಿಗೆ ಆಗಿರುವ ಒಳಿತು ಹಾಗೂ ಕೆಡಕುಗಳ ಬಗ್ಗೆ ಚರ್ಚಿಸಿ.

**ಸಮಾಧಾನ :– ಬ್ಯಾಂಕಿನಲ್ಲಿ ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವ ಉದ್ದೇಶ, ಒಳ್ಳೆಯ ಗುಣಮಟ್ಟದ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆಯುವುದು. ನಮ್ಮ ಬ್ಯಾಂಕಿನ ಸಲಹೆಗಾರರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುಮಾರು 40 ವರ್ಷಗಳ ಅನುಭವ ಹೊಂದಿದ್ದು, State Bank ನಲ್ಲಿ General Manager ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದು ಹಾಗೂ State bank ನಲ್ಲಿ ಪೂರ್ಣಾವಧಿ ನಿರ್ದೇಶಕರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ. ನಮ್ಮ ಬ್ಯಾಂಕಿನ ವ್ಯವಸ್ಥೆ ಮತ್ತು ಕಾರ್ಯವಿಧಾನಗಳನ್ನು ಬಲಪಡಿಸಲು ಅವರ ಕೊಡುಗೆ ಬಹಳವಾಗಿದ್ದು, ಆರ್ ಬಿ ಐ ಮತ್ತು ಆರ್ ಸಿ ಎಸ್ ರವರು ನಿರ್ದೇಶಿಸಿರುವಂತೆ ಬ್ಯಾಂಕಿನ ವಿವಿಧ ರೀತಿಯ ಪಾಲಿಸಿಗಳನ್ನು ತಯಾರಿಸಲು ಸಹಾಯ ಮಾಡಿದ್ದು ಬ್ಯಾಂಕಿಂಗ್ ವಿಚಾರಗಳು ಮತ್ತು ಕಾನೂನು ಅಂಶಗಳ ಬಗ್ಗೆ ನಮ್ಮ ಬ್ಯಾಂಕಿನ ಅಧಿಕಾರಿ/ ಸಿಬ್ಬಂದಿಗಳಿಗೆ ಮತ್ತು ಆಡಳಿತ ಮಂಡಳಿ ನಿರ್ದೇಶಕರಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.**

**12.** ಈಗಾಗಲೇ ಬ್ಯಾಂಕಿಗೆ 60 ವರ್ಷವಾಗಿದೆ. ಅಂದರೆ ಬ್ಯಾಂಕಿನ ವಜ್ರಮಹೋತ್ಸವ ಆಗಬೇಕಿತ್ತು. ಇದಕ್ಕೆ ಸಂಬಂಧಪಟ್ಟ ವಜ್ರಮಹೋತ್ಸವ ನಿಧಿ ಕೂಡ ಇದೆ. ಇಷ್ಟಾದರೂ ಆಡಳಿತ ಮಂಡಳಿ ವಜ್ರಮಹೋತ್ಸವದ ಬಗ್ಗೆ ಎಲ್ಲಿಯೂ ಪ್ರಸ್ತಾಪಿಸದಿರುವುದು ಅಚ್ಚರಿಯ ಸಂಗತಿ ಅನ್ನುವುದರ ಬಗ್ಗೆ ಚರ್ಚೆಯಾಗಬೇಕು.

**ಸಮಾಧಾನ :– ಬ್ಯಾಂಕು ಹಾಲಿ SAF ನಲ್ಲಿರುವುದರಿಂದ ಸುಸ್ತಿ ಸಾಲಗಳ ವಸೂಲಾತಿಗೆ ಹೆಚ್ಚಿನ ಗಮನ ಹರಿಸಿ SAF ನಿಂದ ಹೊರಬರಲು ಬಹಳ ಶ್ರಮಪಡುತ್ತಿದ್ದು, SAF ನಿಂದ ಹೊರಬಂದ ನಂತರ ಮುಂದಿನ ವರ್ಷದಲ್ಲಿ ವಜ್ರ ಮಹೋತ್ಸವವನ್ನು ಆಚರಿಸುವ ಬಗ್ಗೆ ಪರಿಶೀಲಿಸಲಾಗುವುದು.**

**13.** ಕಳೆದ ವರ್ಚುಯೆಲ್ ಸರ್ವಸದಸ್ಯರ ಸಭೆಯ ಆರಂಭದ ಸಮಯ ಅಂದರೆ **11.00** ಗಂಟೆಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ, ಸದಸ್ಯರ ಹೆಸರು ಹಾಗೂ ಸದಸ್ಯತ್ವ ಸಂಖ್ಯೆ ಸಹಿತ ಸಂಬಂಧಿಸಿದ ದಾಖಲೆ ನೀಡಲು ವಿನಂತಿ.

**ಸಮಾಧಾನ :– ಕಳೆದ ವರ್ಚುಯೆಲ್ ಸಭೆಯಲ್ಲಿ 1723 ಸದಸ್ಯರು ರಿಜಿಸ್ಟ್ರೇಷನ್ ಮಾಡಿಕೊಂಡು ಭಾಗವಹಿಸಿದ್ದು ಸಹಕಾರ ಕಾಯ್ದೆ ಪ್ರಕಾರ ಕೋರಂ ಆಗಿರುತ್ತದೆ.**

**14.** ದಿನಾಂಕ **24-03-2023** ರಂದು ನಾನು ಬ್ಯಾಂಕಿಗೆ ಬರೆದಿರುವ ಪತ್ರದ ಬಗ್ಗೆ ಚರ್ಚೆಯಾಗಬೇಕು.

**ಸಮಾಧಾನ :–ನೀವು ಬ್ಯಾಂಕಿಗೆ ಬರೆದಿರುವ ಪತ್ರಕ್ಕೆ ಉತ್ತರವನ್ನು ಈಗಾಗಲೇ ತಮಗೆ ಕಳುಹಿಸಿ ಕೊಡಲಾಗಿದೆ.**

**15.** ದಿನಾಂಕ **19-06-2023** ರಂದು ನಾನು ಬ್ಯಾಂಕಿಗೆ ಬರೆದಿರುವ ಪತ್ರದ ಬಗ್ಗೆ ಚರ್ಚಿಸಿ.

**ಸಮಾಧಾನ :– ನೀವು ಬ್ಯಾಂಕಿಗೆ ಬರೆದಿರುವ ಪತ್ರಕ್ಕೆ ಉತ್ತರವನ್ನು ಈಗಾಗಲೇ ತಮಗೆ ಕಳುಹಿಸಲಾಗಿದೆ.**

**16.** ದಿನಾಂಕ **03-05-2023** ರಂದು ಬ್ಯಾಂಕಿನ ಕಾರ್ಯನಿವಾಹಣಾಧಿಕಾರಿ ನನಗೆ ಬರೆದಿರುವ ಪತ್ರದ ಬಗ್ಗೆ ಚರ್ಚಿಸಿ.

**ಸಮಾಧಾನ :– ದಿನಾಂಕ 03-05-2023 ರಂದು ಬ್ಯಾಂಕಿನಿಂದ ಬರೆದಿರುವ ಪತ್ರ ತಮ್ಮ ಪತ್ರಕ್ಕೆ ಉತ್ತರವಾಗಿದ್ದು, ಅದನ್ನು ಸಭೆಯಲ್ಲಿ ಚರ್ಚಿಸುವ ಅಗತ್ಯವಿರುವುದಿಲ್ಲ.**

**17.** ಹಿಂದಿನ ಮಹಾಸಭೆಯಲ್ಲಿ ರಾಜಾಜಿನಗರ ಶಾಖೆಯ ಒಂದು ಸುಸ್ತಿ ಸಾಲದ ಖಾತೆಗೆ ಸಂಬಂಧಿಸಿದಂತೆ ಶೇ.5 ರ ಸರಳ ಬಡ್ಡಿಯನ್ನು ಮನ್ನಾ ಮಾಡಿ, ಆಡಳಿತ ಮಂಡಳಿ ಬ್ಯಾಂಕಿಗೆ ನಷ್ಟ ಉಂಟು ಮಾಡಿರುವ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ಅಂದಿನ ಬ್ಯಾಂಕಿನ ಉಪಾಧ್ಯಕ್ಷ ಹಾಗೂ ಇಂದಿನ ಬ್ಯಾಂಕಿನ ಅಧ್ಯಕ್ಷರು ಸರಳ ಬಡ್ಡಿಯನ್ನು ಕಡಿಮೆ ಹಾಗೂ ವಜಾಮಾಡುವ ಅಧಿಕಾರ ಆಡಳಿತಮಂಡಳಿಗಿದೆ ಅಂತ ತಿಳಿಸಿದ್ದು, ಈ ರೀತಿಯ ತೀರ್ಮಾನ ತೆಗೆದುಕೊಳ್ಳಲು ಬ್ಯಾಂಕಿನ ಬೈಲಾದಲ್ಲಿ ಅಥವಾ ಸಹಕಾರ ಇಲಾಖೆಯ ಆದೇಶ, ಅಧಿಸೂಚನೆ ಅಥವಾ ಸುತ್ತೋಲೆಗೆ ಸಂಬಂಧಪಟ್ಟ ದಾಖಲೆಗಳನ್ನು ಬ್ಯಾಂಕಿನ ದೃಢಿಕರಣದೊಂದಿಗೆ ನೀಡುವುದು. ಸದರಿ ದಾಖಲೆ ನೀಡಲು ವಿಫಲರಾದಲ್ಲಿ, ಆಡಳಿತ ಮಂಡಳಿಯವರ ಇಂತಹ ನೇರ ತೀರ್ಮಾನಗಳಿಂದ ಬ್ಯಾಂಕಿಗೆ ಆಗಿರುವ ನಷ್ಟಕ್ಕೆ ನೇರವಾಗಿ ಆಡಳಿತ ಮಂಡಳಿಯೇ ಸಂಪೂರ್ಣ ಹೊಣೆಗಾರರೆಂದು ಮಹಾಸಭೆಯ ನಡಾವಳಿಯಲ್ಲಿ ದಾಖಲಿಸುವುದು.

**ಸಮಾಧಾನ :– ಬ್ಯಾಂಕು ಎಲ್ಲಾ ಸಾಲಗಳ ವಸೂಲಾತಿಗಳನ್ನು ಬ್ಯಾಂಕಿನ Loan Recovery Policy ಪ್ರಕಾರವೇ ಮಾಡಿದ್ದು, ಇದಕ್ಕೆ ಸಂಬಂಧಿಸಿದ ವಿವರಗಳನ್ನು ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಮುದ್ರಿಸಲಾಗಿದೆ. ಬ್ಯಾಂಕಿನ ವಿವರಗಳು ಮತ್ತು ಪಾಲಿಸಿಗಳು ಸಾರ್ವಜನಿಕ ದಾಖಲೆಗಳಲ್ಲದ ಕಾರಣ ಎಲ್ಲರಿಗೂ ನೀಡಲು ಸಾಧ್ಯವಿರುವುದಿಲ್ಲ.**

**18. 2016** ರಿಂದ **2022** ರ ಪ್ರತಿ ವರ್ಷದ ಮಾರ್ಚ್ ತಿಂಗಳಲ್ಲಿ ಆಡಳಿತ ಮಂಡಳಿ ಸುಸ್ತಿ ಸಾಲ ಕಡಿಮೆ ತೋರಿಸುವ ದುರುದ್ದೇಶದಿಂದ, ಸುಸ್ತಿಯಾಗಿರುವ ಸಾಲಗಳಿಗೆ ಮತ್ತಷ್ಟು ಸಾಲ ನೀಡಿರುವುದು, ಸುಸ್ತಿಯಾದ ಸಾಲದ ಖಾತೆಗಳಿಗೆ ಬೇನಾಮಿ ಹಣ ಜಮಾ ಆಗಿರುವುದು, ಇಂತಹ ಸಾಲಗಾರರಿಗೆ ಏಪ್ರಿಲ್ ತಿಂಗಳಲ್ಲಿ ಹೊಸದಾಗಿ ಸಾಲ ಮಂಜೂರು ಮಾಡಿರುವುದು, ಸುಸ್ತಿಯಾಗಿರುವ ಹಾಗೂ ಹಲವು ಸಾಲಗಾರರಿಗೆ ಸಾಲದ ಅವಶ್ಯಕತೆ ಇಲ್ಲದಿದ್ದರೂ ಸಾಲ ಮಂಜೂರು ಮಾಡಿ, ಮಂಜೂರಾದ ಸಾಲದ ಹಣ ಸಾಲಗಾರರಿಗೆ ನೀಡದೆ, ಸುಸ್ತಿಯಾಗಿರುವ ಹಲವಾರು ಖಾತೆಗಳಿಗೆ ಅಕ್ರಮವಾಗಿ ವರ್ಗಾಯಿಸಿರುವುದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಸಭೆಯಲ್ಲಿ ಚರ್ಚಿಸುವುದಲ್ಲದೆ ಈ ವಿಚಾರವಾಗಿ ಸೂಕ್ತ ತನಿಖಾ ಸಂಸ್ಥೆಯಿಂದ ತನಿಖೆ ಒಳಪಡಿಸಬೇಕೆಂದು ಆಗ್ರಹಿಸುತ್ತಿದ್ದೇನೆ.

**ಸಮಾಧಾನ :– ನೀವು ಕೋರಿರುವ ಮಾಹಿತಿ ಹಿಂದಿನ ವರ್ಷಗಳದಾಗಿದ್ದು, ಸದರಿ ವಿವರಗಳನ್ನು ಆಯಾ ವರ್ಷದಲ್ಲಿ ಸಮವರ್ತಿತ ಲೆಕ್ಕಪರಿಶೋಧಕರು, ಸನ್ನದ್ದು ಲೆಕ್ಕಪರಿಶೋಧಕರು ಮತ್ತು ಆರ್ ಬಿ ಐ ತಪಾಸಣೆ ಸಹ ನಡೆಸಿ ವರದಿ ಸಲ್ಲಿಸಿದ್ದು ಸದರಿ**

**ವರದಿಯನ್ನು ಆಯಾ ವರ್ಷದ ಲೆಕ್ಕ ಪರಿಶೋಧನಾ ವರದಿಯಲ್ಲಿ ಮುದ್ರಿಸಿದ್ದು, ಸದರಿ ವರದಿಗಳನ್ನು ಪರಿಶೀಲಿಸಬಹುದಾಗಿರುತ್ತದೆ.**

**19.** ಸಭೆ, ಸೆಮಿನಾರ್, ತರಬೇತಿ ಮತ್ತು ಇತರೆ ಬಾಬ್ತಿಗೆ ರೂ. ಒಂದು ಕೋಟಿ ಮಂಜೂರಾತಿ ಪಡೆದು ರೂ.33,83,25,953=00 (ಮೂವತ್ತ ಮೂರು ಕೋಟಿ ಎಂಬತ್ತ ಮೂರು ಲಕ್ಷದ ಇಪ್ಪತ್ತೈದು ಸಾವಿರದ ಒಂಬೈನೂರ ಐವತ್ತ ಮೂರು) ರೂಪಾಯಿಗಳನ್ನು ಖರ್ಚು ಮಾಡಿದ್ದು, ಹೆಚ್ಚುವರಿ ಖರ್ಚಿನ ಬಗ್ಗೆ ಮಹಾಸಭೆಯ ಅನುಮೋದನೆಗೆ ಮಂಡಿಸಿರುವುದು ಸರಿಯಷ್ಟೇ ಈ ಖರ್ಚಿಗೆ ಸಂಬಂಧಪಟ್ಟಂತ ಸಂಪೂರ್ಣ ದಾಖಲೆಗಳೊಂದಿಗೆ ಮಹಾಸಭೆಯಲ್ಲಿ ಚರ್ಚಿಸುವುದು ಹಾಗೂ ಈ ಖರ್ಚಿಗೆ ಸಂಬಂಧಪಟ್ಟಂತೆ ಅನುಮೋದನೆಗೆ ನನ್ನ ಸಂಪೂರ್ಣ ವಿರೋಧವಿದೆ.

**ಸಮಾಧಾನ :– ಈ ಬಗ್ಗೆ ಆಡಳಿತ ವರದಿ ಪುಟ ಸಂಖ್ಯೆ 29 ರಲ್ಲಿ ವಿವರವಾಗಿ ನಮೂದಿಸಲಾಗಿದೆ ಹಾಗೂ ಈಗಾಗಲೇ ಈ ವಿಚಾರವನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ.**

**20.** ಸುಸ್ತಿ ಸಾಲಕ್ಕೆ ಸಂಬಧಿಸಿದಂತೆ ಆಡಳಿತ ಮಂಡಳಿಯವರು ಎ.ಆರ್.ಸಿ.ಐ.ಎಲ್. ಮಧ್ಯವರ್ತಿ ಸಂಸ್ಥೆಯ ಜೊತೆ ಮಾಡಿಕೊಂಡಿರುವ ಒಪ್ಪಂದದಿಂದಾಗಿ ರೂ. 23 ಕೋಟಿ ಅಸಲು ಮತ್ತು ರೂ. 9.60 ಕೋಟಿ ಬಡ್ಡಿ ಸೇರಿ ಒಟ್ಟು ರೂ. 32.60 ಕೋಟಿ ಬ್ಯಾಂಕಿಗೆ ನಷ್ಟವಾಗಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಿಂದಿನ ಮಹಾಸಭೆಯಲ್ಲಿ ಪಡೆದಿರುವ ಅನುಮತಿ, ಆಡಳಿತ ಮಂಡಳಿ ಸಭೆಯ ತೀರ್ಮಾನದ ಪ್ರತಿ, ಆಡಳಿತ ಮಂಡಳಿ ಸಭೆಯಲ್ಲಿ ಭಾಗಿಯಾಗಿದ್ದ ನಿರ್ದೇಶಕರ ಸಂಖ್ಯೆ ಮತ್ತು ಹೆಸರು, ಮಧ್ಯವರ್ತಿ ಸಂಸ್ಥೆಯ ಹೆಸರು ಮತ್ತು ವಿಳಾಸ, ಮಧ್ಯವರ್ತಿ ಸಂಸ್ಥೆಯ ಜೊತೆ ಮಾಡಿಕೊಂಡಿರುವ ಒಪ್ಪಂದಕ್ಕೆ ಸಂಬಂಧಪಟ್ಟ ದಾಖಲಾತಿಗಳು, ಸುಸ್ತಿ ಸಾಲಗಾರನ ಹೆಸರು ಮತ್ತು ಖಾತೆ ಸಂಖ್ಯೆ, ಸಾಲ ನೀಡಿದ ಶಾಖೆಯ ಹೆಸರು, ಸಾಲಗಾರರಿಂದ ಭದ್ರತೆಗಾಗಿ ಪಡೆದಿರುವ ಸ್ಥಿರಾಸ್ತಿಯ ಮಾರುಕಟ್ಟೆ ಬೆಲೆ, ಈ ಸಾಲಕ್ಕೆ ಸಂಬಂಧಿಸಿದಂತೆ ಆಗಿರುವ ಕಾನೂನಾತ್ಮಕ ನಡವಳಿಕೆ, ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರ್.ಬಿ.ಐ. ಹಾಗೂ ಸಹಕಾರ ಇಲಾಖೆಯ ಜೊತೆ ಆಡಳಿತ ಮಂಡಳಿಯವರ ಪತ್ರ ವ್ಯವಹಾರ ಹಾಗೂ ಅನುಮೋದನೆ, ಈ ಮಧ್ಯವರ್ತಿ ಸಂಸ್ಥೆ ಹೊರತುಪಡಿಸಿ ಬೇರೆ ಯಾವುದಾದರೂ ಮಧ್ಯವರ್ತಿ ಸಂಸ್ಥೆಯ ಜೊತೆ ವ್ಯವಹರಿಸಿದ್ದರೆ ಅದಕ್ಕೆ ಸಂಬಂಧಿಸಿದ ದಾಖಲೆ, ರೂ. 32.60 ಕೋಟಿ ಬೃಹತ್ ಮೊತ್ತ ಬ್ಯಾಂಕಿಗೆ ನಷ್ಟವಾಗುವಂತಹ ತೀರ್ಮಾನ ತೆಗೆದುಕೊಳ್ಳಲು ಬ್ಯಾಂಕಿನ ಬೈಲಾದಲ್ಲಿರುವ ಅವಕಾಶ, ಸಹಕಾರ ಇಲಾಖೆ ಮತ್ತು ಆರ್.ಬಿ.ಐ. ನೀಡಿರುವ ಅನುಮತಿ, ಆದೇಶ, ಸುತ್ತೋಲೆ, ಮಹಾಸಭೆಯಲ್ಲಿ ಮಂಡಿಸಿ ಚರ್ಚಿಸುವುದು.

**ಸಮಾಧಾನ :– ಈ ಬಗ್ಗೆ ಲೆಕ್ಕಪರಿಶೋಧನಾ ವರದಿ ಪುಟ ಸಂಖ್ಯೆ** 49 **ಮತ್ತು** 50 **ರಲ್ಲಿ ವಿವರವಾಗಿ ನಮೂದಿಸಲಾಗಿದೆ ಮತ್ತು ಇದರ ಬಗ್ಗೆ ಬೆಳಿಗ್ಗೆಯಿಂದ ಚರ್ಚೆ ಕೂಡ ನಡೆದಿದೆ.**

**21.** 60ನೇ ಸರ್ವ ಸದಸ್ಯರ ಸಭೆಯ ಆಮಂತ್ರಣ ಪತ್ರಿಕೆ ಅಥವಾ ಸೂಚನಾ ಪತ್ರ ಇಂದಿನವರೆಗೂ ನನಗೆ ತಲುಪಿರುವುದಿಲ್ಲ. ಈ ನೋಟಿಸ್ ಕಳುಹಿಸಿರುವುದಕ್ಕೆ ಬ್ಯಾಂಕಿನಲ್ಲಿರುವ ದಾಖಲೆಗಳೊಂದಿಗೆ ಚರ್ಚಿಸ ಬಯಸುತ್ತೇನೆ.

**ಸಮಾಧಾನ :– ಸಭೆಯ ಆಮಂತ್ರಣ ಪತ್ರಿಕೆಯನ್ನು ದಿನಾಂಕ** 14-08-2023 **ರಂದು ಎಲ್ಲಾ ಸದಸ್ಯರಿಗೂ ಅವರು ನೀಡಿರುವ ವಿಳಾಸಕ್ಕೆ ಕಳುಹಿಸಲಾಗಿದೆ.**

**6. ಬ್ಯಾಂಕಿನ ಸದಸ್ಯರಾದ ಶ್ರೀ ಕೆ ಎಸ್ ದಯಾನಂದ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರ.**

ತಮ್ಮ ಪತ್ರದಲ್ಲಿನ ವಿಷಯದ ಸಂಬಂಧವಾಗಿ ತಾವು ಕೋರಿರುವ ಮಾಹಿತಿ ಈ ಕೆಳಕಂಡಂತಿದೆ ಎಂದು ಸಭೆಯಲ್ಲಿ ಶ್ರೀ ದಯಾನಂದ ರವರು ಇದ್ದಾರಾ ಎಂದು ಕೇಳಿ ಪತ್ರ ಮುಂದುವರೆಸಿದರು.

**1.** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದೈನಂದಿನ ದಿನಪತ್ರಿಕೆಯಲ್ಲಿ ಬ್ಯಾಂಕಿನ ಬಗ್ಗೆ ಕೆಲವು ವ್ಯಕ್ತಿಗಳು ಬ್ಯಾಂಕಿನ ವ್ಯವಹಾರ ವಿರುದ್ದವಾಗಿ ಅಪಪ್ರಚಾರ ನಡೆಸುತ್ತಿರುವುದರಿಂದ ಬ್ಯಾಂಕಿನ ವ್ಯವಹಾರಕ್ಕೆ ಹಾನಿಯುಂಟಾಗುತ್ತಿರುವುದರಿಂದ ಅವರ ವಿರುದ್ದ ಈ ರೀತಿ ಪ್ರಚಾರ ಮಾಡುವ ವ್ಯಕ್ತಿಗಳ ವಿರುದ್ದ ದಾವೆ ಹೂಡಿರುವುದಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತೀರಿ. ಆದ್ದರಿಂದ ಈ ಬಗ್ಗೆ ಬ್ಯಾಂಕಿನ ಸದಸ್ಯರ ಮೇಲೆ ದಾವೆ ಹೂಡಿರುವ ವಿವರಗಳನ್ನು ಒದಗಿಸಬೇಕೆಂದು ಕೋರುತೇನೆ.

**ಸಮಾಧಾನ :– ಬ್ಯಾಂಕಿನ ಬಗ್ಗೆ ಅಪಪ್ರಚಾರ ನಡೆಸುತ್ತಿರುವ ಸದಸ್ಯರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದ್ದು ಸದರಿ ವಿಚಾರವು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವುದರಿಂದ ಅದರ ವಿವರಗಳನ್ನು ನೀಡಲು ಸಾಧ್ಯವಿರುವುದಿಲ್ಲ.**

**2.** ಬ್ಯಾಂಕಿನ ಸದಸ್ಯರು ಸಾಲ ಪಡೆದು ಕೆಲವು ಕಾರಣಗಳಿಂದ ಸಾಲ ವಸೂಲಾತಿಯಲ್ಲಿ ವ್ಯತ್ಯಾಸವಾಗಿ ಮತ್ತು ಬ್ಯಾಂಕಿನ ವ್ಯವಹಾರಗಳನ್ನು ಸ್ವಯಂ ಲಾಭಕ್ಕಾಗಿ ಉಪೋಗಿಸಿಕೊಂಡ ನಂತರ ಎಷ್ಟು ಸದಸ್ಯರು ಬ್ಯಾಂಕಿನ ವಿರುದ್ಧ ವಿವಿಧ ದಾವೆ ಹೂಡಿರುವ ಮಾಹಿತಿಯನ್ನು ಕೊಡಲು ಕೋರಿದೆ ಮತ್ತು ಇದಕ್ಕೆ ವಿವರವಾದ ಮಾಹಿತಿಯನ್ನು ಕೋರಿದೆ.

**ಸಮಾಧಾನ :– ಅಡಮಾನ ಮಾಡಿರುವ ಸ್ವತ್ತನ್ನು ಖಾಲಿ ಮಾಡಿಸಿ ಬ್ಯಾಂಕಿನ ವಶಕ್ಕೆ ಪಡೆಯುವುದನ್ನು ಮುಂದೂಡುವ ಉದ್ದೇಶದಿಂದ ಕೆಲವು ಸಾಲಗಾರರು ಬ್ಯಾಂಕಿನ ವಿರುದ್ಧ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದಿರುವ 23 ಪ್ರಕರಣಗಳು ಚಾಲ್ತಿಯಲ್ಲಿವೆ.**

**3.** ಲೆಕ್ಕಪರಿಶೋಧಕರ ವರದಿ ಪುಸ್ತಕದ ಪುಟ ಸಂಖ್ಯೆ 61 ರಲ್ಲಿ ನಮೂದಿಸಿರುವಂತೆ ಸಾಲದ ಬಾಕಿ ಮೊತ್ತ ಮತ್ತು ಮೂಲ ಬಡ್ಡಿಯಲ್ಲಿ ನೀಡಲಾಗಿರುವ ರಿಯಾಯಿತಿಯ ಮೊತ್ತವನ್ನು ಸರ್ವ ಸದಸ್ಯರ ಸಭೆಯಲ್ಲಿ ಮತ್ತು ಕರ್ನಾಟಕ ಸರ್ಕಾರ ಸಹಕಾರ ಇಲಾಖೆಯಿಂದ ಅನುಮತಿಯನ್ನು ಪಡೆದಿರುವ ಹಾಗೂ ರಿಯಾಯಿತಿ ಪಡೆದ ಸಾಲಗಾರರ ವಿವರಗಳನ್ನು ನೀಡಬೇಕೆಂದು ಕೋರಿದೆ.

**ಸಮಾಧಾನ :– ಸಂದರ್ಭಕ್ಕೆ ಅನುಗುಣವಾಗಿ ಬ್ಯಾಂಕಿನ ಅನುತ್ಪಾದಕ (NPA) ಸಾಲದ ಖಾತೆಗಳನ್ನು ಚುಕ್ತಾ ಮಾಡಿಕೊಳ್ಳಲು ಸಾಲದ ಮೂಲ ಬಡ್ಡಿ, ದಂಡ ಬಡ್ಡಿಗಳಿಗೆ ರಿಯಾಯಿತಿ ನೀಡಲಾಗಿದ್ದು ಇದು ಆರ್.ಬಿ.ಐ ನಿರ್ದೇಶನದಂತೆ ಬ್ಯಾಂಕಿನ ಕಾರ್ಯಕಾರಿ ಮಂಡಳಿಯಿಂದ ಅನುಮೋದಿತಗೊಂಡ "ಸಾಲ ವಸೂಲಾತಿ ನಿಯಮ" ದ ಅಡಿಯಲ್ಲಿ ಕ್ರಮವಹಿಸಲಾಗಿದೆ.**

**4.** ಲೆಕ್ಕಪರಿಶೋಧಕರ ವರದಿ ಪುಸ್ತಕದ ಪುಟ ಸಂಖ್ಯೆ 62ರಲ್ಲಿ ಬ್ಯಾಂಕಿನಿಂದ SARFAESI ACT 2002 ಅನ್ವಯ 11 ಆಸ್ತಿಗಳ ಮೊತ್ತ ರೂ. 22.47 ಕೋಟಿಗಳಷ್ಟು. ಈ ಆಸ್ತಿಗಳನ್ನು ಬಹಿರಂಗ ಹರಾಜು ಮಾಡಿ ಸಾಲ ವಸೂಲಾತಿ ಮಾಡಲು ಇರುವ ನ್ಯೂನತೆಗಳನ್ನು ವಿವರವಾಗಿ ತಿಳಿಸುವುದು.

**ಸಮಾಧಾನ :– ಪುಟ ಸಂಖ್ಯೆ 62 ರಲ್ಲಿ ತಿಳಿಸಿರುವ SARFAESI ಕಾಯಿದೆಯಡಿಯಲ್ಲಿ ಹರಾಜು ಮಾರಾಟಕ್ಕಿಟ್ಟಿರುವ ಒಟ್ಟು 11 ಆಸ್ತಿಗಳ ಪೈಕಿ 2 ಖಾತೆಗಳು update ಆಗಿವೆ 3 ಪ್ರಕರಣಗಳಿಗೆ ನ್ಯಾಯಾಲಯದ ತಡೆಯಾಜ್ಞೆಯಿದೆ 1 ಸಾಲದ ಖಾತೆಗೆ update ಆಗುವಷ್ಟು ಹಣ ಸಂದಾಯವಾಗಿದ್ದು ಒಂದು ತಿಂಗಳೊಳಗಾಗಿ ಸಾಲ ಚುಕ್ತಗೊಳ್ಳುವುದು 1 ಸಾಲದ ಖಾತೆಗೆ ಅಡಮಾನವಾಗಿರುವ ಸ್ಥಿರಾಸ್ತಿಯ ಹರಾಜು ಮಾರಾಟ ಸ್ಥಿರೀಕರಣವಾಗಿದ್ದು (sale confirmation) ಪೂರ್ಣ ಮೊತ್ತವು ಬ್ಯಾಂಕಿಗೆ ಸಂದಾಯವಾಗಿದೆ ಇನ್ನು ಉಳಿದ 4 ಸ್ಥಿರಾಸ್ತಿಗಳನ್ನು ಮಾರಾಟ ಮಾಡಲು ಕ್ರಮ ಮುಂದುವರೆಸಲಾಗುತ್ತಿದೆ.**

**5.** ಲೆಕ್ಕಪರಿಶೋಧಕರ ವರದಿ ಪುಸ್ತಕದ ಪುಟ ಸಂಖ್ಯೆ 70ರಲ್ಲಿ ಬ್ಯಾಂಕಿನಿಂದ ಸುಸ್ತಿ ಸಾಲ ವಸೂಲಿಗೆ ದಾವೆ ಹೂಡಿರುವ ಬಗ್ಗೆ ವಿವರಗಳಿದ್ದು ಡಿಕ್ರಿಯಲ್ಲಿ 24 ಪ್ರಕರಣಗಳಿದ್ದು ಅದರ ಮೊತ್ತ 21.42 ಕೋಟಿ ಇದ್ದು, ಈ ಪ್ರಕರಣಗಳಲ್ಲಿ EP ಮಾಡಿರುವ ಬಗ್ಗೆ ವಿವರಣೆ ನೀಡುವುದು ಮತ್ತು ಮೇಲ್ಕಂಡ 24 ಕೇಸ್‌ಗಳ ವಿವರಣೆ ಕೊಡುವುದು ಹಾಗೂ EP ಯಲ್ಲಿ 30 ಪ್ರಕರಣಗಳಿದ್ದು 10.42 ಕೋಟಿ ವಸೂಲಾಗದ ಮೊತ್ತವಿರುತ್ತದೆ. ಈ ವಸೂಲಾಗದೆ ಮುಂದುವರೆದಿರುವ ಸಾಲಗಾರರ ಬಗ್ಗೆ ಮಾಹಿತೆಯನ್ನು ಕೊಡುವುದು.

**ಸಮಾಧಾನ :– ಪತ್ರದಲ್ಲಿ ತಿಳಿಸಿರುವ ಒಟ್ಟಾರೆ ಪ್ರಕರಣಗಳಲ್ಲಿ ದಾವೆ (ABN) ಹೂಡಿರುವ 9 ಪ್ರಕರಣಗಳ ಪೈಕಿ 1 ಪ್ರಕರಣವನ್ನು SARFAESI ಕಾಯಿದೆಯಡಿ ಕ್ರಮಕೈಗೊಂಡು ನ್ಯಾಯಾಲಯದಿಂದ ಕಲಂ 14 ರ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ 1 ಕ್ಕೆ ನ್ಯಾಯಾಲಯದ ತಡೆಯಾಜ್ಞೆ ಇದೆ, 1 ಪ್ರಕರಣಕ್ಕೆ ಸರ್ಫೇಸಿ ಕಾಯಿದೆಯಡಿ ಕಲಂ 14 ರ ಆದೇಶವನ್ನು ಪಡೆಯಲಾಗಿದ್ದು, ಸ್ವತ್ತನ್ನು ಭೌತಿಕ ವಶಕ್ಕೆ ಪಡೆದು ಮಾರಾಟ ಮಾಡಿ ಸಾಲವನ್ನು ಚುಕ್ತಾ ಮಾಡಿಕೊಳ್ಳಲಾಗುವುದು ಇನ್ನು ಉಳಿಕೆ 6 ಪ್ರಕರಣಗಳನ್ನು ಆರ್.ಬಿ.ಐ ನ ನೀತಿ ಮತ್ತು ನಿಯಮಾನುಸಾರ ಇರುವ ಅವಕಾಶಗಳ ಅಡಿಯಲ್ಲಿ ಟೆಕ್ನಿಕಲ್ ರೈಟ್ ಆಫ್ ಮಾಡಲಾಗಿದೆ.**

**Decree: ಪ್ರಕರಣಗಳು ಡಿಕ್ರಿಯಾಗಿದ್ದರೂ ಸಹ ಅಮಲ್ಜಾರಿ (EP) ಪ್ರಕರಣ ದಾಖಲಿಸುವ ಬದಲು ಪರಿಣಾಮಕಾರಿಯಾಗಿ ವಸೂಲಾತಿ ಕೈಗೊಳ್ಳಲು SARFAESI ಕಾಯಿದೆಯಡಿ ಕ್ರಮ ಜರುಗಿಸಲಾಗಿದ್ದು, ಒಟ್ಟು 24 ಪ್ರಕರಣಗಳ ಪೈಕಿ 1 ಪ್ರಕರಣವು 18-04-2023 ರಂದು ಚುಕ್ತಗೊಂಡಿದೆ. 4 ಪ್ರಕರಣಗಳಿಗೆ ನ್ಯಾಯಾಲಯದ ತಡೆಯಾಜ್ಞೆ ಇದೆ 1 ಪ್ರಕರಣದಲ್ಲಿ ಬ್ಯಾಂಕಿಗೆ ಈಡಾಗಿದ್ದ ಸ್ಥಿರಾಸ್ತಿಯನ್ನು ಮಾರಾಟ ಮಾಡಿ ಜಮಾ ಪಡೆಯಲಾಗಿದ್ದು ಉಳಿಕೆ ಮೊತ್ತದ ವಸೂಲಾತಿಗಾಗಿ ಸಾಲಗಾರರ ಇತರೆ ಆಸ್ತಿಯನ್ನು ಗುರುತಿಸಿ ಕ್ರಮ ಜರುಗಿಸಲಾಗುತ್ತಿದೆ, 4 ಪ್ರಕರಣಗಳ ಸ್ಥಿರಾಸ್ತಿಗಳನ್ನು ಮಾರಾಟಕ್ಕಿಡಲಾಗಿದೆ, 5 ಪ್ರಕರಣಗಳಿಗೆ ನ್ಯಾಯಾಲಯದಿಂದ ಕಲಂ 14 ರ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ, 3 ಖಾತೆದಾರರುಗಳ ವಿರುದ್ಧ ವಂಚನೆ ಪ್ರಕರಣಗಳನ್ನು ದಾಖಲಿಸಿ ಆರ್.ಬಿ.ಐ ಗೆ ಮಾಹಿತಿ ಸಲ್ಲಿಸಲಾಗಿದೆ ಇನ್ನು ಉಳಿಕೆ 6 ಪ್ರಕರಣಗಳನ್ನು ಆರ್.ಬಿ.ಐ ನ ನೀತಿ ಮತ್ತು ನಿಯಮಾನುಸಾರ ಇರುವ ಅವಕಾಶಗಳ ಅಡಿಯಲ್ಲಿ ಟೆಕ್ನಿಕಲ್ ರೈಟ್ ಆಫ್ ಮಾಡಲಾಗಿದೆ.**

**EP : 30 ಪ್ರಕರಣಗಳು ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 70 ರ ಅಡಿಯಲ್ಲಿ ಅಮಲ್ಜಾರಿ ದಾಖಲಿಸಿ ಚಾಲ್ತಿಯಲ್ಲಿದ್ದರೂ ಸಹ ತ್ವರಿತಗತಿಯಲ್ಲಿ ವಸೂಲಾತಿ ಕೈಗೊಳ್ಳಲು SARFAESI ಕಾಯಿದೆಯು ವಸೂಲಾತಿಗೆ ಅತ್ಯಂತ ಪರಿಣಾಮಕಾರಿಯಾಗಿರುವುದರಿಂದ ಈ ಕಾಯಿದೆಯಡಿ ಕ್ರಮ ಜರುಗಿಸಲಾಗಿದ್ದು, ಅಮಲ್ಜಾರಿಯಲ್ಲಿದ್ದ ಒಟ್ಟು 30 ಪ್ರಕರಣಗಳ ಪೈಕಿ 2 ಪ್ರಕರಣಗಳು ಚುಕ್ತಗೊಂಡಿದೆ, 2 ಪ್ರಕರಣಗಳಿಗೆ**

**ನ್ಯಾಯಾಲಯದ ತಡೆಯಾಜ್ಞೆ ಇದೆ, 6 ಪ್ರಕರಣದಲ್ಲಿ ಬ್ಯಾಂಕಿಗೆ ಈಡಾಗಿರುವ ಸ್ಥಿರಾಸ್ತಿಯನ್ನು ಮಾರಾಟ ಮಾರಾಟಕ್ಕಿಡಲಾಗಿದೆ, 2 ಪ್ರಕರಣಗಳಲ್ಲಿ ಸ್ಥಿರಾಸ್ತಿಯನ್ನು ಬ್ಯಾಂಕಿನ ವಶಕ್ಕೆ ಪಡೆಯಲು ನ್ಯಾಯಾಲಯದಿಂದ ಕಲಂ 14 ರ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ, 2 ಪ್ರಕರಣಗಳ ಸ್ಥಿರಾಸ್ತಿಯನ್ನು ಸದ್ಯದಲ್ಲಿಯೇ ಬ್ಯಾಂಕಿನ ಭೌತಿಕ ವಶಕ್ಕೆ ಪಡೆಯಲಾಗುವುದು ಇನ್ನು ಉಳಿಕೆ 16 ಪ್ರಕರಣಗಳನ್ನು ಆರ್.ಬಿ.ಐ ನ ನೀತಿ ಮತ್ತು ನಿಯಮಾನುಸಾರ ಇರುವ ಅವಕಾಶಗಳ ಅಡಿಯಲ್ಲಿ ಟೆಕ್ನಿಕಲ್ ರೈಟ್ ಆಫ್ ಮಾಡಲಾಗಿದೆ.**

**ಈ ರೀತಿಯಾಗಿ ಟೆಕ್ನಿಕಲ್ ರೈಟ್ ಆಫ್ ಆಗಿರುವ ಸಾಲದ ಖಾತೆಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿರುತ್ತದೆ ಹಾಗೂ ಸದರಿ ಮೊತ್ತಗಳನ್ನು ಪೂರ್ಣವಾಗಿ ವಸೂಲು ಮಾಡುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.**

**7.** ಬ್ಯಾಂಕಿನ ಸದಸ್ಯರಾದ ಶ್ರೀ ಡಿ ಆರ್ ಶಿವಕುಮಾರ್ ರವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ನೀಡಿರುವ ಪತ್ರವನ್ನು ಸಭೆಗೆ ಮಂಡಿಸುವಾಗ ಸದಸ್ಯರಾದ ಶ್ರೀ ಡಿ ಆರ್ ಶಿವಕುಮಾರ್ ರವರು ನನ್ನ ಎಲ್ಲ ಪ್ರಶ್ನೆಗಳಿಗೂ ಈಗಾಗಲೇ ಉತ್ತರ ಸಿಕ್ಕಿರುವುದರಿಂದ ನನ್ನ ಪತ್ರ ಓದುವುದು ಬೇಕಿಲ್ಲ ಎಂದು ಹೇಳಿದಾಗ ನಿರ್ದೇಶಕರಾದ ಶ್ರೀ ಎಂ ಪಿ ಮಹೇಶ್‌ರವರು ತಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆಯೇ ಎಂದು ಮತ್ತೊಮ್ಮೆ ಕೇಳಿದಾಗ, ಅವರು ಹೌದು ಎಂದು ಹೇಳಿದಾಗ ಶ್ರೀ ಎಂ ಪಿ ಮಹೇಶ್‌ರವರು ಅವರು ಈಗಾಗಲೇ ಉತ್ತರಗಳು ಸಿಕ್ಕಿದೆ ಎಂದು ಹೇಳಿರುವುದರಿಂದ ಅವರ ಪತ್ರವನ್ನು ಓದುತ್ತಿಲ್ಲ ಹಾಗೂ ಈ ಒಂದು ಸಭೆಯಲ್ಲಿ ಸದಸ್ಯರುಗಳು ಏನು ಪ್ರಶ್ನೆಯನ್ನು ಕೇಳಿದರೂ ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದೇವೆಂದು ಭಾವಿಸುತ್ತಾ ಮಹಾಸಭೆಯ ಅನುಮೋದನೆ ದೊರೆತಿದೆ ಎಂದು ಭಾವಿಸುತ್ತಾ ನಿರ್ದೇಶಕರಾದ ಎಂ ಪಿ ಮಹೇಶ್ ರವರು ತಮ್ಮ ಪತ್ರಗಳನ್ನು ಮುಗಿಸಿದಾಗ ಸದಸ್ಯರಾದ ಶ್ರೀ ಜಿ ಎಸ್ ಬಸವರಾಜು ರವರು ಸರ್ಮಪಕವಾದ ಉತ್ತರವನ್ನು ಈ ಸಭೆಯಲ್ಲಿ ಕೊಟ್ಟಿರುವುದಿಲ್ಲ ಹಾಗಾಗಿ ನಿಮ್ಮ ನಿರ್ಣಯಕ್ಕೆ ನನ್ನ ವಿರೋಧವಿದೆ ಎಂದು ಹೇಳಿದರು. ಉಳಿದ ಸದಸ್ಯರು ಶ್ರೀ ಜಿ ಎಸ್ ಬಸವರಾಜುರವರಿಗೆ ನಿಮಗೆ ಯಾವಾಗ ಒಪ್ಪಿಗೆ ಇರುತ್ತದೆ, ಯಾವಾಗಲೂ ಇರುವುದಿಲ್ಲ ಎಂದು ನಿರ್ದೇಶಕರಾದ ಎಂ ಪಿ ಮಹೇಶ್ ರವರು ಓದಿದ ಪತ್ರಗಳಿಗೆ ತಮ್ಮ ಅನುಮೋದನೆ ಸೂಚಿಸಿದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಕೆ ವಿ ಶ್ರೀನಾಥ್‌ರವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಈ ವಾರ್ಷಿಕ ಸಾಮಾನ್ಯ ಸಭೆಯು ಯಶಸ್ವಿಯಾಗಿ ನಡೆಯಲು ಕಾರಣಕರ್ತರಾದ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹೆಚ್ ಎಂ ದಿವ್ಯಾನಂದಮೂರ್ತಿ ರವರಿಗೆ ನಮ್ಮೆಲ್ಲರ ಪರವಾಗಿ ವಂದನೆಗಳನ್ನು ಸಲ್ಲಿಸುತ್ತಾ ಹಾಗೆಯೇ ಬ್ಯಾಂಕಿನ (ಪ್ರ) ಉಪಾಧ್ಯಕ್ಷರಾದ ಶ್ರೀಯುತ ಸಿ ಆರ್ ನಟರಾಜ್‌ರವರಿಗೂ ಹಾಗೇ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹೃದಯ ಪೂರ್ವಕ ವಂದನೆಗಳನ್ನು ಸಲ್ಲಿಸಿದರು, ಮುಖ್ಯಕಾರ್ಯನಿರ್ವಾಹರಿಗೆ ಹಾಗೂ ಸಿಬ್ಬಂದಿ ವೃಂದದವರೆಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು ಹಾಗೂ ಮುಖ್ಯವಾಗಿ ನಮ್ಮ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿ ನಡೆಯಲು ಸಹಕಾರ ನೀಡಿರುವ ಬ್ಯಾಂಕಿನ ಆಧಾರ ಸ್ಥಂಭಗಳಾದ ಸದಸ್ಯರುಗಳಿಗೂ ಸಹ ಕಾರ್ಯಕಾರಿ ಮಂಡಳಿಯ ಪರವಾಗಿ ವಂದಿಸುವುದರೊಂದಿಗೆ ಬ್ಯಾಂಕಿನ 60ನೇ ವರ್ಷದ ಸಾಮಾನ್ಯ ಸಭೆಯು ವಿದ್ಯುಕ್ತವಾಗಿ ಮುಕ್ತಾಯವಾಯಿತು. ನಂತರ ಕೊನೆಯಲ್ಲಿ ಧಾನ್ಯ ವರ್ತಕರ ಸಂಘ ಮತ್ತು ಧಾನ್ಯ ವರ್ತಕರ ಎಜುಕೇಷನ್ ಸೊಸೈಟಿ ಕಡೆಯಿಂದ ಬ್ಯಾಂಕಿನ ಅಧ್ಯಕ್ಷರಿಗೆ ಮತ್ತು ಆಡಳಿತ ಮಂಡಳಿಯವರಿಗೆ ಹೂಗುಚ್ಛ ನೀಡಿ ಅಭಿನಂದನೆ ಸಲ್ಲಿಸಲಾಯಿತು.

ಸಹಿ/–
**(ಜೆ ಸುರೇಶ್)**
**ಮುಖ್ಯ ಕಾರ್ಯನಿರ್ವಾಹಕರು**

ಸಹಿ/–
**(ಹೆಚ್ ಎಂ ದಿವ್ಯಾನಂದಮೂರ್ತಿ)**
**ಅಧ್ಯಕ್ಷರು**

:ನಕಲು:

**(ಜೆ ಸುರೇಶ್)**
**ಮುಖ್ಯ ಕಾರ್ಯನಿರ್ವಾಹಕರು**

# TGMC BANK

61 years of Professional Banking

## ಠೇವಣಿಗಳ ಮೇಲೆ ಅತ್ಯಾಕರ್ಷಕ ಬಡ್ಡಿದರಗಳು

| ವಿವರಗಳು | ಬಡ್ಡಿದರಗಳು |
|---|---|
| 15 ದಿನಗಳಿಂದ 90 ದಿನಗಳವರೆಗೆ | 04.50 % |
| 91 ದಿನಗಳಿಂದ 180 ದಿನಗಳವರೆಗೆ | 05.00 % |
| 181 ದಿನಗಳಿಂದ 1 ವರ್ಷದವರೆಗೆ | 06.75 % |
| 1 ವರ್ಷ ಮೇಲ್ಪಟ್ಟು 2 ವರ್ಷಗಳವರೆಗೆ | 07.00 % |
| 2 ವರ್ಷಗಳ ಮೇಲ್ಪಟ್ಟು 5 ವರ್ಷಗಳವರೆಗೆ | 07.50 % |

ಹಿರಿಯ ನಾಗರೀಕರ 1 ವರ್ಷ ಮೇಲ್ಪಟ್ಟ ಠೇವಣಿಗಳಿಗೆ 0.50% ರಷ್ಟು ಹೆಚ್ಚುವರಿ ಬಡ್ಡಿ ದರ ನೀಡಲಾಗುವುದು

## ಉಳಿತಾಯ ಖಾತೆ ಬಡ್ಡಿದರ

| ವಿವರಗಳು | ಬಡ್ಡಿದರಗಳು |
|---|---|
| ಉಳಿತಾಯ ಖಾತೆ | 03.50% |

## ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರಗಳು

| ಕ್ರ.ಸಂ. | ವಿವರಗಳು | ಬಡ್ಡಿದರಗಳು |
|---|---|---|
| 1 | ಗೃಹಸಾಲ ರೂ. 35,00,000/- ಗಳವರೆಗೆ | 08.00% |
| | ಗೃಹಸಾಲ ರೂ. 35,00,000/- ಮೇಲ್ಪಟ್ಟು ರೂ. 1,40,00,000/- ಗಳವರೆಗೆ | 08.25% |
| 2 | ಮನೆ ನಿರ್ಮಿಸುವ ಸಲುವಾಗಿ ನಿವೇಶನ ಖರೀದಿಸಲು ಸಾಲ ಸೌಲಭ್ಯ | 08.50% |
| 3 | ಚಿನ್ನಾಭರಣ ಸಾಲ | 08.25% |
| 4 | ಚಿನ್ನಾಭರಣಗಳ ಮೇಲಿನ ಮೀರೆಳೆತ ಸಾಲ | 08.75% |
| 5 | MSME Loan | 10.00% |
| 6 | ಸರಕು ಅಡಮಾನ ಸಾಲ ರೂ. 5 ಕೋಟಿಗಳವರೆಗೆ | 08.50% |
| | ಸರಕು ಅಡಮಾನ ಸಾಲ ರೂ. 5 ಕೋಟಿಗಳ ಮೇಲ್ಪಟ್ಟು | 08.00% |
| 7 | ಆಸ್ತಿ ಅಡಮಾನ ಸಾಲ / Rental Discounting Scheme | 11.00% |
| 8 | ವಾಣಿಜ್ಯ ಕಟ್ಟಡ ನಿರ್ಮಿಸಲು, ಖಾಲಿ ನಿವೇಶನ ಆಧಾರದ ಮೇಲೆ ಸಾಲ Loan for Real Estate,Business,SSI Loan / ವಾಯಿದೆ ಸಾಲ / ಮೆಷಿನರಿ ಸಾಲ | 11.50% |
| 9 | ನಗದುದ್ದರಿ/ಮೀರೆಳೆತ ಸಾಲ (Cash Credit / Over Draft ) | 11.50% |
| 10 | ವಾಹನ ಸಾಲ | |
| | ದ್ವಿಚಕ್ರ ವಾಹನ ಸಾಲ | 11.50% |
| | ಹೊಸ ಕಾರು ಸಾಲ (ಸ್ವಂತ ಉಪಯೋಗಕ್ಕಾಗಿ) | 08.25% |
| | ಹೊಸ ಕಾರು ಸಾಲ (ಸ್ವಂತ ಉಪಯೋಗಕ್ಕಾಗಿ) (ಕೃಷಿ ಆದಾಯದ ಮೇಲೆ) * | 09.00% |
| | ಹಳೆಯ ವಾಹನ ಸಾಲ (ಸ್ವಂತ ಉಪಯೋಗಕ್ಕಾಗಿ) | 13.00% |
| | ಹೊಸ ವಾಹನ ಸಾಲ ( ಟ್ಯಾಕ್ಸಿ) | 08.50% |
| | ಹೊಸ ವಾಹನ ಸಾಲ ( ವಾಣಿಜ್ಯ ಉಪಯೋಗಕ್ಕಾಗಿ) | 10.00% |
| | ಹಳೆಯ ವಾಹನ ಸಾಲ ( ವಾಣಿಜ್ಯ ಉಪಯೋಗಕ್ಕಾಗಿ) | 14.50% |
| 11 | ವೇತನಾಧಾರ ಸಾಲ | 12.00% |
| 12 | LIC / NSC ಆಧಾರದ ಮೇಲೆ ಸಾಲ | 11.00% |
| 13 | ಗೃಹ ಉಪಯೋಗಿ ವಸ್ತುಗಳ ಆಧಾರದ ಮೇಲೆ ಸಾಲ | 13.50% |

UPI ಯು.ಪಿ.ಐ. ಸೌಲಭ್ಯ ದೊರೆಯುತ್ತದೆ.

# TGMC BANK

61 years of Professional Banking

## ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು-572 103. ದೂ : 0816-4021102/03 Website : www.tgmcbank.com, E-mail: tgmc.ho@tgmcbank.com.

### ನಿಮ್ಮ ಕನಸನ್ನು ನನಸಾಗಿಸಲು ಸುವರ್ಣಾವಕಾಶ




* ಷರತ್ತುಗಳು ಅನ್ವಯ

**ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ದೊರೆಯುತ್ತದೆ.**

# TGMC Bank Ltd.,

B.H. Road, TUMKUR - 572 103.

## HIGHLIGHTS

*Rs. in Lakhs*

| Total Business Crossed | Profit (Before Tax) and provisions | Interest Income | Interest Expenditure | Non-Interest Income | Non-Interest Expenditure | Net Profit per Employee |
|---|---|---|---|---|---|---|
| 248903.08 | 6916.82 | 17710.86 | 9716.85 | 2591.21 | 3668.41 | 26.59 |

| Business per Employee | Earning Assets | Total Income/ Working Capital | C.R.A.R. | Return on Assets | Net Profit/ Total Assets | C.D. Ratio |
|---|---|---|---|---|---|---|
| 1338.19 | 181745.83 | 11.29% | 21.43% | 2.64% | 2.29% | 69.84% |